# ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬರುವ ಕ್ಷೇತ್ರ ಇಲಾಖೆಗಳಲ್ಲಿ ಜನರಿಗೆ ಸಿಗುವ ಸೌಲಭ್ಯ ಮತ್ತು ಯೋಜನೆಗಳ ಮಾಹಿತಿ

## ಪರಿವಿಡಿ


| ಕ್ರಮ ಸಂಖ್ಯೆ | ವಿವರ | ಪುಟ ಸಂಖ್ಯೆ |
|---|---|---|
| 01 | ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ | 02–08 |
| 02 | ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ | 09–14 |
| 03 | ರಾಷ್ಟ್ರೀಯ ಜೀವನೋಪಾಯ ಅಭಿಯಾನ (ಗ್ರಾಮೀಣ) | 15–20 |
| 04 | ರಾಷ್ಟ್ರೀಯ ಜೀವನೋಪಾಯ ಅಭಿಯಾನ (ನಗರ) | 21–28 |
| 05 | ಕರ್ನಾಟಕ ಉದ್ಯಮಶೀಲತಾ ಅಬಿವೃದ್ಧಿ ಕೇಂದ್ರ (ಸಿಡಾಕ್) | 29–32 |
| 06 | ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ | 33–34 |
| 07 | ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ | 35–40 |

# ಕೈಗಾರಿಕೆ, ತರಬೇತಿ ಮತ್ತು ಉದ್ಯೋಗ ಇಲಾಖೆಯ ಸಂಕ್ಷಿಪ್ತ ವರದಿ

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಡಿಯಲ್ಲಿ ರಾಜ್ಯದಲ್ಲಿ 270 ಸರ್ಕಾರಿ, 192 ಖಾಸಗಿ ಅನುದಾನಿತ ಹಾಗೂ 1039 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಎಸ್.ಎಸ್.ಎಲ್.ಸಿ. ಉತ್ತೀರ್ಣ ಹಾಗೂ ಅನುತ್ತೀರ್ಣ ಅಭ್ಯರ್ಥಿಗಳು ವಿದ್ಯಾರ್ಹತೆಗನುಸಾರ DGT, ನವದೆಹಲಿ, ಇವರು ನಿಗಧಿಪಡಿಸಿರುವ 51 ತಾಂತ್ರಿಕ ಹಾಗೂ ತಾಂತ್ರಿಕೇತರ ವೃತ್ತಿಗಳಿಗೆ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಬಹುದಾಗಿರುತ್ತದೆ. 2012 ರಿಂದ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕೈ.ತ.ಸಂಸ್ಥೆಗಳಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, DGT, ನವದೆಹಲಿ, ಇವರು ನಿಗಧಿಪಡಿಸಿರುವ 51 ವೃತ್ತಿಗಳಲ್ಲಿ 5 ವೃತ್ತಿಗಳಿಗೆ ಮಾತ್ರ ಎಸ್.ಎಸ್.ಎಲ್.ಸಿ. ಅನುತ್ತೀರ್ಣ / 8ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ಹಾಗೂ ಉಳಿದ ವೃತ್ತಿಗಳಿಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆಯ್ಕೆಗೊಂಡ ಅರ್ಹ ಅಭ್ಯರ್ಥಿಗಳು ಸರ್ಕಾರ ನಿಗಧಿಪಡಿಸಿರುವ ಬೋಧನಾ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆದ ನಂತರ ಆಗಸ್ಟ್ ಮಾಹೆಯಲ್ಲಿ ನಿಯತ ತರಗತಿಗಳನ್ನು ಪ್ರಾರಂಭಿಸಲಾಗುತ್ತದೆ. ಆಗಸ್ಟ್-2022 ರ ಪ್ರವೇಶದ ವಿವರಗಳನ್ನು **ಕೋಷ್ಟಕ - 16.11** ರಲ್ಲಿ ನೀಡಲಾಗಿದೆ.

**ಸರ್ಕಾರಿ ಮತ್ತು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿವರಗಳು.**

| ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರಗಳು | ಐಟಿಐಗಳ ಸಂಖ್ಯೆ | ಮಂಜೂರಾದ ಸೀಟುಗಳು | ದಾಖಲಾತಿ | ಖಾಲಿ ಸೀಟುಗಳು | ಶೇಕಡವಾರು ದಾಖಲಾತಿಗಳು |
|---|---|---|---|---|---|
| ಸರ್ಕಾರಿ (ಎನ್‌ಸಿವಿಟಿ) | 270 | 45140 | 31290 | 13850 | 69.32 |
| ಜಿಐಎ (ಎನ್‌ಸಿವಿಟಿ) | 192 | 17740 | 16100 | 1640 | 90.76 |
| ಖಾಸಗಿ (ಎನ್‌ಸಿವಿಟಿ) | 1039 | 54904 | 28350 | 26554 | 51.64 |
| **ಒಟ್ಟು** | **1501** | **117784** | **75740** | **42044** | **64.30** |

**ಶಿಶಿಕ್ಷು ತರಬೇತಿ ಯೋಜನೆ**

ರಾಜ್ಯದಲ್ಲಿ 1961ರ ಶಿಶಿಕ್ಷು ಕಾಯಿದೆಯನುಸಾರ 337 ಉದ್ದಿಮೆಗಳಲ್ಲಿ 145784 ಶಿಶಿಕ್ಷುಗಳಿಗೆ ತರಬೇತಿ ನೀಡಲಾಗುತ್ತಿದೆ. ಕೇಂದ್ರ ಸರ್ಕಾರವು ಶಿಶಿಕ್ಷು ಕಾಯಿದೆಗೆ ತಿದ್ದುಪಡಿ ತಂದಿದ್ದು, ಉದ್ಯಮ ಸ್ನೇಹಿ ನಿಯಮಗಳನ್ನು ಅನುಷ್ಠಾನಗೊಳಿಸಿದ್ದು, ಮಾನವಶಕ್ತಿಯ ಸಾಮರ್ಥ್ಯ 40 ಕ್ಕಿಂತ ಹೆಚ್ಚಿದೆ. ಪ್ರತಿ ಉದ್ಯಮವು ಉದ್ಯೋಗಿಗಳ ಒಟ್ಟು ಸಂಖ್ಯೆಗಳ ಆಧಾರದಲ್ಲಿ ಶೇ.2.5% ರಿಂದ ಶೇ.15% ರಷ್ಟು ಶಿಶಿಕ್ಷುಗಳನ್ನು www.ncvt.gov.in/apprenticeship.portal ನಲ್ಲಿ ನೋಂದಾಯಿಸಿಕೊಂಡು ತರಬೇತಿ ನೀಡಲು ಅವಕಾಶವಿರುತ್ತದೆ. ಹೆಚ್ಚು ಶಿಶಿಕ್ಷುಗಳನ್ನು ಆಕರ್ಷಿಸಲು ಶಿಷ್ಯವೇತನವನ್ನು ಆಯಾ ಉದ್ಯಮಗಳು ಕನಿಷ್ಠ ರೂ.6,000/- ದಿಂದ ರೂ.7,000/-ಗಳ ವರೆಗೆ ಶಿಷ್ಯವೇತನವಾಗಿ ಪಾವತಿಸಬೇಕಿರುತ್ತದೆ. ಇದರಲ್ಲಿ ಕೇಂದ್ರ ಸರ್ಕಾರವು ದಿನಾಂಕ: 19-08-2016 ರಿಂದ ಜಾರಿಗೊಳಿಸಿರುವ NAPS ಯೋಜನೆಯಡಿ ಶೇ.25% ರಷ್ಟು ಅಥವಾ ಗರಿಷ್ಠ ರೂ.1500/- ರಂತೆ ಪ್ರತಿ ಶಿಶಿಕ್ಷುವಿಗೆ ಪ್ರತಿ ತಿಂಗಳಿಗೆ ಉದ್ಯಮಗಳಿಗೆ ಮರುಪಾವತಿಸುತ್ತದೆ. ಇದರೊಂದಿಗೆ ರಾಜ್ಯ ಸರ್ಕಾರದ ವತಿಯಿಂದ ಕರ್ನಾಟಕ ಶಿಶಿಕ್ಷು ತರಬೇತಿ ಯೋಜನೆಯಡಿಯಲ್ಲಿ (KATS)ರೂ.1500/- ರಂತೆ ಪ್ರತಿ ಶಿಶಿಕ್ಷುವಿಗೆ ಪ್ರತಿ ತಿಂಗಳಿಗೆ ಆಯಾ ಉದ್ಯಮಕ್ಕೆ ಮರುಪಾವತಿಗೆ 2022-23 ನೇ ಸಾಲಿನಿಂದ ಅನ್ವಯವಾಗುವಂತೆ ಜೂನ್ 2022 ರ ಅಂತ್ಯದಲ್ಲಿ ಶಿಶಿಕ್ಷು ತರಬೇತಿ ಹೊಂದುತ್ತಿರುವವರಿಗೆ ಆದೇಶಿಸಿರುತ್ತಾರೆ.

## 2022-23ನೇ ಸಾಲಿನ ಕರ್ನಾಟಕದ ಶಿಶಿಕ್ಷು ತರಬೇತಿ ವಿವರ

| ಸಂಸ್ಥೆಗಳು | ಗುರಿ | ಸಾಧನೆ | ಬಾಕಿ |
|---|---|---|---|
| ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ | 20000 | 13359 | 5422 |
| ರಾಜ್ಯ ಪಬ್ಲಿಕ್ ಸೆಕ್ಟರ್ ಯುನಿಟ್ | - | 1219 | - |
| ಕೇಂದ್ರ ಪಬ್ಲಿಕ್ ಸೆಕ್ಟರ್ ಯುನಿಟ್ | - | - | - |
| ಕೌಶಲ್ಯ ಮಿಷನ್ | - | - | - |
| ಒಟ್ಟು | 20000 | 14578 | 5422 |

# ಉದ್ಯೋಗ ವಿಭಾಗ

## ಉದ್ಯೋಗ ಸೇವೆ

### 1. ಸಂಕ್ಷಿಪ್ತ ಇತಿಹಾಸ :-

ರಾಷ್ಟ್ರೀಯ ಉದ್ಯೋಗ ಸೇವೆಯು ಜುಲೈ 1945 ರಲ್ಲಿ ವಿಶ್ವ ಸಮರದ ನಂತರ ತೊಂದರೆಗೀಡಾದ ಸೈನಿಕರಿಗೆ ಪುನರ್ವಸತಿಯನ್ನು ಕಲ್ಪಿಸುವ ಸಲುವಾಗಿ ಅಸ್ತಿತ್ವಕ್ಕೆ ಬಂದಿತು. ಈ ಸೇವೆ 1946 ರ ಅಂತ್ಯದವರೆಗೆ ಅಂತಹ ಮಾಜಿ ಸೈನಿಕರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡುವುದಕ್ಕೆ ಸೀಮಿತವಾಗಿತ್ತು. 1948 ರ ಪ್ರಾರಂಭದಲ್ಲಿ ಜನತೆಯ ಆಶೋತ್ತರಗಳಿಗೆ ಸ್ಪಂದಿಸುವ ಮೂಲಕ ಆ ವೇಳೆಗೆ ಅಸ್ತಿತ್ವಕ್ಕೆ ಬಂದಿದ್ದ ಉದ್ಯೋಗ ವಿನಿಮಯ ಕೇಂದ್ರಗಳ ಸೇವೆ ಎಲ್ಲರಿಗೂ ಪ್ರಾಪ್ತವಾಗುವಂತೆ ವಿಸ್ತರಿಸಲಾಯಿತು.

ಪ್ರಾರಂಭದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು ಕೇಂದ್ರ ಸರ್ಕಾರದಿಂದ ಸ್ಥಾಪಿಸಲ್ಪಟ್ಟು ಅದರ ಆಡಳಿತಕ್ಕೆ ಒಳಪಟ್ಟಿತ್ತು. ತದನಂತರ, ಕೇಂದ್ರ ಸರ್ಕಾರವು ಉದ್ಯೋಗ ವಿನಿಮಯ ಕೇಂದ್ರಗಳ ದೈನಂದಿನ ಆಡಳಿತವನ್ನು ಆಯಾ ರಾಜ್ಯ ಸರ್ಕಾರದ ಯೋಜನೆ ಮತ್ತು ಕಾರ್ಯಕ್ರಮಗಳೊಡನೆ ಸಮಯೋಚಿತವಾಗುವಂತಾಗಲು ದಿನಾಂಕ: 1-11-1956 ರಲ್ಲಿ ರಾಜ್ಯ ಸರ್ಕಾರಗಳಿಗೆ ವಹಿಸಿಕೊಟ್ಟಿತು. ಆದಾಗ್ಯೂ, ಸಂಸ್ಥೆಯ ರಾಷ್ಟ್ರೀಯ ಸ್ವಭಾವ ಮತ್ತು ಏಕರೂಪತೆಯನ್ನು ಮುಂದುವರಿಸಿಕೊಂಡು ಬರುವ ದೃಷ್ಟಿಯಿಂದ ಮುಖ್ಯವಾಗಿ ನೀತಿ ನಿಯಮಗಳ ರೂಪಿಸುವಿಕೆ, ಸಿಬ್ಬಂದಿ ತರಬೇತಿ, ಉದ್ಯೋಗ ವಿನಿಮಯ ಕೇಂದ್ರಗಳ ಮೌಲ್ಯಮಾಪನ ಇತ್ಯಾದಿಗಳನ್ನು ಕೇಂದ್ರ ಸರ್ಕಾರದ ಪರಿಧಿಯಲ್ಲಿ ಮುಂದುವರಿಸಿಕೊಂಡು ಹೋಗಲಾಗುತ್ತಿದೆ.

### 2. ಕರ್ನಾಟಕದಲ್ಲಿ ಉದ್ಯೋಗ ಸೇವೆ:-

1945 ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಒಂದು ಉದ್ಯೋಗ ವಿನಿಮಯ ಕೇಂದ್ರವನ್ನು ತೆರೆಯುವುದರ ಮೂಲಕ ಉದ್ಯೋಗ ಸೇವೆಯು ಕರ್ನಾಟಕದಲ್ಲಿ ಪ್ರಾರಂಭಗೊಂಡಿತು. 1952 ರಲ್ಲಿ ಮೈಸೂರಿನಲ್ಲಿ ಇನ್ನೊಂದು ಕೇಂದ್ರವು ತೆರೆಯಲ್ಪಟ್ಟು, 1956 ರ ರಾಜ್ಯ ಏಕೀಕರಣದ ನಂತರ ಹಂತ ಹಂತವಾಗಿ ಉದ್ಯೋಗ ವಿನಿಮಯ ಕೇಂದ್ರಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಸ್ತಿತ್ವಕ್ಕೆ ಬಂದವು. ಪ್ರಸ್ತುತ (ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರಗಳೂ ಸೇರಿದಂತೆ) ರಾಜ್ಯದಲ್ಲಿ ಒಟ್ಟು 40 ಉದ್ಯೋಗ ವಿನಿಮಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

### 3. ವ್ಯವಸ್ಥೆ :-

ಇಲಾಖೆಯ ನಿರ್ದೇಶನಾಲಯದಲ್ಲಿ ಆಯುಕ್ತರಿಗೆ ಸಹಾಯಕರಾಗಿ ಉದ್ಯೋಗ ವಿಭಾಗದಲ್ಲಿ ಓರ್ವ ಜಂಟಿ ನಿರ್ದೇಶಕರು, ಇಬ್ಬರು ಉಪ ನಿರ್ದೇಶಕರು ಮತ್ತು ಇಬ್ಬರು ಸಹಾಯಕ ನಿರ್ದೇಶಕರು ಕಾರ್ಯನಿರತರಾಗಿರುತ್ತಾರೆ. ಕ್ಷೇತ್ರ ಮಟ್ಟದಲ್ಲಿ ಪ್ರಮುಖ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳು, ವಿಶೇಷ ಘಟಕಗಳು, ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರಗಳು – ಈ ಕಚೇರಿಗಳಲ್ಲಿ ಮುಖ್ಯಸ್ಥರಾಗಿ 'ಎ' ಗುಂಪಿನ ಸಹಾಯಕ ನಿರ್ದೇಶಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇತರೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗಾಧಿಕಾರಿಗಳು ("ಬಿ" ಗುಂಪಿನ ಅಧಿಕಾರಿಗಳು) ಮುಖ್ಯಸ್ಥರಾಗಿರುತ್ತಾರೆ.

4. *ಪ್ಲೇಸ್‌ಮೆಂಟ್ ಕಾರ್ಯಚಟುವಟಿಕೆ:-*

ವರದಿಯ ವರ್ಷದಲ್ಲಿ ನಿಯೋಜಕರಿಗೆ ಮತ್ತು ಅಭ್ಯರ್ಥಿಗಳಿಗೆ ಉದ್ಯೋಗ ಸೇವೆ ಒದಗಿಸುವುದನ್ನು ಈ ಕೆಳಕಂಡ ಉದ್ಯೋಗ ವಿನಿಮಯ ಕೇಂದ್ರಗಳು ಮುಂದುವರಿಸಿಕೊಂಡು ಬಂದಿವೆ.

| | |
|---|---|
| 29 | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳು. |
| 1 | ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕೇಂದ್ರ, |
| 1 | ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕೇಂದ್ರ, |
| 1 | ಯೋಜನಾ ಉದ್ಯೋಗ ವಿನಿಮಯ ಕೇಂದ್ರ, |
| 1 | ರಾಜ್ಯದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿಶೇಷ ಉದ್ಯೋಗ ವಿನಿಮಯ ಕೇಂದ್ರ, |
| 1 | ಅಂಗವಿಕಲರ ವಿಶೇಷ ಉದ್ಯೋಗ ವಿನಿಮಯ ಕೇಂದ್ರ ಮತ್ತು |
| 6 | ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರಗಳು. |

1959 ರ ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ 59 (ಸೆಂಟ್ರಲ್ ಆಕ್ಟ್ ನಂ.31) ಆಜ್ಞಾಪಕ ಉಪಬಂಧಗಳ ಪ್ರಕಾರ ನಿಯೋಜಕರು ತಮ್ಮಲ್ಲಿನ ಖಾಲಿ ುದ್ದೆಗಳನ್ನು ಭರ್ತಿ ಮಾಡುವ ಪೂರ್ವದಲ್ಲಿ ಉದ್ಯೋಗ ವಿನಿಮಯ ಕೇಂದ್ರಕ್ಕೆ ಅಧಿಸೂಚಿಸುವುದು ಕಡ್ಡಾಯ. ದರೆ, ಉದ್ಯೋಗ ವಿನಿಮಯ ಕೇಂದ್ರದ ಮೂಲಕವೇ ಭರ್ತಿ ಮಾಡಬೇಕೆಂಬ ಯಾವುದೇ ಷರತ್ತು ಇರುವುದಿಲ್ಲ.

2022 ನೇ ಸಾಲಿನಲ್ಲಿ ಸಾರ್ವಜನಿಕ ಹಾಗು ಖಾಸಗಿ ವಲಯದ 226 ಹುದ್ದೆಗಳು ಅಧಿಸೂಚಿಸಲ್ಪಟ್ಟಿದ್ದು, 9 ಅಭ್ಯರ್ಥಿಗಳನ್ನು ಪುರಸ್ಕರಿಸಲಾಯಿತು. ಡಿಸೆಂಬರ್, 2022ರ ಅಂತ್ಯದವರೆವಿಗೆ ಒದಗಿ ಬಂದಿರುವ ಆಯ್ಕೆ ಿತಾಂಶಗಳ ಪ್ರಕಾರ ಒಟ್ಟು 14607 ಅಭ್ಯರ್ಥಿಗಳಿಗೆ (ಉದ್ಯೋಗ ಮೇಳಗಳಲ್ಲಿನ ನೇಮಕಾತಿಯೂ ಸೇರಿದಂತೆ) ದ್ಯೋಗ ದೊರಕಿಸಿ ಕೊಡಲಾಗಿದೆ. ಈ ಸಾಧನೆಯನ್ನು ಉದ್ಯೋಗ ವಿನಿಮಯ ಕೇಂದ್ರಗಳ ಸೀಮಿತ ರ್ಯಾಚರಣೆ ಹಾಗೂ ಅವುಗಳು ನೀಡುತ್ತಿರುವ ಉಚಿತ ಮತ್ತು ಸ್ವಯಂ ಪ್ರೇರಿತ ಉದ್ಯೋಗ ಸೇವೆಯ ್ನೆಲೆಯಲ್ಲಿ ಪರಿಗಣಿಸಬೇಕಿರುತ್ತದೆ.

**2. ಪುರಸ್ಕರಣಾ ಕಾರ್ಯಚಟುವಟಿಕೆ:-**

ಪುರಸ್ಕರಣಾ ಕಾರ್ಯಚಟುವಟಿಕೆಗೆ ಸಂಬಂಧಿಸಿದಂತೆ 2022 ರಲ್ಲಿ ಅಂಕಿ ಅಂಶಗಳ ಮಾಹಿತಿ ಈ ಂದಿನಂತಿದೆ:-

| | ಕಾರ್ಯ ಚಟುವಟಿಕೆ. | ಅಂಗ ವಿಕಲರು | ಇತರೆ. | ಒಟ್ಟು. |
|---|---|---|---|---|
| | 1 | 2 | 3 | 4 |
| 1. | ನೋಂದಣಿ. | 114 | 51,999 | 52,113 |
| 2. | ಅಧಿಸೂಚಿಸಲ್ಪಟ್ಟ ಹುದ್ದೆಗಳು. | 02 | 224 | 226 |
| 3. | ಪುರಸ್ಕರಣೆ. | 17 | 332 | 349 |
| 4. | ಪ್ಲೇಸ್‌ಮೆಂಟ್. | - | 14607 | 14607 |
| 5. | [illegible] | | | |

### 3. ಚಾಲ್ತಿ ದಾಖಲೆ ವಿಶ್ಲೇಷಣೆ:-

2022 ನೇ ಸಾಲಿನಲ್ಲಿ ನೋಂದಾಯಿಸಲ್ಪಟ್ಟ ಅಭ್ಯರ್ಥಿಗಳ ಸಂಖ್ಯೆ 52,113 ಆಗಿರುತ್ತದೆ. ತತ್ಪರಿಣಾಮವಾಗಿ ಜೀವವಹಿಯಲ್ಲಿನ ಒಟ್ಟಾರೆ ಉದ್ಯೋಗಾಕಾಂಕ್ಷಿಗಳ ಸಂಖ್ಯೆ 2,41,497 ಆಗಿದೆ. ಚಾಲ್ತಿ ದಾಖಲೆಯಲ್ಲಿನ ಉದ್ಯೋಗಾಕಾಂಕ್ಷಿಗಳ ಶೈಕ್ಷಣಿಕ ವಿಂಗಡಣಾ ಆಧಾರಿತ ಮಾಹಿತಿ ಈ ಮುಂದಿನಂತಿದೆ:-

| | | |
|---|---|---|
| 1. | ಎಲ್ಲಾ ಸ್ನಾತಕೋತ್ತರ ಪದವೀಧರರು. | 2,755 |
| 2. | ಎಲ್ಲಾ ಪದವೀಧರರು. | 36,099 |
| 3. | ಡಿಪ್ಲೊಮಾದಾರರು. | 10,545 |
| 4. | ಐ.ಟಿ.ಐ./ಎ.ಟಿ.ಎಸ್. ಪ್ರಮಾಣ ಪತ್ರ ಹೊಂದಿದವರು. | 41,082 |
| 5. | ಮೆಟ್ರಿಕ್ಯುಲೇಷನ್ ಹಾಗು ಹೆಚ್ಚಿನ ವಿದ್ಯಾರ್ಹತೆ ಹೊಂದಿರುವವರು. | 1,18,464 |
| 6. | ಮೆಟ್ರಿಕ್ಯುಲೇಷನ್‌ವರೆಗೆ ವಿವಿಧ ಹಂತದಲ್ಲಿ ವಿದ್ಯಾರ್ಹತೆ ಹೊಂದಿರುವವರು. | 16,543 |
| 7. | ಅನಕ್ಷರಸ್ಥರು ಮತ್ತಿತರರು. | 16,009 |
| | ಒಟ್ಟು | **2,41,497** |

### 4. ವೃತ್ತಿ ಮಾರ್ಗದರ್ಶನ:-

ಸಾರ್ವಜನಿಕ ವಲಯದಲ್ಲಿ ಇಳಿಮುಖವಾಗುತ್ತಿರುವ ಉದ್ಯೋಗಾವಕಾಶ ಹಾಗು ಖಾಸಗಿ ವಲಯದಲ್ಲಿ ಹೆಚ್ಚಿನ ಕುಶಲತೆ ಮತ್ತು ವೃತ್ತಿ ಅನುಭವವುಳ್ಳ ಜನಶಕ್ತಿಯ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ಪ್ರಾಮುಖ್ಯತೆ ಗಳಿಸಿದೆ. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿರುವ ವೃತ್ತಿ ಮಾರ್ಗದರ್ಶನ ಘಟಕಗಳು ಮತ್ತು ರಾಜ್ಯದ ಆಯಾ ವಿಶ್ವವಿದ್ಯಾಲಯದ ಸರಹದ್ದಿನಲ್ಲಿರುವ ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರಗಳು ಈ ಅಂಶವನ್ನು ವೃತ್ತಿ ಸಮಾಲೋಚನೆ, ವೃತ್ತಿ ಸಮ್ಮೇಳನ / ವೃತ್ತಿ ಸಾಹಿತ್ಯ ಪ್ರದರ್ಶನ – ಇತ್ಯಾದಿ ಕಾರ್ಯಕ್ರಮಗಳ ಮೂಲಕ ಸಾದರಪಡಿಸುತ್ತಿವೆ. ಈ ಕಾರ್ಯಕ್ರಮಗಳು ಕಚೇರಿಯಲ್ಲಿ ಮತ್ತು ಹೊರಗಿನ ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳ ಹಾಗು ಸ್ವಯಂ ಸೇವಾ ಸಂಸ್ಥೆಗಳ ಸಹಕಾರ ಮತ್ತು ಸಹಯೋಗದೊಂದಿಗೆ ಏರ್ಪಡಿಸುತ್ತಿವೆ.

### 5. ಉದ್ಯೋಗ ಮಾರುಕಟ್ಟೆ ಮಾಹಿತಿ:-

ಸಂಘಟಿತ ವಲಯದ ನಿಯೋಜಕರಿಂದ ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ,1959 ರ ಪ್ರಕಾರ ನಿಯತವಾಗಿಉದ್ಯೋಗ ಮಾಹಿತಿಯನ್ನು ಸಂಗ್ರಹಿಸುವುದು ಉದ್ಯೋಗ ವಿನಿಮಯ ಕೇಂದ್ರಗಳ ಜವಾಬ್ದಾರಿಯಾಗಿರುತ್ತದೆ. ಈ ರೀತಿ ಸಾರ್ವಜನಿಕ ಮತ್ತು ಖಾಸಗಿ ವಲಯದ ಸ್ಥಾಪನೆಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಕ್ರೋಢೀಕರಿಸಿ ರಾಜ್ಯ ಮಟ್ಟದಲ್ಲಿ ತ್ರೈಮಾಸಿಕ / ವಾರ್ಷಿಕ ಉದ್ಯೋಗ ಸಮೀಕ್ಷಾ ವರದಿಗಳನ್ನು ನಿಯತವಾಗಿ ಪ್ರಕಟಿಸಲಾಗುತ್ತಿದೆ. ಅರ್ಥವತ್ತಾದ ಉದ್ಯೋಗ ಮಾಹಿತಿ ಸಂಗ್ರಹಣೆ ಹಾಗೂ ವಿಶ್ಲೇಷಣೆಗೆ ನಿಯೋಜಕರ ದಾಖಲೆ ವ್ಯಾಪಕವಾಗಿರುವಂತೆ ನೋಡಿಕೊಳ್ಳುವುದು ಅತ್ಯವಶ್ಯಕ. ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳು ಮತ್ತು ನಿರ್ದೇಶನಾಲಯದ ಸಂಘಟಿತ ಪ್ರಯತ್ನದಿಂದ ವ್ಯಾಪಕತೆಯನ್ನು ಸಾಧಿಸುವುದು ಸಾಧ್ಯವಾಗಿದೆ.

#### ಅ. ಸ್ಥಾಪನೆಗಳ ವ್ಯಾಪ್ತಿ:-

| ಅವಧಿ. | ನಿಯೋಜಕರ ದಾಖಲೆ. | | |
|---|---|---|---|
| | ಸಾರ್ವಜನಿಕ ವಲಯ. | ಖಾಸಗಿ ವಲಯ. | ಒಟ್ಟು. |
| ಡಿಸೆಂಬರ್ 2020 | 14,946 | 9,108 | 24,054 |
| ಡಿಸೆಂಬರ್ 2021 | 14,928 | 9,116 | 24,044 |
| ಜೂನ್ 2022 | 15,034 | 9,198 | 24,232 |

ಆ. <u>ಸಂಘಟಿತ ವಲಯದಲ್ಲಿನ ಉದ್ಯೋಗ ಪರಿಮಾಣ (ಸಾವಿರಗಳಲ್ಲಿ):-</u>

| ಅವಧಿ. | ಉದ್ಯೋಗ ಪರಿಮಾಣ. | | |
|---|---|---|---|
| | ಸಾರ್ವಜನಿಕ ವಲಯ. | ಖಾಸಗಿ ವಲಯ. | ಒಟ್ಟು. |
| ಡಿಸೆಂಬರ್ 2020 | 1,028.61 | 1,387.4 | 2,416.0 |
| ಡಿಸೆಂಬರ್ 2021 | 1,020.78 | 1,387.07 | 2,407.85 |
| ಜೂನ್ 2022 | 10,19.56 | 13,87.23 | 24,06.79 |

**ಉದ್ಯೋಗ ಮೇಳ:-**

ಸಾರ್ವಜನಿಕ ವಲಯದಲ್ಲಿ ಉದ್ಯೋಗಗಳು ಕ್ಷೀಣಿಸುತ್ತಿರುವದರಿಂದಾಗಿ, ಖಾಸಗಿ ಹಾಗು ಅಸಂಘಟಿತ ವಲಯದಲ್ಲಿರುವ ಉದ್ಯೋಗಾವಕಾಶಗಳನ್ನು ಉಪಯೋಗಿಸಿಕೊಳ್ಳಲು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ ಅಭ್ಯರ್ಥಿಗಳಿಗೆ ತಲುಪಿಸಲು ಉದ್ಯೋಗ ಮೇಳಗಳನ್ನು/ನೇರ ಸಂದರ್ಶನಗಳನ್ನು ಆಯೋಜಿಸಲಾಗುತ್ತಿದೆ. ಈ ಉದ್ಯೋಗ ಮೇಳಗಳು ಖಾಸಗಿ ನಿಯೋಜಕರು ಹಾಗು ಉದ್ಯೋಗಾಕಾಂಕ್ಷಿಗಳನ್ನು ಒಂದೇ ವೇದಿಕೆಗೆ ತರುತ್ತವೆ. 2022 ರಲ್ಲಿ 651 ಇಂತಹ ಉದ್ಯೋಗ ಮೇಳಗಳನ್ನು ಇಲಾಖೆಯು ಏರ್ಪಡಿಸಿರುತ್ತದೆ. ಆ ಮೂಲಕ 14607 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ (ಉದ್ಯೋಗ ಆಹ್ವಾನ ಪತ್ರ ಪಡೆದವರು) ಕಲ್ಪಿಸಲಾಗಿದೆ.

**<u>2021 ರಲ್ಲಿ ನಿರ್ವಹಿಸಲಾದ ಉದ್ಯೋಗ ಮೇಳಗಳು:</u>**

| ಕ್ರ ಸಂ. | ಉದ್ಯೋಗ ವಿನಿಮಯ ಕಚೇರಿಗಳ ಹೆಸರು | ಏರ್ಪಡಿಸಲಾದ ಉದ್ಯೋಗ ಮೇಳಗಳು | ನಿಯೋಜಕರ ಸಂಖ್ಯೆ | ಉದ್ಯೋಗ ಮೇಳಕ್ಕೆ ಹಾಜರಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗ ಆಹ್ವಾನ ಪತ್ರ ಪಡೆದವರು |
|---|---|---|---|---|---|
| 1) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕಲಬುರಗಿ | 34 | 80 | 3808 | 423 |
| 2) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಳ್ಳಾರಿ | 18 | 67 | 2750 | 338 |
| 3) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಚಾಮರಾಜನಗರ | 20 | 134 | 3037 | 428 |
| 4) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ವಿಜಯಪುರ | 20 | 79 | 2897 | 535 |
| 5) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ದಾವಣಗೆರೆ | 32 | 104 | 3704 | 661 |
| 6) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ರಾಯಚೂರು | 13 | 80 | 2091 | 557 |
| 7) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಶಿವಮೊಗ್ಗ | 18 | 64 | 1887 | 439 |
| 8) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೊಪ್ಪಳ | 23 | 49 | 1750 | 446 |
| 9) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ತುಮಕೂರು | 24 | 42 | 3764 | 630 |

| | | | | | |
|---|---|---|---|---|---|
| 10) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಉಡುಪಿ | 18 | 82 | 1713 | 486 |
| 11) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬೆಳಗಾವಿ | 18 | 41 | 2209 | 748 |
| 12) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬೆಂಗಳೂರು | 21 | 229 | 3763 | 887 |
| 13) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಚಿಕ್ಕಬಳ್ಳಾಪುರ | 15 | 56 | 2530 | 581 |
| 14) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹಾಸನ | 24 | 82 | 2016 | 562 |
| 15) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಡ್ಯ | 22 | 85 | 1312 | 436 |
| 16) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಡಿಕೇರಿ | 21 | 69 | 1091 | 412 |
| 17) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಚಿತ್ರದುರ್ಗ | 25 | 91 | 2748 | 619 |
| 18) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೋಲಾರ | 14 | 73 | 1845 | 499 |
| 19) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ರಾಮನಗರ | 13 | 164 | 1233 | 449 |
| 20) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಾಗಲಕೋಟೆ | 19 | 88 | 3107 | 514 |
| 21) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಧಾರವಾಡ | 20 | 67 | 1427 | 322 |
| 22) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಗದಗ | 27 | 94 | 2406 | 465 |
| 23) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಹಾವೇರಿ | 37 | 81 | 1726 | 437 |
| 24) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಉತ್ತರ ಕನ್ನಡ | 23 | 72 | 1832 | 541 |
| 25) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬೀದರ್ | 26 | 47 | 1592 | 391 |
| 26) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಯಾದಗಿರಿ | 20 | 63 | 2401 | 458 |
| 27) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಚಿಕ್ಕಮಗಳೂರು | 32 | 53 | 883 | 366 |
| 28) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ದಕ್ಷಿಣ ಕನ್ನಡ | 32 | 139 | 3387 | 427 |
| 29) | ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮೈಸೂರು | 22 | 133 | 1818 | 550 |
| | **ಒಟ್ಟು** | **651** | **2508** | **66727** | **14607** |

**ಸ್ಪಡಿ ಸರ್ಕಲ್ಸ್:-**

ಗ್ರಾಮೀಣ ಉದ್ಯೋಗಾಕಾಂಕ್ಷಿಗಳು ನೇರ ನೇಮಕಾತಿ ಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ ಎದುರಿಸುವಂತೆ ಸಜ್ಜುಗೊಳಿಸಲು ಎಲ್ಲಾ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 'ಸ್ಪಡಿ ಸರ್ಕಲ್' ನೆಲೆಗೊಳಿಸಿದ್ದು, ಅವುಗಳ ಮೂಲಕ ಅಭ್ಯರ್ಥಿಗಳಿಗೆ ಉಚಿತ ನೇಮಕಾತಿ ಪರೀಕ್ಷಾ ಪೂರ್ವ ತರಬೇತಿಗಳನ್ನು ನೀಡಲಾಗುತ್ತಿದೆ. ಕೋವಿಡ್ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಕೇವಲ 8 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

**ಅಗ್ನಿಪಥ್ ಯೋಜನೆ:**

ಭಾರತೀಯ ಸೇನೆಗೆ ಸೇರಲು ವಿಶಿಷ್ಟ ಯೋಜನೆಯಾದ "ಅಗ್ನಿಪಥ್", 17 ರಿಂದ 23 ವರ್ಷದ ಪುರುಷ ಅಭ್ಯರ್ಥಿಗಳಿಗೆ ಅಗ್ನಿವೀರರೆಂದು ಭಾರತೀಯ ಸೇನೆಗೆ ಸೇರ್ಪಡೆಯಾಗಲು ರಾಜ್ಯದ ಎಲ್ಲಾ ಉದ್ಯೋಗ ವಿನಿಮಯ ಕಚೇರಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ ಅಗ್ನಿವೀರ ಕಾರ್ಯಕ್ರಮ ಬಗ್ಗೆ ಮಾರ್ಗದರ್ಶನ ನೀಡಲಾಯಿತು. ಕರ್ನಾಟಕ ರಾಜ್ಯಾದ್ಯಂತ ಒಟ್ಟು 12,800 ಅಭ್ಯರ್ಥಿಗಳು ಈ ಯೋಜನೆಯಲ್ಲಿ ಭಾಗವಹಿಸಲು ಅರ್ಜಿಯನ್ನು ಸಲ್ಲಿಸಿದ್ದು ಈ ವರೆಗಿನ ಅತ್ಯುತ್ತಮ ದಾಖಲೆಯಾಗಿರುತ್ತದೆ.

**'ಮಾದರಿ ವೃತ್ತಿ ಕೇಂದ್ರಗಳು':-**

ಕೇಂದ್ರ ಸರ್ಕಾರ 'ರಾಷ್ಟ್ರೀಯ ಉದ್ಯೋಗ ಸೇವೆ'ಯನ್ನು 'ರಾಷ್ಟ್ರೀಯ ವೃತ್ತಿ ಸೇವೆ'ಯನ್ನಾಗಿ ಮತ್ತು ಉದ್ಯೋಗ ವಿನಿಮಯ ಕಚೇರಿಗಳನ್ನು ವೃತ್ತಿ ಕೇಂದ್ರಗಳನ್ನಾಗಿ ಪರಿವರ್ತಿಸುತ್ತಿದೆ. ಈ ಯೋಜನೆಯನ್ನು ತ್ವರಿತಗೊಳಿಸಲು ದೇಶಾದ್ಯಂತ 100 'ಮಾದರಿ ವೃತ್ತಿ ಕೇಂದ್ರ'ಗಳನ್ನು ಪ್ರಾರಂಭಿಸಲಾಗುತ್ತಿದೆ. ಸದರಿ ಕೇಂದ್ರ ಪುರಸ್ಕೃತ ಯೋಜನೆ ಅಡಿ ರಾಜ್ಯದಲ್ಲಿ ಮೈಸೂರು, ಹಾಸನ ಮತ್ತು ಹುಬ್ಬಳ್ಳಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಮಾದರಿ ವೃತ್ತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಕಲುಬುರಗಿ, ದಾವಣಗೆರೆ, ತುಮಕೂರು, ಕೋಲಾರ, ಬಳ್ಳಾರಿ ಮತ್ತು ಮಂಗಳೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಆರು ಮಾದರಿ ವೃತ್ತಿ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತಿರುತ್ತದೆ.

# ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ

ಕೌಶಲ್ಯ ಅಭಿವೃದ್ಧಿ

ರಾಷ್ಟ್ರೀಯ ಕೌಶಲ್ಯ ಆಯೋಗ/ರಾಜ್ಯ ಕೌಶಲ್ಯ ಆಯೋಗದ ಶಿಫಾರಸ್ಸುಗಳನ್ನು ಹಾಗೂ ಕೌಶಲ್ಯ ಅಭಿವೃದ್ಧಿ ನೀತಿಯ ಉದ್ದೇಶಗಳನ್ನು ಅನುಷ್ಠಾನಗೊಳಿಸಲು, ಸರ್ಕಾರದ ಆದೇಶ ಸಂಖ್ಯೆ :ಎಲ್‌ಡಿ 142 ಇಟಿಐ 2007 ದಿನಾಂಕ: 02.04.2008 ರ ಆದೇಶದಂತೆ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮವನ್ನು ದಿನಾಂಕ:12.09.2008 ರಂದು ಸ್ಥಾಪನೆ ಮಾಡಲಾಯಿತು.

ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 79 ಕೌಗುಇ 2019 ಬೆಂಗಳೂರು, ದಿನಾಂಕ: 10.01.2020 ರನ್ವಯ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ / ಸಂಸ್ಥೆಗಳನ್ನು ಪುನರ್ ರಚಿಸುವ ಕುರಿತಂತೆ ಆದೇಶಿಸಲಾಗಿರುತ್ತದೆ. ಅದರಂತೆ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಎಂದು ಮರುನಾಮಕರಣಗೊಳಿಸಲಾಗಿದೆ.

- ಕೌಶಲ್ಯ ಮಿಷನ್ ವತಿಯಿಂದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು 2017-18 ರಲ್ಲಿ ಪ್ರಾರಂಭಿಸಿದ್ದು, ಈ ಯೋಜನೆಯ ಮುಖ್ಯ ಉದ್ದೇಶ ಕರ್ನಾಟಕದ ಯುವಜನತೆಗೆ ಉಚಿತವಾಗಿ ಕೌಶಲ್ಯ ತರಬೇತಿಯನ್ನು ನೀಡುವುದು. ಈ ಉದ್ದೇಶಕ್ಕಾಗಿ www.kaushalkar.com ವೆಬ್ ಪೋರ್ಟಲ್‌ನ್ನು ಸಹ ಪ್ರಾರಂಭಿಸಲಾಗಿದೆ. ಈ ಪೋರ್ಟಲ್ ನಲ್ಲಿ ಇಲ್ಲಿಯವರೆಗೆ **1295284** ಅಭ್ಯರ್ಥಿಗಳು ಕೌಶಲ್ಯಾಧಾರಿತ ತರಬೇತಿ ಪಡೆಯಲು ನೋಂದಣಿ ಮಾಡಿಕೊಂಡಿರುತ್ತಾರೆ.
- www.kaushalkar.com ವೆಬ್ ಪೋರ್ಟಲ್‌ಗೆ ಸ್ಕಾಚ್ ಅವಾರ್ಡ್ ರಾಷ್ಟ್ರೀಯ ಪ್ರಶಸ್ತಿ ಲಭಿಸಿರುತ್ತದೆ.

**ತರಬೇತಿ ಕಾರ್ಯಕ್ರಮಗಳು :**

- **ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ (ಸಿ.ಎಂ.ಕೆ.ಕೆ.ವೈ):**
  - ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 164 ಕೌಗುಇ 2021 (ಭಾಗ-2) ದಿನಾಂಕ:18.08.2021 ರ ಆದೇಶದಂತೆ 2021-22 ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ 15 ನೇ ಆಗಸ್ಟ್ 2021 ರ ಭಾಷಣದಲ್ಲಿ ನೂತನವಾಗಿ **ಅಮೃತ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು** ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮೂಲಕ ಜಾರಿಗೊಳಿಸಲು ಆದೇಶಿಸಲಾಗಿದ್ದು, ಅದರಂತೆ ನಿಗಮವು **2021-22 ನೇ ಸಾಲಿನಲ್ಲಿ 43397** ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದೆ. **2022-23** ನೇ ಸಾಲಿನಲ್ಲಿ **36540** ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತತರಬೇತಿ ನೀಡುವಗುರಿಯನ್ನು ಹೊಂದಲಾಗಿದ್ದು, ಈಗಾಗಲೇ **29401** ಅಭ್ಯರ್ಥಿಗಳಿಗೆ ತರಬೇತಿಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ.
  - **2017-18 ನೇ ಸಾಲಿನಿಂದ 2022-23 ನೇ ಸಾಲಿನವರೆಗೆ (ಡಿಸೆಂಬರ್-2022 ರ ಅಂತ್ಯಕ್ಕೆ) 193735** ಅಭ್ಯರ್ಥಿಗಳಿಗೆ ರಾಜ್ಯದ ವಿವಿಧ ಸರ್ಕಾರಿ ಹಾಗೂ ಸರ್ಕಾರೇತರ ಅರ್ಹ ತರಬೇತಿ ಕೇಂದ್ರಗಳ ಮೂಲಕ ಅಲ್ಪಾವಧಿ ತರಬೇತಿಯನ್ನು ನೀಡಲಾಗಿದೆ ಹಾಗೂ **32627** ಅಭ್ಯರ್ಥಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ. 2022-23 ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಗೆ ಡಿಸೆಂಬರ್ - 2021 ರ ಅಂತ್ಯಕ್ಕೆ ಒಟ್ಟು ರೂ. **3750.00** ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದಕ್ಕಾಗಿ ಒಟ್ಟು **36540** ಭೌತಿಕ ಗುರಿ ನಿಗಧಿ ಪಡಿಸಲಾಗಿದೆ. **29401** ಅಭ್ಯರ್ಥಿಗಳಿಗೆ ತರಬೇತಿ ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ.
  - ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ವಿವಿಧ ವೃತ್ತಿ ಶಿಕ್ಷಣದಡಿ (ಜಾಬ್‌ರೋಲ್ ನಡಿ) ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡಲಾಗಿದ್ದು, ರಾಜ್ಯಾದ್ಯಂತ **630** ಕ್ಕೂ ಅಧಿಕ ವಿವಿಧ ಸರ್ಕಾರಿ ಹಾಗೂ ಸರ್ಕಾರೇತರ ಕೇಂದ್ರಗಳ/ಸಂಸ್ಥೆಗಳ ಮೂಲಕ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ **125** ಜಾಬ್‌ರೋಲ್ ಗಳಡಿ ತರಬೇತಿಯನ್ನು ನೀಡಲಾಗಿದೆ.

| ವರ್ಷ | ಆರ್ಥಿಕ ಗುರಿ (ರೂ.ಲಕ್ಷಗಳಲ್ಲಿ) | ಆರ್ಥಿಕ ಸಾಧನೆ (ರೂ.ಲಕ್ಷಗಳಲ್ಲಿ) | ಭೌತಿಕಗುರಿ | ಭೌತಿಕ ಸಾಧನೆ |
|---|---|---|---|---|
| 2022-23 (ಡಿಸೆಂಬರ್- 2022 ರ ಅಂತ್ಯಕ್ಕೆ) | 7000 | 3750 | 36540 | 29401 |

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಮಾಹಿತಿ :

- **ಅಲ್ಪಾವಧಿ ಕೌಶಲ್ಯ ತರಬೇತಿ** : 7500 ಅಭ್ಯರ್ಥಿಗಳಿಗೆ ಅಲ್ಪಾವಧಿ ಕೌಶಲ್ಯ ತರಬೇತಿ ನೀಡಲು ಕ್ರಮವಹಿಸಲಾಗಿದ್ದು. ಈಗಾಗಲೇ 5000 ಅಭ್ಯರ್ಥಿಗಳಿಗೆ ಅಲ್ಪಾವಧಿ ತರಬೇತಿ ನೀಡಲು ಜಿ.ಟಿ.ಟಿ.ಸಿ ಮತ್ತು ಕೆ.ಜಿ.ಟಿ.ಟಿ.ಐ ಸಂಸ್ಥೆಯವರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

- **ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ** :
ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ಇದುವರೆವಿಗೂ 33956 ಅಭ್ಯರ್ಥಿಗಳಿಗೆ 234 ತರಬೇತುದಾರ ಕೇಂದ್ರಗಳ ಮೂಲಕ 63 ಜಾಬ್‌ರೋಲ್‌ಗಳಡಿ ರಾಜ್ಯಾದ್ಯಂತ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಸರ್ಕಾರೇತರ ಸಂಸ್ಥೆಗಳ ಮೂಲಕ ನೀಡಲಗಿದ್ದು, ಈ ಯೋಜನೆಯಡಿ 2020-21 ನೇ ಸಾಲಿನಲ್ಲಿ 9181 ಅಭ್ಯರ್ಥಿಗಳಿಗೆ ಹಾಗೂ 2021-22 ನೇ ಸಾಲಿನಲ್ಲಿ 11408 ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತತರಬೇತಿ ನೀಡಲಾಗಿದೆ.

- **ಪೂರ್ವಕಲಿಕೆಯ ಗುರುತಿಸುವಿಕೆ Recognition of Prior Learning (RPL)** : ಮುಂಚಿನ ಕಲಿಕೆಯ ಅನುಭವ ಅಥವಾ ಕೌಶಲ್ಯ ಹೊಂದಿರುವ ವ್ಯಕ್ತಿಗಳನ್ನು ಪೂರ್ವಕಲಿಕೆಯ ಗುರುತಿಸುವಿಕೆ (RPL) ಅಡಿಯಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಪ್ರಮಾಣೀಕರಿಸಲಾಗುತ್ತದೆ.ಈ ಕಾರ್ಯಕ್ರಮದಡಿ ಒಟ್ಟು 6000 ಅಭ್ಯರ್ಥಿಗಳಿಗೆ ತರಬೇತಿ ನೀಡುವ ಗುರಿಯನ್ನು ಹೊಂದಲಾಗಿದ್ದು, 5572 ಅಭ್ಯರ್ಥಿಗಳಿಗೆ ಈಗಾಗಲೇ ತರಬೇತಿ ಕಾರ್ಯವು ಪೂರ್ಣಗೊಂಡಿರುತ್ತದೆ. ಕೌಶಲ್ಯವನ್ನು ಪ್ರಮಾಣೀಕರಿಸಲಾಗಿರುತ್ತೆ.

- **ತರಬೇತುದಾರರ ತರಬೇತಿ**: ಸಂಕಲ್ಪ ಯೋಜನೆಯಡಿ 500 ಐಟಿಐ/ ಡಿಪ್ಲೋಮಾ/ ಪದವಿ ಉಪನ್ಯಾಸಕರಿಗೆ ಆಧುನಿಕ ಸಂಭೋದನಾ ಕೌಶಲ್ಯ ಹಾಗೂ 21st Century Skills, Commmunicative English Skills ತರಬೇತಿ ನೀಡಲಾಗಿದೆ. ಕೌಶಲ್ಯ ತರಬೇತಿ ಸಂಸ್ಥೆಗಳ 100 ತರಬೇತುದಾರರಿಗೆ ಉನ್ನತ ಕೌಶಲ್ಯ ತರಬೇತಿ ನೀಡಲಾಗಿದೆ.

**ನೂತನ ಕಾರ್ಯಕ್ರಮಗಳು (Initiatives) :**

- **Employability Skills** : ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಹಾಗೂ Quest Alliance ಇವರ ಸಹಬಾಗಿತ್ವದಲ್ಲಿ ಕಲ್ಯಾಣ ಕರ್ನಾಟಕ ಭಾಗದ 07 ಜಿಲ್ಲೆಯ ಸಿ.ಎಂ.ಕೆ.ಕೆ.ವೈ ಮತ್ತು ಪಿ.ಎಂ.ಕೆ.ವಿ.ವೈ ತರಬೇತಿದಾರರಿಗೆ 46 ತರಬೇತಿ ಕೇಂದ್ರದ 111 ತರಬೇತುದಾರರಿಗೆ ಕೌಶಲ್ಯ ತರಬೇತಿಯ ವಿವಿಧ ಮಾದರಿಗಳು ಹಾಗೂ 21 ನೇ ಶತಮಾನದ ಕೌಶಲ್ಯಗಳ ಬಗ್ಗೆ ಅರಿವು ಮತ್ತು ತರಬೇತಿ ನೀಡಲಾಗಿದ್ದು, ಈ ಮೂಲಕ 46 ತರಬೇತಿ ಕೇಂದ್ರದಲ್ಲಿನ ಸಿ.ಎಂ.ಕೆ.ಕೆ.ವೈ ಹಾಗೂ ಪಿ.ಎಂ.ಕೆ.ವಿ.ವೈ ಯೋಜನೆಯಡಿ 6000 ಯುವಕರಿಗೆ Employability Skills ತರಬೇತಿ ನೀಡಿ ಅವರನ್ನು ಉದ್ಯೋಗ ಪಡೆಯಲು ಸಶಕ್ತಗೊಳಿಸುವುದು.

- **ಆಂಗ್ಲ ಭಾಷಾ ಪ್ರಯೋಗಾಲಯಗಳು** : ಪ್ರಯೋಗಾಲಯಗಳನ್ನು ಆಯ್ಕೆಯಾದ ಯಾದಗಿರಿ, ಕೊಪ್ಪಳ, ಚಿತ್ರದುರ್ಗ, ಚಾಮರಾಜನಗರ, ಮಂಗಳೂರು ಮತ್ತು ಮಂಡ್ಯ ಜಿಲ್ಲೆಗಳ ಜಿಟಿಟಿಸಿ, ಐಟಿಐ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಏಳು ಭಾಷಾ ಪ್ರಯೋಗಾಲಯಗಳನ್ನು ನಿರ್ಮಿಸಿ ಪ್ರತಿ ಪ್ರಯೋಗಾಲಯದಿಂದ 200 ಅಭ್ಯರ್ಥಿಗಳಂತೆ ಒಟ್ಟು 1400 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಮತ್ತು ಭಾಷಾ ತರಬೇತಿಯನ್ನು ಒದಗಿಸಲು ಯೋಜನೆಯ ಅನುಷ್ಠಾನವು ಪ್ರಗತಿಯಲ್ಲಿದೆ.

- **ಉದ್ಯೋಗ – 23 ಅಲ್ಪಾವಧಿ ತರಬೇತಿಗಳಿಗೆ ಎನ್.ಸಿ.ವಿ.ಇ.ಟಿ. ಯಿಂದ ಮಾನ್ಯತೆ:** ಟಾಟಾ ಟೆಕ್ನಾಲಜೀಸ್ ನ ಸಹಯೋಗದೊಂದಿಗೆ ಉನ್ನತೀಕರಿಸಲಾದ 150 ಐ.ಟಿ.ಐ.ಗಳಲ್ಲಿ 23 ಭವಿಷ್ಯ ಮುಖಿ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಎನ್.ಸಿ.ವಿ.ಇ.ಟಿ.ಯ ಅನುಮೋದನೆಯನ್ನು ಕೆ.ಎಸ್.ಡಿ.ಸಿ.ಯು ಪಡೆದಿದೆ. ಈ 23 ಕೋರ್ಸ್‌ಗಳನ್ನು ಎನ್.ಎಸ್.ಕ್ಯೂ.ಎಫ್.ನ ಅಧಿಕೃತ ಸಾರ್ವಜನಿಕ ದಾಖಲೆಯಾದ ನ್ಯಾಷನಲ್ ಕ್ವಾಲಿಫಿಕೇಶನ್ ರೆಜಿಸ್ಟರ್‌ನಲ್ಲಿ ನೋಂದಾಯಿಸಲಾಗಿದೆ. ಕೆ.ಎಸ್.ಡಿ.ಸಿ.ಯು ಅವಾರ್ಡಿಂಗ್ ಬಾಡಿ (Awarding Body) ಯಾಗಿ ಕೇಂದ್ರ ನಿಯಂತ್ರಣ ಪ್ರಾಧಿಕಾರವಾದ ರಾಷ್ಟ್ರೀಯ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಮಂಡಳಿಯಿಂದ (ಎನ್.ಸಿ.ವಿ.ಇ.ಟಿ.) ಮಾನ್ಯತೆ ಪಡೆದಿದೆ

- **ಕನ್ನಡದಲ್ಲಿ ಪಠ್ಯಕ್ರಮ (Localization of Content)** : ಕೌಶಲ್ಯ ತರಬೇತಿಯ ವಿವಿಧ ಜಾಬ್‌ರೋಲ್‌ಗಳ ಪಠ್ಯಕ್ರಮ ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಗೊಳಿಸಲು ಕ್ರಮವಹಿಸಲಾಗಿದ್ದು, ಈಗಾಗಲೇ 75

ಜಾಬ್‌ರೋಲ್‌ಗಳ ಪಠ್ಯಕ್ರಮಗಳನ್ನು ಭಾಷಾಂತರಗೊಳಿಸಿ, ನಿಗಮದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಮುಂದುವರೆದು ಜಿಲ್ಲಾ ಕೌಶಲ್ಯ ಅಭಿವೃದ್ಧಿ ಕ್ರಿಯಾಯೋಜನೆಗೆ 04 ಹಂತದ ಮಾರ್ಗಸೂಚಿ ರಚಿಸಲಾಗಿದೆ.

- (ಕೌಶಲ್ಯ ಸಂಪರ್ಕ) ಪೋರ್ಟಲ್ **Skill Connect** : ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗದಾತರು ಹಾಗೂ ಉದ್ಯೋಗಾಂಕ್ಷಿಗಳನ್ನು ಒಂದೇ ವೇದಿಕೆಯಡಿತರಲು Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್ ಅನ್ನು ಸೃಷ್ಟಿಸಿದ್ದು, ಅದನ್ನು ಮಾನ್ಯ ಮುಖ್ಯಮಂತ್ರಿಗಳು / ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ದಿನಾಂಕ:01.12.2022 ರಲ್ಲಿ ಉದ್ಘಾಟಿಸಿರುತ್ತಾರೆ. 8909 ಕ್ಕೂ ಅಧಿಕ ಉದ್ಯೋಗಾವಕಾಶ ಹಾಗೂ ಶಿಶಿಕ್ಷು ತರಬೇತಿಯ ಅವಕಾಶಗಳು ಲಭ್ಯವಿದ್ದು, 50 ಕ್ಕೂ ಅಧಿಕ ಕಂಪನಿಗಳು ಹಾಗೂ ಭಾಗಿದಾರತ್ವ ಸಂಸ್ಥೆಗಳುನ್ನು ಒಳಗೊಂಡಿದ್ದು, 14557 ಅಭ್ಯರ್ಥಿಗಳು ನೊಂದಣಿಗೊಂಡಿರುತ್ತಾರೆ.
    - **ಇ-ಕೌಶಲ್ಯ ಕಲಿಕೆ ನಿರ್ವಹಣಾ ವ್ಯವಸ್ಥೆ:** ಇ-ಕೌಶಲ್ಯ ಕಲಿಕೆ ನಿರ್ವಹಣಾ ವ್ಯವಸ್ಥೆಯನ್ನು ರಾಜ್ಯದ ಕೌಶಲ್ಯ ಆಕಾಂಕ್ಷಿಗಳಿಗೆ 30ಕ್ಕೂ ಹೆಚ್ಚು ಫ್ಯೂಚರ್ ಸ್ಕಿಲ್ಸ್‌ಗಳಲ್ಲಿ ಉಚಿತ ಆನ್‌ಲೈನ್ ತರಬೇತಿ ನೀಡಲಾಗುತ್ತಿದೆ. ಆರ್.ಪಿ. ಸ್ಕಿಲ್ಸ್‌ನೊಂದಿಗೆ ರಚಿಸಲಾದ ಈ ಆನ್‌ಲೈನ್ ಕಾರ್ಯಕ್ರಮದ ಮೂಲಕ ಕರ್ನಾಟಕದ ಯುವ ಜನತೆಯು ಎ.ಐ, ಬ್ಲಾಕ್‌ಚೇನ್, ಕ್ಲೌಡ್‌ಕಂಪ್ಯೂಟಿಂಗ್, ಐ.ಓ.ಟಿ., ಇ.ವಿ., ವಿ.ಎಲ್.ಎಸ್.ಐ., ಮುಂತಾದ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಅತಿ ಹೆಚ್ಚು ಬೇಡಿಕೆಯುಳ್ಳ ಕೌಶಲ್ಯಗಳಲ್ಲಿ ತರಬೇತಿ ಪಡೆಯಬಹುದಾಗಿದೆ.
- ವಿಶ್ವ ಕೌಶಲ್ಯ ಸ್ಪರ್ಧೆ: 2022ರ ವಿಶ್ವ ಕೌಶಲ್ಯ ಸ್ಪರ್ಧೆಗಳಿಗೆ ಕರ್ನಾಟಕದ ಅಭ್ಯರ್ಥಿಗಳಿಗೆ ಕೈಗಾರಿಕಾ ಸಂಸ್ಥೆಗಳಿಂದ ತರಬೇತಿ ನೀಡಲಾಗಿದ್ದು, ರಾಷ್ಟ್ರ ಮಟ್ಟದಲ್ಲಿ 24 ಪದಕಗಳನ್ನು ಹಾಗು ಅಂತರಾಷ್ಟ್ರೀಯ ಮಟ್ಟದಲ್ಲಿ 6 ಪದಕಗಳನ್ನು (1 ಬೆಳ್ಳಿ, 3 ಕಂಚು, 2 ಮೆಡಾಲಿಯನ್ ಆಫ್ ಎಕ್ಸಲೆನ್ಸ್) ರಾಜ್ಯದ ಸ್ಪರ್ಧಿಗಳು ಗಳಿಸಿರುತ್ತಾರೆ.
- ಅಮೃತ ಮುನ್ನಡೆಯೋಜನೆ:
ಹಿಂದುಳಿದ ವರ್ಗಗಳ ಕಲ್ಯಾಣಇಲಾಖೆಯ 25,000 ಯುವ ಫಲಾನುಭವಿಗಳಿಗೆ ಐ.ಟಿ.ಐ, ಜಿ.ಟಿ.ಟಿ.ಸಿ, ಮತ್ತು ಕೆ.ಜಿ.ಟಿ.ಟಿ.ಐ., ಸಂಸ್ಥೆಗಳಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಸಮನ್ವಯದ ನೇತೃತ್ವವನ್ನು ಕೆ.ಎಸ್.ಡಿ.ಸಿ.ಯು ವಹಿಸಿದೆ. ಇದಕ್ಕಾಗಿ www.kaushalkar.com ಪೋರ್ಟಲ್‌ನಲ್ಲಿ ಅಭ್ಯರ್ಥಿಗಳ ನೋಂದಣಿಗಳನ್ನು ಸ್ವೀಕರಿಸಲಾಗಿದೆ.
- ಜಿಲ್ಲಾ ಉದ್ಯೋಗ ವಿನಿಮಯ ಗಳಲ್ಲಿ ಉದ್ಯೋಗಾವಕಾಶಗಳಿಗೆ ನೋಂದಾಯಿಸಿರುವ ಅಭ್ಯರ್ಥಿಗಳ ಮಾಹಿತಿಯ ಪರಿಶೀಲನೆ ಹಾಗು ಡಿಜಿಟಲೀಕರಣ.
- **Toolkit ವಿತರಣೆ:** Self employed tailor, plumber, electrician and hand embroiderer ಜಾಬ್ ರೋಲ್‌ಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ 12 ಜಿಲ್ಲೆಗಳಲ್ಲಿ ಉಪಕರಣಗಳ (toolkit) ವಿತರಣೆ.
- ಪ್ರಥಮ ಚಿಕಿತ್ಸಾ ತರಬೇತಿ (First-Aid Training) : ಭಾರತೀಯರೆಡ್‌ಕ್ರಾಸ್ ಸೊಸೈಟಿಯ ಕರ್ನಾಟಕ ಶಾಖೆಯ ಸಹಯೋಗದೊಂದಿಗೆ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳ 200ಕ್ಕೂ ಹೆಚ್ಚು ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಪ್ರಥಮ ಚಿಕಿತ್ಸಾ ತರಬೇತಿಯ ಕಾರ್ಯಾಗಾರವನ್ನು ಬೆಂಗಳೂರಿನ ವಿಕಾಸ ಸೌಧದಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಹಮ್ಮಿಕೊಂಡಿತ್ತು.
- 'ಸರ್ವರಿಗೂ ಉದ್ಯೋಗ' ಉದ್ಯೋಗ ಮೇಳ: ರಾಜ್ಯದ ಪ್ರತಿ ಜಿಲ್ಲೆಯಲ್ಲಿ 'ಸರ್ವರಿಗೂ ಉದ್ಯೋಗ' ಕಾರ್ಯಕ್ರಮದಡಿ ಉದ್ಯೋಗ ಮೇಳಗಳನ್ನು ಆಯೋಜಿಸಿ, ಯುವ ಉದ್ಯೋಗಾಕಾಂಕ್ಷಿಗಳಿಗೆ ಪ್ರತಿಷ್ಠಿತ ಉದ್ಯೋಗದಾತ ಕಂಪನಿಗಳೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ.
- ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ:ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗು ಉನ್ನತೀಕರಿಸಿದ 150 ಐ.ಟಿ.ಐ.ಗಳ ಪ್ರಾಂಶುಪಾಲರಿಗೆ ಮೈಸೂರಿನ ಇನ್ಫೋಸಿಸ್ ಲೀಡರ್‌ಶಿಪ್ ಸಂಸ್ಥೆಯಲ್ಲಿ ಎರಡು ದಿನಗಳ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.
- **Skill gap and impact study :** ಜಿಲ್ಲಾ ಕೌಶಲ್ಯ ಕೊರತೆ ವರದಿ ಹಾಗು ಪಿ.ಎಂ.ಕೆ.ವಿ.ವೈ. ಹಾಗು ಸಿ.ಎಂ.ಕೆ.ಕೆ.ವೈ. ಯೋಜನೆಗಳ ಮೌಲ್ಯಮಾಪನ ವರದಿಯನ್ನು ಯಾದಗಿರಿ, ರಾಯಚೂರು, ರಾಮನಗರ, ಧಾರವಾಡ, ದಕ್ಷಿಣಕನ್ನಡ, ಶಿವಮೊಗ್ಗ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪೂರ್ಣಗೊಳಿಸಲಾಗಿದೆ.
- **Convergence:** ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ವಿವಿಧ ಇಲಾಖೆಗಳ ಸಹಭಾಗಿತ್ವದೊಂದಿಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ.

1) ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ : TAP – Talent Acceleration Programme ಮೂಲಕ 2000 ಅಂತಿಮ ವರ್ಷ ಬಿ.ಇ / ಬಿಎಸ್‌ಸಿ/ ಬಿ.ಸಿ.ಎ ವಿದ್ಯಾರ್ಥಿಗಳಿಗೆ ಫ್ಯೂಚರ್ ಸ್ಕಿಲ್ ನಲ್ಲಿ ತರಬೇತಿ ನೀಡಿ ಉದ್ಯೋಗ ಕಲ್ಪಿಸಲಾಗುತ್ತಿದೆ.

2) ಪಂಚಾಯತ್ ರಾಜ್ ಇಲಾಖೆ : ಸ್ವ ಸಹಾಯ ಸಂಘಗಳ ಮಹಿಳೆಯರಿಗೆ ಘನತ್ಯಾಜ್ಯ ನಿರ್ವಹಣೆಯ ತರಬೇತಿ ಮತ್ತು ವಾಹನ ಚಾಲನಾ ತರಬೇತಿಯಲ್ಲಿ ಈಗಾಗಲೇ 818 ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ.

3) ಕಾರಾಗೃಹ ಇಲಾಖೆ : ರಾಜ್ಯದ 08 ಕೇಂದ್ರ ಕಾರಾಗೃಹಗಳಲ್ಲಿ ರೂ.75.00 ಲಕ್ಷಗಳ ವೆಚ್ಚದಲ್ಲಿ 600 ಕಾರಗೃಹ ವಾಸಿಗಳಿಗೆ ಸ್ವಯಂ ಉದ್ಯೋಗ ಹಾಗೂ ಸ್ವಾವಲಂಬನಾ ತರಬೇತಿ ಪ್ರಗತಿಯಲ್ಲಿದೆ.

4) ಕೃಷಿ ಇಲಾಖೆ : ಕೃಷಿ ವಿಜ್ಞಾನ ಕೇಂದ್ರಗಳನ್ನು ತರಬೇತಿ ಪಾಲುದಾರರನ್ನಾಗಿ ಮಾಡಿ ಕೃಷಿ ತರಬೇತಿ ಸೇರಿ ಸ್ವಯಂ ಉದ್ಯೋಗಗಳಲ್ಲಿ ತರಬೇತಿ (organic grower, Agricultural mechanic, seeds grower)

5) ಉನ್ನತ ಶಿಕ್ಷಣ ಇಲಾಖೆ : Vishweshwariah Technical University & Karnataka State Open University ಸಂಸ್ಥೆಗಳ ಜೊತೆತರಬೇತಿ ಪಾಲುದಾರರಾಗಿ ಫ್ಯೂಚರ್ ಸ್ಕಿಲ್ ನಲ್ಲಿತರಬೇತಿ

- **Industry Connect (Demand Driven Training) :** Industry Connect ಕಾರ್ಯಕ್ರಮದ ಮೂಲಕ Industry Linkage Cell ಸ್ಥಾಪಿಸಲಾಗಿದ್ದು, ಕೈಗಾರಿಕೆಗಳನ್ನು ತರಬೇತಿ ಪಾಲುದಾರರನ್ನಾಗಿ ಮಾಡಿ ಅವರದೇ ತರಬೇತಿ ಕೇಂದ್ರಗಳ ಮೂಲಕ ಔದ್ಯೋಗಿಕ ಬೇಡಿಕೆಗಳ ಅನುಸಾರವಾಗಿ ಕೌಶಲ್ಯ ತರಬೇತಿ ನೀಡಿ ಉದ್ಯೋಗ ಒದಗಿಸಲಾಗುತ್ತಿದೆ. ಈಗಾಗಲೇ 153 ಅಭ್ಯರ್ಥಿಗಳಿಗೆ ಉದ್ಯೋಗ ನೀಡಲಾಗಿದೆ. (Flipkart, Sansera Technologies, Kaynes Technologies, Wipro GE, ELCIA, Mysore Industrial Association)
- **Industry conclaves:** ಐ.ಟಿ., ಲಾಜಿಸ್ಟಿಕ್ಸ್, ಕೃಷಿ ವಲಯಗಳ ಕೈಗಾರಿಕೆಗಳೊಂದಿಗೆ ಸಂವಾದಗಳನ್ನು ನಡೆಸಲಾಗಿದೆ. ಉದ್ಯೋಗ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾದ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿ, ಕೈಗಾರಿಕೆಗಳಿಗೆ ಸರ್ಕಾರದಿಂದ ತರಬೇತಿ ಸಂಸ್ಥೆಗಳಾಗಿ ಮಾನ್ಯತೆ ಪಡೆಯುವ ಅವಕಾಶದ ಕುರಿತು ಮಾಹಿತಿ ನೀಡಿ, ಉತ್ತೇಜಿಸುವುದು ಈ ಕಾರ್ಯಕ್ರಮಗಳ ಉದ್ದೇಶವಾಗಿದೆ.
- **Skill On Wheels :** ಪ್ರಸ್ತುತ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಕೌಶಲ್ಯಾಧಾರಿತ ತರಬೇತಿ ನೀಡುವುದರ ಜೊತೆಗೆ ಅತಿ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ಯುವ ಜನತೆಗೆ ಅವರಿರುವಲ್ಲಿಯೇ ಅಲ್ಪಾವಧಿ ತರಬೇತಿ ನೀಡಿ ಸ್ವಯಂ ಉದ್ಯೋಗಿಗಳನ್ನಾಗಿಸಲು 'Skill On Wheels' ಎಂಬ ಸಂಚಾರಿ ತರಬೇತಿ ಕೇಂದ್ರವನ್ನು ಅನುಷ್ಠಾನಗೊಳಿಸಿ, ಉಚಿತ ತರಬೇತಿ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.
- **ಸ್ಕಿಲ್ ಹಬ್ (Skill Hub):** ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸಂಸ್ಥೆ / ನಿಗಮಗಳನ್ನು ಒಂದೇ ಸೂರಿನಡಿ ಕಾರ್ಯನಿರ್ವಹಿಸುವ ಸಲುವಾಗಿ ಹಾಗೂ ಸಾರ್ವಜನಿಕರಿಗೆ ಮತ್ತು ಯುವಜನತೆಗೆ ಇಲಾಖೆಗೆ ಸಂಬಂಧಿಸಿದ ಮಾಹಿತಿಗಳು, ಒಂದೇ ಕಛೇರಿಯಲ್ಲಿ ಲಭ್ಯವಾಗುವಂತೆ ರಾಮನಗರ ಜಿಲ್ಲೆಯ ರಾಮನಗರದಲ್ಲಿ ಸ್ಕಿಲ್ ಹಬ್ (Skill Hub) ಪ್ರಾರಂಭಿಸಲಾಗುತ್ತಿದೆ. ಸ್ಕಿಲ್ ಹಬ್ ನಲ್ಲಿ ಯುವ ಜನತೆಗೆ Career Counselling ಮೂಲಕ ಉದ್ಯೋಗ / ಕೌಶಲ್ಯ ತರಬೇತಿ/ ಉದ್ಯಮಶೀಲತಾ ಮಾರ್ಗದರ್ಶನ / ಸಾಫ್ಟ್ ಸ್ಕಿಲ್ ತರಬೇತಿ ನೀಡಿ ಸ್ವಾವಲಂಬಿಗಳಾಗಲು ಪ್ರೋತ್ಸಾಹ ನೀಡಲಾಗುವುದು. ಪ್ರಸ್ತುತ 90 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.
- **ಒಂದು ಜಿಲ್ಲೆ ಒಂದು ಕೌಶಲ್ಯ (One District One Skill) :** ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಈಗಾಗಲೇ "ಒಂದು ಜಿಲ್ಲೆ ಒಂದು ಕೌಶಲ್ಯ" ಎಂಬ ಶೀರ್ಷಿಕೆಯಡಿ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ರಾಜ್ಯದ 31 ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯಲ್ಲಿ ಜಾರಿಯಲ್ಲಿರುವ ಪಾರಂಪರಿಕ ಕುಲವೃತ್ತಿಗಳೆಂದು ಗುರುತಿಸಲ್ಪಟ್ಟಿರುವ ವೃತ್ತಿ / ಕಲೆಗಳಡಿ ಆಯಾಜಿಲ್ಲೆಯ ಕನಿಷ್ಠ 100 ಕುಶಲಕರ್ಮಿಗಳಿಗೆ ಅವರದೆ ವೃತ್ತಿಗೆ ಹೆಚ್ಚಿನ ಆಧುನಿಕರಣದೊಂದಿಗೆ ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ತಯಾರಿಕೆಯ ತಂತ್ರಗಳೊಂದಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು / ಉದ್ಯಮಶೀಲನ್ನಾಗಿಸಲು, ಅವಶ್ಯ ತರಬೇತಿ, ಮಾರುಕಟ್ಟೆ ಸಂಪರ್ಕ ಹಾಗೂ ಸಾಲ ಸೌಲಭ್ಯವನ್ನು ನೀಡುವ ಕಾರ್ಯಕ್ರಮವನ್ನು ರೂಪಿಸಲಾಗಿದೆ.
- **ಕೊಪ್ಪಳ ಟಾಯ್‌ಕ್ಲಸ್ಟರ್ :** ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಮೆ: Aequs, ಸಹಭಾಗಿತ್ವದಲ್ಲಿ ಆಟಿಕೆ ತಯಾರಿಕಾ ವಲಯದಲ್ಲಿ 8 ಜಾಬ್‌ರೋಲ್‌ಗಳಡಿ ಒಟ್ಟು 300 ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತಿದೆ.

- <u>ಮೇದಾರ ಸಮುದಾಯಕ್ಕೆ ತರಬೇತಿ</u> : ಕೊಪ್ಪಳ ತಾಲ್ಲೂಕು ಹಾಗೂ ಗಂಗಾವತಿ ತಾಲ್ಲೂಕಿನ ಒಟ್ಟು 100 ಕುಶಲಕರ್ಮಿಗಳಗೆ ಬಿದಿರು ಉತ್ಪನ್ನ ತಯಾರಿಕೆಯಲ್ಲಿ ಕೌಶಲ್ಯ ತರಬೇತಿ ಹಾಗೂ ಉದ್ಯಮಶೀಲತಾ ತರಬೇತಿ ನೀಡಲಾಗುತ್ತಿದೆ.
- <u>ಕಿನ್ನಾಳ ಆಟಿಕೆ ತಯಾರಿಕೆ ತರಬೇತಿ</u>: ಚಿತ್ರಗಾರ ಸಮುದಾಯದ ಒಟ್ಟು 100 ಕುಶಲಕರ್ಮಿಗಳಗೆ ಸಾಂಪ್ರದಾಯಿಕ ಕಲೆಯಾದ ಮರದ ಆಟಿಕೆ ತಯಾರಿಕೆಯಲ್ಲಿ ತರಬೇತಿ ನೀಡಲಾಗುತ್ತಿದೆ.
- <u>ಖಾಸಗಿ ಕಂಪನಿಗಳ / ಸಂಸ್ಥೆಗಳ ಸಹಭಾಗಿತ್ವದಲ್ಲಿ ತರಬೇತಿ</u> :
  1) **Microsoft** (ಮೈಕ್ರೋಸಾಫ್ಟ್) ನಿಂದ ಕರ್ನಾಟಕದ 60,000 ಹೆಣ್ಣು ಮಕ್ಕಳಗೆ digital skills, employability skills and entrepreneurship skill ಗಳಲ್ಲಿ ತರಬೇತಿ
  2) **Infosys Springboard** (ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್): ಸಿಎಂಕೆಕೆವೈ ತರಬೇತಿ ಪಡೆದ ಅಭ್ಯರ್ಥಿಗಳಗೆ ಉದ್ಯಮಶೀಲತಾ ತರಬೇತಿ
  3) **ICICI Foundation**: 1,000ಕ್ಕೂ ಹೆಚ್ಚು ಹಿಂದುಳದ ಯುವ ಜನತೆಗೆ ಬೆಂಗಳೂರು ಹಾಗು ಮೈಸೂರಿನಲ್ಲಿರುವ ಐ.ಸಿ.ಐ.ಸಿ.ಐ. ಅಕಾಡೆಮಿ ಫಾರ್ ಸ್ಕಿಲ್ಸ್‌ನಲ್ಲಿ ನಡೆಯುತ್ತಿರುವ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನವನ್ನು ತಲುಪಿಸುವಲ್ಲಿ ಕೆ.ಎಸ್.ಡಿ.ಸಿ.ಯು ಬೆಂಬಲಿಸುತ್ತಿದೆ.
  4) **NASSCOM** : ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಹಾಗು ನಾಸ್ಕಾಂ ನ 'ಫ್ಯೂಚರ್ ಸ್ಕಿಲ್ಸ್ ಪ್ರೈಮ್' ಡಿಜಿಟಲ್ ಪ್ಲಾಟ್‌ಫಾರ್ಮ್‌ನ ಮೂಲಕ ಕರ್ನಾಟಕದ ಯುವ ಜನತೆಗೆ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಒದಗಿಸಲುಕೆ.ಎಸ್.ಡಿ.ಸಿ.ಯು ನಾಸ್ಕಾಂ ನೊಂದಿಗೆ ಕೈಜೋಡಿಸಿದೆ.
  5) **Naandi Foundation (Mahindra and Mahindra Group):**ಮಹಿಂದ್ರಾ ಮತ್ತು ಮಹಿಂದ್ರಾ ಸಮೂಹ ಸಂಸ್ಥೆಯವರು ನಾಂದಿ ಫೌಂಡೇಶನ್‌ರವರ ಸಹಭಾಗಿತ್ವದಲ್ಲಿ 30,000 ಪದವಿ ವ್ಯಾಸಂಗ ಪೂರ್ಣಗೊಳಸುತ್ತಿರುವ ಹೆಣ್ಣು ಮಕ್ಕಳಗಾಗಿ Python, Digital Marketing, Soft Skills ಅಡಿಯಲ್ಲಿ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈಗಾಗಲೇ 11,000 ಹೆಣ್ಣುಮಕ್ಕಳು ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದಿರುತ್ತಾರೆ. ಉಳದಂತೆ ತರಬೇತಿ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ.
  6) **American India Foundation (AIF):** ಅಮೇರಿಕನ್ ಇಂಡಿಯಾ ಫೌಂಡೇಷನ್ ಟ್ರಸ್ಟ್‌ನ ಫ್ಯೂಚರ್ ವರ್ಕ್‌ಸ್ಪೇಸ್ ಸ್ಕಿಲ್ಸ್ ಕಾರ್ಯಕ್ರಮದ ಮೂಲಕ ಯುವಜನತೆಯ employability ಕೌಶಲ್ಯಗಳನ್ನು ಹೆಚ್ಚಿಸಲು ಕೆ.ಎಸ್.ಡಿ.ಸಿ.ಯು ಮುಂದಾಗಿದೆ.

- <u>**IMC-K (ಅಂತರಾಷ್ಟ್ರೀಯವಲಸೆ ಕೇಂದ್ರ-ಕರ್ನಾಟಕ)**</u> : ಅಂತರಾಷ್ಟ್ರೀಯ ವಲಸೆ ಕೇಂದ್ರವನ್ನು ಇಲಾಖೆಯಡಿ ಸ್ಥಾಪಿಸಲಾಗಿದ್ದು, ಈ ಯೋಜನೆಯಡಿ ಕೆ.ಎಸ್.ಡಿ.ಸಿ ನಿಗಮವನ್ನು ನೇಮಕಾತಿ ಏಜೆನ್ಸಿಯಾಗಿ ವಿದೇಶಾಂಗ ಮಂತ್ರಾಲಯ, ಭಾರತ ಸರ್ಕಾರದಡಿ ನೋಂದಣಿಗೊಳಸಲಾಗಿರುತ್ತದೆ. ಕೆ.ಎಸ್.ಡಿ.ಸಿ ನಿಗಮವು ನೇಮಕಾತಿ ಏಜೆನ್ಸಿಯಾಗಿ ರಾಜ್ಯದಲ್ಲಿ ಯುವಜನತೆಗಾಗಿ ವಿದೇಶಿ ಉದ್ಯೋಗಾವಕಾಶಗಳನ್ನು ಸಾಗರೋತ್ತರ ರಾಷ್ಟ್ರಗಳಲ್ಲಿ ಕಲ್ಪಿಸುತ್ತಿದ್ದು, ಇದುವರೆವಿಗೂ ಒಟ್ಟು 513 ಅಭ್ಯರ್ಥಿಗಳನ್ನು ನೇಮಕಾತಿಗೊಳಸಿ ಉದ್ಯೋಗಾವಕಾಶ ಕಲ್ಪಿಸಲಾಗಿರುತ್ತದೆ.
  - ಸದರಿ ಯೋಜನೆಯಡಿ ಐ.ಎಂ.ಸಿ-ಕೆ ಪೂರ್ವ ನಿರ್ಗಮನ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಇದುವರೆವಿಗೂ ಒಟ್ಟು **576** ಅಭ್ಯರ್ಥಿಗಳಗೆ ಪೂರ್ವ ನಿರ್ಗಮನ ತರಬೇತಿಯನ್ನು ಒದಗಿಸಿ, ಉದ್ಯೋಗಾವಕಾಶಕ್ಕಾಗಿ ತೆರಳು ರಾಷ್ಟ್ರಗಳ ಕುರಿತು ಸಮಗ್ರ ತರಬೇತಿ, ಕಾನೂನು, ನಿಯಮ ಪರಿಹಾರಗಳ ಹಾಗೂ ಸಹಾಯ ಹಸ್ತಗಳ ಕುರಿತು ಮಾಹಿತಿಯನ್ನು ನೀಡಲಾಗಿರುತ್ತದೆ. ಅದರಂತೆ ಕೇಂದ್ರ ವಿದೇಶಾಂಗ ಮಂತ್ರಾಲಯದಅಧಿಕೃತ ಪ್ರಮಾಣಪತ್ರವನ್ನು ಒದಗಿಸಲಾಗಿದೆ. ಮುಂದುವರೆದು, ಪ್ರಥಮ ಹಂತದಲ್ಲಿ Migrant Resource Centers & Migrant Information Centers ಗಳನ್ನು 08 ಜಿಲ್ಲೆಗಳಾದ ಬಳ್ಳಾರಿ, ಕಲಬುರಗಿ, ತುಮಕೂರು, ರಾಮನಗರ, ಹುಬ್ಬಳ, ಮಂಗಳೂರು (ದಕ್ಷಿಣಕನ್ನಡ), ಉಡುಪಿ ಮತ್ತು ವಿಜಯಪುರ ಜಿಲ್ಲೆಗಲ್ಲಿ ಸ್ಥಾಪಿಸಲಾಗಿರುತ್ತದೆ. ವಿದೇಶಾಂಗ ಮಂತ್ರಾಲಯದಿಂದ ನೂತನವಾಗಿ 04 ಜಿಲ್ಲೆಗಳಲ್ಲಿ ಅಭ್ಯರ್ಥಿಗಳಗೆ ನೆರವಾಗಲು ಪೂರ್ವ ನಿರ್ಗಮನ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

- ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು National Health Services (NHS) ಯುನೈಟೆಡ್ ಕಿಂಗ್‌ಡಂ (ಯು.ಕೆ) ಯೊಂದಿಗೆ ಒಡಂಬಡಿಕೆ ಸಹಿ ಮಾಡಲಾಗಿದ್ದು, ದಾದಿಯರನ್ನು ನೇಮಕಾತಿಗೊಳಿಸಲು ಅವಶ್ಯವಿರುವ ತರಬೇತಿ The International English Language Testing System (IELTS) ಭಾಷಾ ತರಬೇತಿಯನ್ನು ಒಟ್ಟು ೬೦ ಅಭ್ಯರ್ಥಿಗಳಿಗೆ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ನಿಗಮವು ಕೊಲ್ಲಿ ರಾಷ್ಟ್ರಗಳಿಂದ ಹಲವು ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳ ಬೇಡಿಕೆಗಳನ್ನು ಉದ್ಯೋಗದಾತರಿಂದ ಸ್ವೀಕರಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ನಡೆಸಲಾಗುತ್ತಿದೆ.

## "ಸಂಜೀವಿನಿ"- ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

ಭಾರತ ಸರ್ಕಾರದ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಸ್‌ಜಿಎಸ್‌ವೈ ಯೋಜನೆಯನ್ನು ಪುನರ್‌ರಚಿಸಿ ಆಜೀವಿಕ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವೆಂದು (ಎನ್‌ಆರ್‌ಎಲ್‌ಎಂ) 2010-11 ರಿಂದ ಜಾರಿಗೊಳಿಸಿದೆ. ಇದರನ್ವಯ ರಾಜ್ಯ ಸರ್ಕಾರವು ರಾಜ್ಯದಲ್ಲಿ ಆಜೀವಿಕ ಯೋಜನೆಯನ್ನು "ಸಂಜೀವಿನಿ" ಹೆಸರಿನಲ್ಲಿ 11.12.2011 ರಿಂದ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆಎಸ್‌ಆರ್‌ಎಲ್‌ಪಿಎಸ್) ಮೂಲಕ ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರ 2020ನೇ ಸಾಲಿನ ಘೋಷಣೆಯಂತೆ ಕರ್ನಾಟಕ ನಗರ ಮತ್ತು ಗ್ರಾಮೀಣ ಜೀವನೋಪಾಯ ಸಂಸ್ಥೆಗಳನ್ನು ಒಂದಾಗಿಸಿ ರಾಜ್ಯ ಜೀವನೋಪಾಯ ಅಭಿಯಾನವೆಂದು ಆದೇಶಿಸಿದೆ. ಇಲ್ಲಿಯವರೆಗೆ ಸಂಜೀವಿನಿ – ಕೆಎಸ್‌ಆರ್‌ಎಲ್‌ಪಿಎಸ್ ಕರ್ನಾಟಕ ರಾಜ್ಯದ ಎಲ್ಲಾ 31 ಜಿಲ್ಲೆಗಳ ಎಲ್ಲಾ 226 ಬ್ಲಾಕ್‌ಗಳನ್ನು ಒಳಗೊಂಡಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು 2022-23ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ 2022-23 ವರ್ಷವನ್ನು "**ಜೀವನೋಪಾಯ ವರ್ಷ**" ವೆಂದು ಘೋಷಣೆ ಮಾಡಿರುತ್ತಾರೆ. ಜಿಲ್ಲಾ ಮತ್ತು ಬ್ಲಾಕ್‌ಗಳನ್ನು ಒಳಗೊಂಡ ಹಂತವಾರು ಇಂಟೆನ್ಸೀವ್ ಕಾರ್ಯತಂತ್ರವನ್ನು **ಕೋಷ್ಟಕ** 16.4 ರಲ್ಲಿ ನೀಡಲಾಗಿದೆ.

**ಜಿಲ್ಲಾ ಮತ್ತು ಬ್ಲಾಕ್‌ಗಳನ್ನು ಒಳಗೊಂಡ ಹಂತವಾರು ಇಂಟೆನ್ಸೀವ್ ಕಾರ್ಯತಂತ್ರ ಯೋಜನೆ**

| ಹಂತ | ವರ್ಷ | ಜಿಲ್ಲೆಗಳು | ತಾಲ್ಲೂಕುಗಳು |
|---|---|---|---|
| I | 2014-15 | 5 | 20 |
| II | 2015-16 | 20 | 64 |
| III | 2016-17 | 5 | 47 |
| IV | 2018-19 | - | 32 |
| V | 2019-20 | 1 | 6 |
| VI | 2020-21 | - | 57 |
| | ಒಟ್ಟು | 31 | 226 |

16.3.1 2022-23ನೇ ಸಾಲಿನಲ್ಲಿ ನವೆಂಬರ್ 2022ರ ಅಂತ್ಯದವರೆಗೆ "ಸಂಜೀವಿನಿ"- (ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ)ಯಡಿ ಸಾಧಿಸಿರುವ ಪ್ರಗತಿಯ ವಿವರ **ಕೋಷ್ಟಕ 16.5** ರಲ್ಲಿ ನೀಡಲಾಗಿದೆ.

**ಕೋಷ್ಟಕ 16.5: 2022-23ನೇ ಸಾಲಿನಲ್ಲಿ ಸಂಜೀವಿನಿ-(ಕೆಎಸ್‌ಆರ್‌ಎಲ್‌ಪಿಎಸ್)ಯಡಿ ಸಾಧಿಸಿರುವ ಪ್ರಗತಿಯ ವಿವರ**

**(ರೂ.ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಘಟಕವಾರು ವಿವರಗಳು | ಆಯವ್ಯಯ | ಪ್ರಾರಂಭಿಕ ಬಾಕಿ | ಬಿಡುಗಡೆ | ಲಭ್ಯವಿರುವ ಅನುದಾನ | ವೆಚ್ಚ |
|---|---|---|---|---|---|---|
| 1 | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ | 333.45 | 164.39 | 108.66 | 273.05 | 226.35 |
| 2 | ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (ಎನ್‌ಆರ್‌ಇಟಿಪಿ) | 20.02 | 20.87 | 20.02 | 40.90 | 27.45 |
| 3 | ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ | 20.17 | 2.79 | 20.17 | 22.96 | 0.00 |
| 4 | ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ | 25.00 | 69.15 | 1.61 | 70.75 | 10.35 |
| 5 | ಪ್ರಾರಂಭಿಕ ಗ್ರಾಮೀಣ ಉದ್ಯಮಶೀಲತಾ ಕಾರ್ಯಕ್ರಮ (ಎಸ್‌ವಿಇಪಿ) | 7.28 | 3.16 | - | 3.16 | 2.70 |
| 6 | ಸ್ತ್ರೀ ಸಾಮರ್ಥ್ಯ ಯೋಜನೆ | 175.00 | - | 100.00 | 100.00 | 0.12 |
| | **ಒಟ್ಟು** | **580.92** | **260.36** | **250.46** | **510.82** | **266.97** |

### ಸಾಂಸ್ಥಿಕ ಸಂಸ್ಥೆಗಳ ರಚನೆ ಮತ್ತು ಬಲವರ್ಧನೆ

ಬಡವರನ್ನು ಕ್ರೋಢೀಕರಿಸಿ ಅವರದೇ ಆದ ಸಂಸ್ಥೆಗಳನ್ನು ರಚಿಸಿ ಸಾಮರ್ಥ್ಯ ಬಲವರ್ಧನೆ ಮಾಡುವುದರಿಂದ ಹೆಚ್ಚಿನ ಮಟ್ಟದಲ್ಲಿ ಬಡತನ ನಿರ್ಮೂಲನೆ ಮಾಡುವುದು ಅತ್ಯಗತ್ಯವಾಗಿರುತ್ತದೆ. ಅಂತೆಯೇ ರಾಜ್ಯ ಜೀವನೋಪಾಯ ಅಭಿಯಾನದ ಮೂಲಕ ಬಡತನದಲ್ಲಿರುವ ಎಲ್ಲಾ ಮಹಿಳೆಯರನ್ನು ಒಂದುಗೂಡಿಸಿ ಮಾಹಿತಿ ಪಡೆಯಲು ಮತ್ತು ವಿಷಯ ವಿನಿಮಯ ಮಾಡಿಕೊಳ್ಳಲು ಸಾಂಸ್ಥಿಕ ಸಂಘಟನೆಗಳು ಮತ್ತು ಸಂಸ್ಥೆಗಳನ್ನು ರಚಿಸುವುದರ ಮೂಲಕ ಕಡು ಬಡತನದಲ್ಲಿರುವ ಮಹಿಳೆಯರಿಗೆ ಒಂದು ವೇದಿಕೆಯನ್ನು ಸೃಷ್ಟಿಸಲಾಗಿದೆ. ಬಡವರಿಂದ ಮತ್ತು ಬಡವರಿಗಾಗಿ ರಚಿಸಲ್ಪಟ್ಟ ಈ ಸಂಸ್ಥೆಗಳು ಸ್ಥಳೀಯ ಸರ್ಕಾರದೊಂದಿಗೆ, ವಿವಿಧ ಸೇವೆಗಳನ್ನು ನೀಡುತ್ತಿರುವ ಸಂಸ್ಥೆಗಳೊಂದಿಗೆ, ಬ್ಯಾಂಕ್‌ಗಳೊಂದಿಗೆ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆಗಳೊಂದಿಗೆ ಹಾಗೂ ಇತರೆ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಿ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಒದಗಿಸಲು ನೆರವಾಗುತ್ತವೆ. ವಿವಿಧ ಹಂತದಲ್ಲಿ ಸಂಸ್ಥೆಗಳನ್ನು ರಚಿಸುವುದರಿಂದ ಬಡ ಮಹಿಳೆಯರಿಗೆ ಒಗ್ಗಟ್ಟಾಗಿ ತಮ್ಮ ಹಕ್ಕುಗಳ ಬಗ್ಗೆ ಮಾತನಾಡಲು ಹೆಚ್ಚಿನ ಅವಕಾಶವನ್ನು ಕೊಡುವುದರೊಂದಿಗೆ ಆರ್ಥಿಕ ಸಮಾನತೆಯನ್ನು ಒದಗಿಸಲು ನೆರವಾಗುತ್ತದೆ.

ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟವು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ, ಅವರುಗಳ ಮೂಲಕ ಸಾಮಾಜಿಕ ಕ್ರೋಢೀಕರಣ ಪ್ರಕ್ರಿಯೆಯನ್ನು ಮುಂದುವರಿಸಲಾಗುತ್ತಿದೆ. ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟವು ಚಾಲ್ತಿಯಲ್ಲಿರುವ ಹಾಗೂ ಹೊಸದಾಗಿ ರಚಿಸಲಾಗಿರುವ ಸ್ವ ಸಹಾಯ ಗುಂಪುಗಳ ಸಾಮರ್ಥ್ಯ ಬಲವರ್ಧನೆ ಬಗ್ಗೆ ವಿಶ್ಲೇಷಿಸಿ ಅಗತ್ಯತೆಗೆ ಅನುಸಾರವಾಗಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಮೂಲಕ ಕಿರು ಬಂಡವಾಳ ಹೂಡಿಕೆ ಯೋಜನೆ ತಯಾರಿಸಲು ಮತ್ತು ಸ್ವಸಹಾಯ ಗುಂಪುಗಳಿಗೆ ಕಿರುಬಂಡವಾಳ ನಿಧಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕವನ್ನು ಕಲ್ಪಿಸಿ ಅಗತ್ಯತೆಗೆ ಅನುಸಾರವಾಗಿ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ಪಡೆಯಲು ಸಹಕಾರ ನೀಡುತ್ತಿವೆ ಮತ್ತು ಸ್ವ ಸಹಾಯ ಸಂಘದಿಂದ ಹೊರಗುಳಿದಿರುವ ಮಹಿಳೆಯರನ್ನು ಗುರುತಿಸಿ ಅವರನ್ನು ಸ್ವಸಹಾಯ ಸಂಘಕ್ಕೆ ಮತ್ತು ಒಕ್ಕೂಟಗಳಿಗೆ ಸೇರಿಸುವ ಕಾರ್ಯವನ್ನು ಮಾಡುತ್ತದೆ. ಗ್ರಾಮೀಣ ಜೀವನೋಪಾಯ ಕಾರ್ಯಕ್ರಮದ ಭಾಗವಾಗಿ ಗ್ರಾಮ ಪಂಚಾಯತ್ ಜೊತೆಗೆ ಅಭಿಯಾನ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತ್ ಒಕ್ಕೂಟವು ಕೈಗೊಳ್ಳುತ್ತವೆ. 2022-23 ವರ್ಷದಲ್ಲಿ 20,427 ಸ್ವಸಹಾಯ ಗುಂಪುಗಳು 2,10,438 ಕುಟುಂಬಗಳನ್ನು ಒಳಗೊಂಡಿದ್ದು, ಎನ್‌ಆರ್‌ಎಲ್‌ಎಂ ಅಡಿಯಲ್ಲಿ 2950454(91.04%) ಕುಟುಂಬಗಳು ಒಳಗೊಂಡಂತೆ 244920 ಸ್ವ ಸಹಾಯ ಗುಂಪುಗಳು ರಚನೆಗೊಂಡಿರುತ್ತದೆ.

2022-23 ನೇ ಸಾಲಿನಲ್ಲಿ ದೂರದೃಷ್ಟಿ ಕುರಿತ ತರಬೇತಿಯಲ್ಲಿ, 98 ಸಂಪನ್ಮೂಲ ವ್ಯಕ್ತಿಗಳಿಗೆ ಕ್ಷೇತ್ರ ಪ್ರಾತ್ಯಕ್ಷಿಕೆಗಳನ್ನು 3 ವಿಭಾಗಗಳಲ್ಲಿ 12 ದಿನಗಳ ತರಬೇತಿ ನೀಡಲಾಯಿತು. (4 ದಿನಗಳ ಪೂರ್ವ ದರ್ಶನ, 4 ದಿನಗಳ ನೈಜ ದರ್ಶನ, 4 ದಿನಗಳ ಡೆಮೊ) ಎಲ್ಲಾ 110 ಎಂಸಿಎಲ್‌ಎಫ್ ಗಳು 2,030 ಜಿಪಿಎಲ್‌ಎಫ್ ಸದಸ್ಯರನ್ನು ಒಳಗೊಂಡಿರುವ 1,2 ಮತ್ತು 3 ದೃಷ್ಟಿಗೋಚರವನ್ನು ಪೂರ್ಣಗೊಳಿಸಿದವು. ಇಂಟರ್‌ಫೇಸ್‌ನಲ್ಲಿ 75,248 ಎಸ್‌ಹೆಚ್‌ಜಿ ಸದಸ್ಯರು ಮತ್ತು 7,693 ವಾರ್ಡ್ ಮಟ್ಟದ ಸದಸ್ಯರು ತರಬೇತಿಯಲ್ಲಿ ಭಾಗವಹಿಸಿರುತ್ತಾರೆ.

### ಸಾಮಾಜಿಕ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ

ಕೌಟುಂಬಿಕ ಹಿಂಸೆ ಮತ್ತು ಮಕ್ಕಳ ಲೈಂಗಿಕ ದೌರ್ಜನ್ಯ ತಡೆಗಟ್ಟುವ ನಿಟ್ಟಿನಲ್ಲಿ 4.25 ಲಕ್ಷ ಸ್ವ-ಸಹಾಯ ಗುಂಪಿನ ಸದಸ್ಯರಿಗೆ ತರಬೇತಿ ನೀಡಿರುತ್ತಾರೆ. ರಾಜ್ಯವು ದೌರ್ಜನ್ಯ ಮುಕ್ತ ವಿಷಯದಲ್ಲಿ ವಿಶೇಷ ತರಬೇತಿ ಕೈಪಿಡಿಯನ್ನು ರಚಿಸಲಾಗಿದೆ. ಮುಂದುವರೆದು, ರ್‍ಯಾಲಿ, ಬೀದಿ ನಾಟಕ, ವಿಶೇಷ ಗ್ರಾಮ ಸಭೆಗಳು, ರಂಗೋಲಿ ಸ್ಪರ್ಧೆ, ಕಾರ್ಯಾಗಾರ ಚಟುವಟಿಕೆಗಳ ಮೂಲಕ ಮಹಿಳೆಯರಿಗೆ ಕೌಟುಂಬಿಕ ಹಿಂಸೆಯನ್ನು ತಡೆಗಟ್ಟುವ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಸಹಯೋಗದಲ್ಲಿ 3753 ಸ್ವಸಾಯ ಗುಂಪಿನ ಮಹಿಳೆಯರಿಗೆ ಘನತ್ಯಾಜ್ಯ ನಿರ್ವಹಣೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸೌರಶಕ್ತಿ ಬಳಕೆಯ ವಿವಿಧ ಅಂಶಗಳಲ್ಲಿ ತರಬೇತಿ ನೀಡಲಾಗಿದೆ. ಪ್ರಸ್ತುತ 16547 ಗ್ರಾಮ ಪಂಚಾಯಿತಿ ಒಕ್ಕೂಟಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಾರ್ಯಸನ್ನದ್ಧಗೊಂಡಿದ್ದು, 1954 ಮಹಿಳೆಯರಿಗೆ ನಾಲ್ಕು ಚಕ್ರ ವಾಹನ ಚಾಲನಾ ತರಬೇತಿ ನೀಡಲಾಗಿದ್ದು, 814 ಮಹಿಳೆಯರು ಕಾರ್ಯನಿರ್ವಹಿಸುತ್ತಿರುತ್ತಾರೆ.

ವರ್ಕ್ ಶೆಡ್: ಸ್ತ್ರೀ ಶಕ್ತಿ ಒಕ್ಕೂಟಗಳ ಸದಸ್ಯರು ತಮ್ಮ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಒಉಓಖಇಉಂ ಅಡಿಯಲ್ಲಿ 200 ವರ್ಕ್ ಶೆಡ್‌ಗಳನ್ನು ನಿರ್ಮಿಸಲಾಗಿದೆ. 2022-23 ರಲ್ಲಿ 750 ವರ್ಕ್ ಶೆಡ್‌ಗಳನ್ನು ಹೆಚ್ಚುವರಿಯಾಗಿ ನಿರ್ಮಿಸಲಾಗುವುದು ಮತ್ತು ಪ್ರತಿ ಘಟಕಕ್ಕೆ ರೂ. 17.50 ಲಕ್ಷ ಅಂದಾಜು ಮಾಡಲಾಗಿರುತ್ತದೆ. 2022-23 ನೇ ಸಾಲಿನಲ್ಲಿ 31 ಜಿಲ್ಲೆಗಳಲ್ಲಿ 750 ವರ್ಕ್ ಶೆಡ್‌ಗಳ ನಿರ್ಮಾಣ ಗುರಿ ಹೊಂದಲಾಗಿದ್ದು, 49 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಹಾಗೂ 268 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಹಣಕಾಸು ಸೇರ್ಪಡೆ ಪ್ರಕ್ರಿಯೆಯು ಬಡಜನರಿಗೆ ಹಣಕಾಸು ಸೇವೆಗಳನ್ನು ಸುಲಭವಾಗಿ ದೊರೆಯುವಂತೆ ಮಾಡುವುದಾಗಿರುತ್ತದೆ. ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯ ಮುಖ್ಯ ಉದ್ದೇಶವು ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪುಗಳ ಸದಸ್ಯರ ಜೀವನೋಪಾಯ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ಹಣಕಾಸು ಸಂಸ್ಥೆಗಳಿಂದ ಪಡೆಯುವಂತೆ ಮಾಡುವುದಾಗಿರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಸ್ವ ಸಹಾಯ ಗುಂಪುಗಳಿಗೆ ಆರ್ಥಿಕ ಅಗತ್ಯಗಳನ್ನು ಪೂರೈಸಲು ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೇವೆಗಳನ್ನು Business Correspondence (BC) ಸಖಿಗಳ ಮೂಲಕ ನೀಡಲಾಗುತ್ತಿದೆ. ಒಂದು ಗ್ರಾಮ ಪಂಚಾಯಿತಿಗೆ ಒಬ್ಬ BC ಸಖಿ ಕಾರ್ಯನಿರ್ವಹಿಸುತ್ತಿದ್ದು, 2022-23ರ ಅವಧಿಯಲ್ಲಿ ಒಟ್ಟು 3320 BC ಸಖಿಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಕ್ರಿಯಗೊಂಡಿರುತ್ತಾರೆ.

ಪ್ರತಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮನೆ ಬಾಗಿಲಿಗೆ ಬ್ಯಾಂಕ್ ಮತ್ತು ಡಿಜಿಟಲ್ ಹಣಕಾಸು ಸೇವೆಗಳನ್ನು ಒದಗಿಸಲು ಡಿಜಿ ಪೇ ಸಖಿಯನ್ನು ಆಯ್ಕೆ ಮಾಡಲಾಗಿದ್ದು, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಒಟ್ಟು 983 ಡಿಜಿಪೇ ಸಖಿಗಳು ಸಕ್ರಿಯರಾಗಿದ್ದಾರೆ.

ಸ್ವ-ಸಹಾಯ ಗುಂಪಿನ ಕುಟುಂಬ ಸದಸ್ಯರಗಳ ಆರೋಗ್ಯ ಸಮಸ್ಯೆಗಳು, ಅನಿರೀಕ್ಷಿತ ಅಪಘಾತಗಳು, ಅನಿರೀಕ್ಷಿತ ಮರಣ ಮುಂತಾದ ರೀತಿಯ ಘಟನೆಗಳು ಸಂಭವಿಸಿದಾಗ ಅಂತಹ ಕುಟುಂಬಗಳಿಗೆ ಹಣಕಾಸಿನ ನೆರವಿಗಾಗಿ ಪಿ.ಎಂ.ಜೆ.ಜೆ.ಬಿ.ವೈ ಯೋಜನೆಯಡಿ-16.2 ಲಕ್ಷ (85%) ಮತ್ತು ಪಿ.ಎಂ.ಎಸ್.ಬಿ.ವೈ ಯೋಜನೆಯಡಿ-18.9 ಲಕ್ಷ (78%) ಸ್ವ-ಸಹಾಯ ಗುಂಪಿನ ಸದಸ್ಯರು ಮತ್ತು ಕುಟುಂಬದವರನ್ನು ಸಾಮಾಜಿಕ ಭದ್ರತಾ ಸೇರ್ಪಡೆ ಯೋಜನೆಯಡಿ ನೋಂದಣಿ ಮಾಡಲಾಗಿರುತ್ತದೆ.

## ಸುತ್ತು ನಿಧಿ

ಸುತ್ತುನಿಧಿಯು ಸ್ವಸಹಾಯ ಗುಂಪಿನಲ್ಲಿ ಸದಸ್ಯರ ಉಳಿತಾಯದ ಹಣದೊಂದಿಗೆ ಸೇರಿ, ಒಟ್ಟು ಬಂಡವಾಳವನ್ನು ಹೆಚ್ಚಿಸುವುದು ಮತ್ತು ಸ್ವಸಹಾಯ ಗುಂಪುಗಳು ಹೆಚ್ಚಿನ ಪ್ರಮಾಣದಲ್ಲಿ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅನುಕೂಲವಾಗಿದೆ. ಅಲ್ಲದೇ ಸ್ವ ಸಹಾಯ ಗುಂಪಿನ ಸದಸ್ಯರ ಸಾಲ ಮರುಪಾವತಿ ಶಿಸ್ತನ್ನು ರೂಪಿಸಿ, ಬ್ಯಾಂಕ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಲ ಪಡೆಯಲು ಸಹಕಾರಿಯಾಗಿದೆ. ಅರ್ಹ ಸ್ವ-ಸಹಾಯ ಗುಂಪುಗಳನ್ನು ಗುರುತಿಸಲು ಜಿಲ್ಲೆಗಳಿಗೆ ಗುರಿಯನ್ನು ನಿಗದಿ ಪಡಿಸಲಾಗುತ್ತದೆ. ಯೋಜನಾ ಮಾರ್ಗಸೂಚಿಯಂತೆ ಆಯ್ಕೆ ಮಾಡಿ ಸಲ್ಲಿಸಲಾದ ಪ್ರಸ್ತಾವನೆಯಲ್ಲಿನ ಸ್ವಸಹಾಯ ಗುಂಪುಗಳಿಗೆ ಸುತ್ತು ನಿಧಿಯನ್ನು ನೀಡಲಾಗುತ್ತಿದೆ.**(ಕೋಷ್ಟಕ 16.6)**

### ಸಮುದಾಯ ಬಂಡವಾಳ ನಿಧಿ (ಸಿ.ಐ.ಎಫ್)

ಸಮುದಾಯ ಬಂಡವಾಳ ನಿಧಿಯನ್ನು ಸಮುದಾಯಾಧಾರಿತ ಸಂಸ್ಥೆಗಳಿಗೆ ಬಂಡವಾಳವಾಗಿ ನೀಡುವ ಅನುದಾನವಾಗಿದೆ. ಈ ನಿಧಿಯನ್ನು ಸ್ವಸಹಾಯ ಸಂಘಗಳು ತಯಾರಿಸುವ ಕಿರು ಬಂಡವಾಳ ಯೋಜನೆಯ ಮೇರೆಗೆ ಸಾಲವಾಗಿ ನೀಡಿ ಕಡು ಬಡ ಮಹಿಳೆಯರ ಆದಾಯ ಉತ್ಪಾದಿಸುವ ಚಟುವಟಿಕೆಗಳನ್ನು ಮುಂದುವರೆಸಲು ಸಹಾಯ ಮಾಡುತ್ತದೆ. **(ಕೋಷ್ಟಕ 16.6)**

**ಕೋಷ್ಟಕ 16.6 ಹಣಕಾಸು ಸೇರ್ಪಡೆಯಡಿ ಪ್ರಗತಿ ವಿವರ 2022-23 (ನವೆಂಬರ್ 2022 ಅಂತ್ಯದವರೆಗೆ)**

**(ರೂ. ಲಕ್ಷಗಳಲ್ಲಿ)**

| ಕಾರ್ಯಕ್ರಮ/ಘಟಕ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಸುತ್ತುನಿಧಿ | 30058 | 45086.70 | 7239 | 10858.50 |
| ಸಮುದಾಯ ಬಂಡವಾಳ ನಿಧಿ | 493000 | 2101100.00 | 560868 | 1096354.59 |

**ಕೃಷಿ ಜೀವನೋಪಾಯ, ಮೌಲ್ಯವರ್ಧಿತ ಮತ್ತು ಒಗ್ಗೂಡಿಸುವಿಕೆ ಚಟುವಟಿಕೆಗಳು:**

ಕೃಷಿ, ತೋಟಗಾರಿಕೆ, ಜಾನುವಾರು, ಮೀನುಗಾರಿಕೆ ಮತ್ತು NTFP ಯಿಂದ ಕನಿಷ್ಠ 2 ರಿಂದ 3 ಕೃಷಿ ಜೀವನೋಪಾಯ ಚಟುವಟಿಕೆಗಳೊಂದಿಗೆ ಗ್ರಾಮೀಣ ಬಡಜನರ ಜೀವನೋಪಾಯವನ್ನು ಸುಧಾರಿಸಲು ಜೀವನೋಪಾಯ ಪ್ರಚಾರವು ಕೇಂದ್ರೀಕರಿಸಲಾಗಿದೆ.

ಎ) ಸ್ವಂತ ಉತ್ಪಾದನೆಯಿಂದ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆ ಖಚಿತಪಡಿಸಿಕೊಳ್ಳುವುದು.

ಬಿ) ವರ್ಷವಿಡೀ ಆದಾಯ ಹೆಚ್ಚಿಸಲು ಖಚಿತಪಡಿಸಿಕೊಳ್ಳುವುದು.

ಸಿ) ವಿಸ್ತರಣಾ ಸೇವಾ ಪೂರೈಕೆದಾರರಾಗಿ ಉತ್ತಮ ಅಭ್ಯಾಸಕಾರರಿಂದ ಸಾಮಾಜಿಕ ಬಂಡವಾಳವನ್ನು ರಚಿಸುವುದು.

**ಕೃಷಿ ಜೀವನೋಪಾಯ ಪ್ರಗತಿ ವಿವರಗಳನ್ನು ಕೋಷ್ಟಕ 16.7 ರಲ್ಲಿ ನೀಡಲಾಗಿದೆ.**

**ಕೋಷ್ಟಕ 16.7 ಕೃಷಿ ಜೀವನೋಪಾಯ ಪ್ರಗತಿ ವಿವರ (ನವೆಂಬರ್ 2022 ಅಂತ್ಯದವರೆಗೆ)**

| ಕ್ರ.ಸಂ | ಸೂಚಕಗಳು | ವಾರ್ಷಿಕ ಗುರಿ | ಸಾಧನೆ | ಶೇಕಡ |
|---|---|---|---|---|
| 1 | AEP ಮಧ್ಯಸ್ಥಿಕೆಗಳ ಅಡಿಯಲ್ಲಿ ಒಳಗೊಂಡಿರುವ ಮಹಿಳಾ ಕಿಸಾನ್‌ಗಳ ಸಂಖ್ಯೆ | 2,50,000 | 2,42,351 | 96.94 |
| 2 | ಜಾನುವಾರು ಮಧ್ಯಸ್ಥಿಕೆಗಳ ಅಡಿಯಲ್ಲಿ ಬೆಂಬಲಿತ ಮಹಿಳಾ ಕಿಸಾನ್ ಸಂಖ್ಯೆ | 1,50,000 | 1,35,650 | 90.43 |
| 3 | ಕೃಷಿ ಸಖಿ ಸಂಖ್ಯೆ (ಕೃಷಿ ಸಿಆರ್‌ಪಿ) | 5962 | 5,261 | 88.24 |
| 4 | ಪಶು ಸಖಿಗಳ ಸಂಖ್ಯೆ (ಜಾನುವಾರು ಸಿಆರ್‌ಪಿ) | 5962 | 5,154 | 86.45 |
| 5 | ಆರ್ಗಾನಿಕ್ ವಿಲೇಜ್ ಕ್ಲಸ್ಟರ್‌ಗಳ ಸಂಖ್ಯೆ (OVC) ಸ್ಥಾಪಿಸಲಾಗಿದೆ | 30 | 30 | 100.00 |
| 6 | PGS ಇಂಡಿಯಾ ಪೋರ್ಟಲ್‌ನಲ್ಲಿ ನೋಂದಾಯಿಸಲಾದ ಸ್ಥಳೀಯ ಗುಂಪಿನ ಸಂಖ್ಯೆ | 300 | 280 | 93.33 |
| 7 | NRETP ಯಲ್ಲಿ ಅಭಿವೃದ್ಧಿಪಡಿಸಲಾದ ಸಮಗ್ರ ಕೃಷಿ ಸಮೂಹಗಳ (IFC) ಸಂಖ್ಯೆ | 14 | 14 | 100.00 |
| 8 | ಕೃಷಿ ಪೌಷ್ಟಿಕ ಕೈತೋಟಗಳು (ANG) ಸ್ಥಾಪನೆ | 6,02,162 | 6,04,961 | 100.46 |
| 9 | ಸಸ್ಯ ನರ್ಸರಿಗಳ ಸ್ಥಾಪನೆ | 425 | 468 | 110.12 |

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಒಗ್ಗೂಡಿಸುವಿಕೆ ಕಾರ್ಯಕ್ರಮದಡಿ 6,02,164 ಕೃಷಿ ಪೌಷ್ಟಿಕ ಕೈತೋಟಗಳನ್ನು ಅಭಿವೃದ್ಧಿಪಡಿಸಲಾಗಿದೆ. ಸ್ವಸಹಾಯ ಗುಂಪಿನ ಸದಸ್ಯರಿಗಾಗಿ 50 ವರ್ಕ್ ಶೆಡ್, 2093 ಅಣಬೆ ಬೇಸಾಯ ಮತ್ತು 6838 ಮೇಕೆ ಶೆಡ್‌ಗಳನ್ನು ನಿರ್ಮಿಸಲಾಗಿದೆ. ಇದು ಸ್ವಸಹಾಯ ಗುಂಪಿನ ಸದಸ್ಯರ ಕುಟುಂಬಗಳ ಆರ್ಥಿಕ ಅಭಿವೃದ್ಧಿಗೆ ಅನುಕೂಲಕರವಾಗಲಿದೆ.
- ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯು ಕರ್ನಾಟಕ ರಾಜ್ಯದಲ್ಲಿ ಪ್ರಧಾನ ಮಂತ್ರಿ ಔಪಚಾರೀಕರಣ ಸೂಕ್ಷ್ಮ ಆಹಾರ ಸಂಸ್ಕರಣ ಉದ್ದಿಮೆಗಳ ಯೋಜನೆ (ಪಿ.ಎಂ.ಎಫ್.ಎಂ.ಇ) ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಸ್ಥೆಯಾಗಿದ್ದು, ಆಹಾರ ಉತ್ಪಾದನೆಗಳನ್ನು ತಯಾರಿಸುವ ಮಹಿಳಾ ಸದಸ್ಯರಿಗೆ ಪ್ರಾಥಮಿಕ ಅನುದಾನ (Seed Capital) ಒದಗಿಸಲಾಗುತ್ತಿದ್ದು, ಈ ಯೋಜನೆಯಡಿ ಒಟ್ಟು 3921 ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ರೂ.15.59 ಕೋಟಿಗಳು ವಿತರಿಸಲಾಗಿದೆ.
- 2022-23 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಕರ್ನಾಟಕಕ್ಕೆ 100 ವನ ಧನ ವಿಕಾಸ ಕೇಂದ್ರಗಳು ಸ್ಥಾಪಿಸಲು ರೂ 15.00 ಕೋಟಿಗಳ ಯೋಜನೆಗೆ ಮಂಜೂರಾತಿ ನೀಡಿದೆ. ಸಂಜೀವಿನಿ ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಈಗಾಗಲೇ ಶೇಕಡಾ 50ರಷ್ಟು ಅಂದರೆ ರೂ.7.5 ಕೋಟಿಗಳನ್ನು ಮುಂಗಡವಾಗಿ ಅನುದಾನ ಪಡೆದಿದ್ದು, ಕಾರ್ಯಕ್ರಮ ಅನುಷ್ಠಾನಕ್ಕಾಗಿ ಜಿಲ್ಲೆಗಳಿಗೆ ಈ ಅನುದಾನ ಬಿಡುಗಡೆ ಮಾಡಲಾಗಿದೆ.

## ಸ್ವಸಹಾಯ ಗುಂಪುಗಳ ಉತ್ಪನ್ನಗಳ ಮಾರಾಟವನ್ನು ಸುಲಭಗೊಳಿಸುವ ವ್ಯವಸ್ಥೆ:

- ರಾಷ್ಟ್ರ ಮಟ್ಟದ ಸಂಜೀವಿನಿ ವಸ್ತು ಪದರ್ಶನ ಮತ್ತು ಸರಸ್ ಮಾರಾಟ ಮೇಳಗಳ ಮೂಲಕ ರಾಜ್ಯದಿಂದ 306 ಸ್ವ ಸಹಾಯ ಗುಂಪಿನ ಮಹಿಳೆಯರು ಪಾಲ್ಗೊಂಡಿದ್ದು, ಈ ಮೇಳದಲ್ಲಿ ರೂ 3.00 ಕೋಟಿಗಳಷ್ಟು ಮಾರಾಟ ವಹಿವಾಟು ನಡೆಸಲಾಗಿದೆ.
- ಚಿತ್ರಕಲಾ ಪರಿಷತ್‌ನ ಮಾರಾಟ ಮಳಿಗೆಯಲ್ಲಿ 2022-23 ರ ಅವಧಿಯಲ್ಲಿ 120 ಸ್ವ ಸಹಾಯ ಗುಂಪಿನ ಮಹಿಳೆಯರು ಪಾಲ್ಗೊಂಡಿದ್ದು, ಈ ಮೇಳದಲ್ಲಿ ರೂ 0.35 ಕೋಟಿಗಳಷ್ಟು ಮಾರಾಟ ವಹಿವಾಟು ನಡೆಸಲಾಗಿದೆ.
- ಬೆಳಗಾವಿ ಅಧಿವೇಶನದ ನಿಮಿತ್ತ ಬೃಹತ್ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳ ವ್ಯವಸ್ಥೆಯನ್ನು ದಿನಾಂಕ: 22-12-2022 ರಿಂದ 30-12-2022 ರವರೆಗೆ ನಡೆಸಲಾಗಿದೆ. ಈ ಮೇಳದಲ್ಲಿ 140 ಸ್ವ ಸಹಾಯ ಗುಂಪುಗಳು ಭಾಗವಹಿಸಿದ್ದು, ರೂ.95.00 ಲಕ್ಷ ಮಾರಾಟ ವಹಿವಾಟು ದಾಖಲಾಗಿರುತ್ತದೆ.

**ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆಯಡಿ** ರಾಜ್ಯದ 3 ಗದಗ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಯ 13 ತಾಲೂಕುಗಳಲ್ಲಿ ಒನ್ ಸ್ಟಾಪ್ ಸೆಂಟರ್ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ, ಇದರಿಂದ ಮುಂದಿನ ಮೂರು ವರ್ಷಗಳಲ್ಲಿ 2017 ಸ್ವಸಹಾಯ ಗುಂಪಿನ ಮಹಿಳೆಯರು ಉದ್ಯಮವನ್ನು ಪ್ರಾರಂಭಿಸಲು ಅನುಕೂಲವಾಗುತ್ತದೆ.

**ಸ್ತ್ರೀ ಸಾಮರ್ಥ್ಯ ಯೋಜನೆಯಡಿ** 50000 ಸ್ವ ಸಹಾಯ ಗುಂಪುಗಳಿಗೆ ಆಯ್ದ 15 ಉತ್ಪನ್ನಗಳ ಉತ್ಪಾದನೆಯನ್ನು ಮೇಲ್ದರ್ಜೆಗೆ ಏರಿಸಿ ಮಾರುಕಟ್ಟೆಗಳ ಅನುಕೂಲಕ್ಕಾಗಿ ತಲಾ 1.00 ಲಕ್ಷಗಳಂತೆ ಒದಗಿಸಲಾಗುತ್ತಿದೆ. ಸದರಿ ಯೋಜನೆಯಡಿ ಒಟ್ಟು 42000 ಸ್ವ ಸಹಾಯ ಗುಂಪುಗಳು ನೋಂದಣಿಯಾಗಿರುತ್ತದೆ.

## ಪ್ರಾರಂಭಿಕ ಗ್ರಾಮೀಣ ಉದ್ಯಮಶೀಲತಾ ಯೋಜನೆ:

ಈ ಯೋಜನೆಯು ಗ್ರಾಮೀಣ ಬಡವರಿಗೆ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಬಡತನದಿಂದ ಹೊರಬರಲು ಮತ್ತು ಉದ್ಯಮವು ಸ್ಥಿರಗೊಳ್ಳುವವರೆಗೆ ಬೆಂಬಲವನ್ನು ಒದಗಿಸುವ ಗುರಿಯನ್ನು ಹೊಂದಲಾಗಿದೆ. ಮುಂದಿನ ನಾಲ್ಕು ವರ್ಷಗಳ ಒಳಗಾಗಿ ಕನಿಷ್ಠ 2400 ಸ್ವಸಹಾಯ ಗುಂಪಿನ ಮಹಿಳೆಯರು ಉದ್ಯಮ ಒಡೆತನ ಹೊಂದುವುದು ಮತ್ತು ನಿರ್ವಹಿಸುವುದಕ್ಕಾಗಿ ಬೆಂಬಲಿಸಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಆಲೂರು, ಚನ್ನರಾಯಪಟ್ಟಣ, ಶಿರಸಿ, ಹುಣಸೂರು, ದೇವನಹಳ್ಳಿ, ರಾಮನಗರ, ಕೊಪ್ಪಳ ಮತ್ತು ಟಿ.ನರಸೀಪುರ ಬ್ಲಾಕ್‌ಗಳನ್ನು ಅನುಮೋದಿಸಿದೆ. 2022-23ನೇ ಸಾಲಿಗೆ ಪ್ರತಿ ತಾಲೂಕಿಗೆ ರೂ.5.97 ಕೋಟಿ ವೆಚ್ಚ ಭರಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ರೂ.50.00 ಲಕ್ಷ ಸಮುದಾಯ ಉದ್ಯಮ ನಿಧಿಯನ್ನು ಕೊಪ್ಪಳ, ಚನ್ನರಾಯಪಟ್ಟಣ ಮತ್ತು ಟಿ. ನರಸೀಪುರ ಬ್ಲಾಕ್‌ಗಳಿಗೆ ಬಿಡುಗಡೆಗೊಳಿಸಲಾಗಿದೆ. ರಾಮನಗರ ಮತ್ತು ದೇವನಹಳ್ಳಿ ಬ್ಲಾಕ್‌ಗಳ ವಿವರವಾದ ಯೋಜನಾ ವರದಿಯನ್ನು 2022 ರ ನವೆಂಬರ್‌ನಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಅನುಮೋದಿಸಿದೆ. ಇತ್ತೀಚೆಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

## ಗ್ರಾಮೀಣ ಸ್ವ ಉದ್ಯಮ ತರಬೇತಿ ಕೇಂದ್ರಗಳು (ಆರ್‌ಎಸ್‌ಇಟಿಐ)

ಆರ್‌ಸೆಟಿ ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿ ಯುವಕ-ಯುವತಿಯರಿಗೆ ಸ್ವಉದ್ಯೋಗ ಕುರಿತು ವಿವಿಧ ರೀತಿಯ ತರಬೇತಿ ನೀಡುತ್ತಿರುವ ಕೇಂದ್ರಗಳಾಗಿವೆ. ರಾಜ್ಯದಲ್ಲಿನ 29 ಜಿಲ್ಲೆಗಳಲ್ಲಿ ಪ್ರಸ್ತುತ 33 ತರಬೇತಿ ಕೇಂದ್ರಗಳಿದ್ದು, ಅವಶ್ಯಕವಾದ ಎಲ್ಲಾ ಸೌಕರ್ಯಗಳು ಮತ್ತು ಮಾನವ ಸಂಪನ್ಮೂಲವನ್ನು ಹೊಂದಿವೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸುಮಾರು 62 ವಿವಿಧ ರೀತಿಯ ತರಬೇತಿಗಳನ್ನು ನೀಡಲಾಗುತ್ತಿದೆ. ಗ್ರಾಮೀಣ ಯುವಕರಿಗೆ ನೀಡಿದ ತರಬೇತಿಯ ಪ್ರಗತಿ ವಿವರಗಳನ್ನು **ಕೋಷ್ಟಕ 16.7** ರಲ್ಲಿ ನೀಡಲಾಗಿದೆ.

**ಕೋಷ್ಟಕ 16.8 : ಆರ್‌ಎಸ್‌ಇಟಿಐ ಸಂಸ್ಥೆಗಳಲ್ಲಿ 2022-23ನೇ ಸಾಲಿನ ಪ್ರಗತಿ.**

**(ನವೆಂಬರ್ 2022 ಅಂತ್ಯದವರೆಗೆ)**

| | |
|---|---|
| ಒಟ್ಟು ಗುರಿ | 23897 |
| ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳು | 18790 |
| ತರಬೇತಿ ಪಡೆದ ಒಟ್ಟು ಬಿ.ಪಿ.ಎಲ್ ಅಭ್ಯರ್ಥಿಗಳು | 17951 |
| ತರಬೇತಿ ಪಡೆದ ಒಟ್ಟು ಪರಿಶಿಷ್ಟ ಜಾತಿ ಅಭ್ಯರ್ಥಿಗಳು | 4848 |
| ತರಬೇತಿ ಪಡೆದ ಒಟ್ಟು ಪರಿಶಿಷ್ಟ ಪಂಗಡ ಅಭ್ಯರ್ಥಿಗಳು | 1981 |
| ತರಬೇತಿ ಪಡೆದ ಒಟ್ಟು ಅಲ್ಪಸಂಖ್ಯಾತ ಅಭ್ಯರ್ಥಿಗಳು | 1076 |
| ತರಬೇತಿ ಪಡೆದ ಒಟ್ಟು ಮಹಿಳಾ ಅಭ್ಯರ್ಥಿಗಳು | 13293 |
| ಬ್ಯಾಂಕ್ ಸಾಲ ನೆರವು ಪಡೆದ ಒಟ್ಟು ಅಭ್ಯರ್ಥಿಗಳು | 2580 |
| ಸ್ವಂತ ಬಂಡವಾಳ ತೊಡಗಿಸಿದ ಒಟ್ಟು ಅಭ್ಯರ್ಥಿಗಳು | 2075 |
| ಉದ್ಯೋಗ ರೂಪಿಸಿದ ಅಭ್ಯರ್ಥಿಗಳು | 113 |

## ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯುಜಿಕೆವೈ)

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಯೋಜನೆಯಾಗಿದ್ದು, ಈ ಯೋಜನೆಯನ್ನು "ಆಜೀವಿಕಾ ಕೌಶಲ್ಯಾಭಿವೃದ್ಧಿ ಯೋಜನೆ" ಎಂದು ಪ್ರಾರಂಭ ಮಾಡಿದ್ದು, "ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯಯೋಜನೆ" ಎಂದು ಮರುನಾಮಕರಣ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಅವುಗಳ ಸಹಯೋಗದೊಂದಿಗೆ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ. ರಾಜ್ಯದಲ್ಲಿ ಕಾರ್ಯಕ್ರಮಗಳನ್ನು ಸುಗಮವಾಗಿ ಕಾರ್ಯಗತಗೊಳಿಸಲು ಸಮುದಾಯ ಆಧಾರಿತ ಕಾರ್ಯಾಚರಣೆಗಳ ಒಳಗೊಳ್ಳುವಿಕೆಯನ್ನೊಳಗೊಂಡ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಿದೆ. ಇಲ್ಲಿಯವರೆಗೆ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ (ಡಿಡಿಯು-ಜಿಕೆವೈ) 54 ಯೋಜನಾ ಅನುಷ್ಠಾನ ಸಂಸ್ಥೆಗಳೊಂದಿಗೆ (ಎಂಓಯು) ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು ಗುರಿಯನ್ನು ಅವರ ಯೋಜನೆ ಪ್ರಕಾರ ನಿಗದಿಪಡಿಸಲಾಗಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ 54000 ಅಭ್ಯರ್ಥಿಗಳ ತರಬೇತಿಯನ್ನು ಆರಂಭದಲ್ಲಿ ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಅಧಿಕಾರಯುಕ್ತ ಸಮಿತಿಯು ಮೂರು ವರ್ಷಗಳ ಬೆಂಬಲ ವೆಚ್ಚ ಸೇರಿದಂತೆ ರೂ.692.78 ಕೋಟಿ ವೆಚ್ಚಕ್ಕೆ ಅನುಮೋದನೆ ನೀಡಿದೆ. ತತ್ಸಂಬಂಧದ ಭೌತಿಕ ಪ್ರಗತಿಯ ವಿವರಗಳನ್ನು **ಕೋಷ್ಟಕ 16.8** ರಲ್ಲಿ ನೀಡಿದೆ.

**ಕೋಷ್ಟಕ 16.9: ಡಿಡಿಯುಜಿಕೆವೈ ಯೋಜನೆಯ ಪ್ರಗತಿ** 2018-19 ರಿಂದ 2020-21 **ರವರೆಗೆ**

| ಯೋಜನಾ ಅನುಷ್ಠಾನ ಸಂಸ್ಥೆಗಳು (54) | ಗುರಿ | ತರಬೇತಿ ಮತ್ತು ಉದ್ಯೋಗ ದೊರಕಿಸಿರುವುದು (ಸೆಪ್ಟೆಂಬರ್ 2020ರವರೆಗೆ) | | |
|---|---|---|---|---|
| | | ತರಬೇತಿ ಪ್ರಾರಂಭ ಆಗಿರುವುದು | ತರಬೇತಿ ಪೂರ್ಣಗೊಂಡಿರುವುದು | ಉದ್ಯೋಗ ಒದಗಿಸಿರುವುದು |
| 2019-20 ರಿಂದ 2022-23ನೇ ಸಾಲಿನ ವರೆಗೆ | 54,000* | 50,888 | 44,564 | 25,095 |
| 2022-23ನೇ ಆರ್ಥಿಕ ವರ್ಷದ ಪ್ರಗತಿ | 14000 | 1854 | 2380 | 544 |

# ದೀನದಯಾಳ್ ಅಂತ್ಯೋದಯ ಯೋಜನೆ – ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಎನ್.ಯು.ಎಲ್.ಎಂ)

## ಯೋಜನೆಯ ಹಿನ್ನಲೆ:

- ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಮಂತ್ರಾಲಯ ಭಾರತ ಸರ್ಕಾರ ರವರು ಎಸ್.ಜೆ.ಎಸ್.ಆರ್.ವೈ ಯೋಜನೆಯನ್ನು 2014 ರಿಂದ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯೆಂದು ಮರು ನಾಮಕರಣ ಮಾಡಲಾಗಿರುತ್ತದೆ ಹಾಗೂ 2016–17ನೇ ಸಾಲಿನಲ್ಲಿ ಸದರಿ ಯೋಜನೆಯನ್ನು ದೀನದಯಾಳ್ ಅಂತ್ಯೋದಯ ಯೋಜನೆ ಎಂದು ಮರುನಾಮಕರಣ ಮಾಡಿ ಅನುಷ್ಠಾನಗೊಳಿಸಲಾಗಿರುತ್ತದೆ.
- ಕರ್ನಾಟಕ ಸರ್ಕಾರ ಡೇ–ನಲ್ಮ್ ಅಭಿಯಾನವನ್ನು ಅನುಷ್ಠಾನಗೊಳಿಸಲು ದಿ:01.10.2016 ರಂದು ಅನುಮೋದನೆ ನೀಡಿರುತ್ತದೆ.
- ದಿನಾಂಕ: 01.01.2018ರಂದು ಡೇ–ನಲ್ಮ್ ಅಭಿಯಾನವು ನಗರಾಭಿವೃದ್ಧಿ ಇಲಾಖೆಯಿಂದ ಕೌಶಲ್ಯಾಭಿವೃದ್ಧಿ ಇಲಾಖೆಗೆ ಪೂರ್ಣ ಪ್ರಮಾಣದಲ್ಲಿ ವರ್ಗಾಯಿಸಿ ಅನುಷ್ಠಾನಗೊಳಿಸಲಾಗಿದೆ.
- ರಾಜ್ಯದ 11 ಮಹಾನಗರ ಪಾಲಿಕೆ, 57 ನಗರಸಭೆ, 115 ಪುರಸಭೆ ಮತ್ತು 94 ಪಟ್ಟಣ ಪಂಚಾಯಿತಿಗಳನ್ನೊಳಗೊಂಡು ಒಟ್ಟು 277 ನಗರ / ಪಟ್ಟಣ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

## ಅಭಿಯಾನದ ಉದ್ದೇಶ:–

- ನಗರದ ಬಡಜನರನ್ನು ಬಡತನ ರೇಖೆಯಿಂದ ಮೇಲೆ ತರುವುದು.
- ನಗರ ಪ್ರದೇಶದ ಮಹಿಳಾ ಸ್ವ–ಸಹಾಯ ಸಂಘ, ನಗರ/ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಮತ್ತು ಸದಸ್ಯರ ಸಬಲೀಕರಣ.
- ನಗರದ ನಿರುದ್ಯೋಗ ಯುವಕ ಯುವತಿಯರಿಗೆ ಉಚಿತವಾಗಿ ಉದ್ಯೋಗಾಧರಿತ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದು.
- ನಗರ ಪ್ರದೇಶದಲ್ಲಿನ ಬಡವರಿಗೆ ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ಬ್ಯಾಂಕುಗಳಿಂದ ಸಾಲ ಮತ್ತು ಬಡ್ಡಿ ಸಹಾಯಧನವನ್ನು ಒದಗಿಸುವುದು.
- ನಗರ ಪ್ರದೇಶದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ವಿತರಣೆ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳೊಂದಿಗೆ ಸಂಪರ್ಕ ಕಲ್ಪಿಸುವುದು.
- ನಗರ ಪ್ರದೇಶದ ವಸತಿ ರಹಿತರಿಗೆ 24x7 ವಸತಿ ತಂಗುದಾಣವನ್ನು ಒದಗಿಸುವುದು.

**ಯೋಜನೆಯ ಫಲಾನುಭವಿಗಳು :–**

- ನಗರದ ಬಡ ವರ್ಗದ ಜನರು – ನಗರದ ವಸತಿ ರಹಿತರು – ನಗರದ ಬೀದಿ ಬದಿ ವ್ಯಾಪಾರಸ್ಥರು – ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು – ಮಹಿಳೆಯರು – ಅಲ್ಪಸಂಖ್ಯಾತರು – ವಿಕಲಚೇತನರು ಈ ಯೋಜನೆಯ ಮುಖ್ಯ ಫಲಾನುಭವಿಗಳಾಗಿರುತ್ತಾರೆ.

ಯೋಜನೆಯ ಘಟಕಾಂಶಗಳ ವಿವರ :-

**1. ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ :**

ಸದರಿ ಉಪಘಟಕವು ಈ ಕೆಳಕಂಡ ಮೂರು ಉಪಸ್ತರಗಳನ್ನು ಹೊಂದಿರುತ್ತದೆ.

**1) ಸ್ವ–ಸಹಾಯ ಸಂಘಗಳ ರಚನೆ – ಮಹಿಳೆಯರ ಮತ್ತು ಅಂಗವಿಕಲ ಪುರುಷರನ್ನೊಳಗೊಂಡ ಸಂಘಗಳ ರಚನೆ.**

- ಪ್ರತಿ ಸ್ವ–ಸಹಾಯ ಸಂಘ 10 ರಿಂದ 20 ಸದಸ್ಯರನ್ನೊಳಗೊಂಡಂತೆ ರಚಿಸಲಾಗುತ್ತದೆ.
- ಸ್ವ–ಸಹಾಯ ಸಂಘವು ರಚನೆಯಾಗಿ ಮೂರು ತಿಂಗಳು ಪೂರ್ಣಗೊಂಡ ನಂತರ ಪ್ರತಿ ಸ್ವ–ಸಹಾಯ ಸಂಘಕ್ಕೆ ರೂ.10,000/-
- ರೂ.1,00,000/–ರವರೆಗೆ ಪ್ರತಿ ಸ್ವ–ಸಹಾಯ ಸಂಘಕ್ಕೆ ಬ್ಯಾಂಕ್‌ನಿಂದ ಕ್ರೆಡಿಟ್ ಲಿಂಕೇಜ್ ಮಾಡಿಸಲಾಗುವುದು ಮತ್ತು ಶೇ.7ಕ್ಕಿಂತ ಹೆಚ್ಚಿನ ಬಡ್ಡಿ ಸಹಾಯಧನ ಹಾಗೂ ನಿಗದಿತ ಪಾವತಿಗೆ ಹೆಚ್ಚುವರಿಯಾಗಿ ಶೇ.3ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನವನ್ನು ನೀಡಲಾಗುವುದು.
- ಸ್ವ–ಸಹಾಯ ಸಂಘಗಳಿಂದ ಉತ್ಪಾದಿಸಲ್ಪಟ್ಟ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವ ಸಂಬಂಧ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳಲ್ಲಿ ಭಾಗವಹಿಸಲು ಸಹಕರಿಸುವುದು.

**2) ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ – ಸ್ವ–ಸಹಾಯ ಸಂಘಗಳ ಸದಸ್ಯರಿಂದ ರಚಿಸುವುದು.**

- 10 ರಿಂದ 20 ಸ್ವ–ಸಹಾಯ ಸಂಘಗಳನ್ನೊಳಗೊಂಡು ಒಂದು ಪ್ರದೇಶ ಮಟ್ಟದ ಒಕ್ಕೂಟವನ್ನು ರಚಿಸಲಾಗುತ್ತದೆ.
- ಪ್ರದೇಶ ಮಟ್ಟದ ಒಕ್ಕೂಟವು ರಚನೆಯಾಗಿ ನೋಂದಣಿಯಾದ ನಂತರ ಪ್ರತಿ ಪ್ರದೇಶ ಮಟ್ಟದ ಒಕ್ಕೂಟಕ್ಕೆ ರೂ.50,000/- ಆವರ್ತಕ ನಿಧಿಯನ್ನು ನೀಡಲಾಗುವುದು.
- ಸ್ವ–ಸಹಾಯ ಸಂಘಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ – ದಾಖಲೆಗಳ ನಿರ್ವಹಣೆ, ಆರ್ಥಿಕ ಒಳಗೊಳ್ಳುವಿಕೆ, ಸಾಮಾಜಿಕ ಭದ್ರತಾ ಯೋಜನೆಗಳೊಂದಿಗೆ ಸಮನ್ವಯ ಇತ್ಯಾದಿ.,
- ಪ್ರದೇಶ ಮಟ್ಟದ ಒಕ್ಕೂಟವು ಜೀವನೋಪಾಯ, ಸಾಮಾಜಿಕ ಭದ್ರತೆ, ಆರ್ಥಿಕ ಒಳಗೊಳ್ಳುವಿಕೆಗಳನ್ನೊಳಗೊಂಡ ಸಮಿತಿಗಳನ್ನು ರಚಿಸಲಾಗುತ್ತದೆ.

3) ನಗರ ಮಟ್ಟದ ಒಕ್ಕೂಟಗಳ ರಚನೆ – ಪ್ರದೇಶ ಮಟ್ಟದ ಒಕ್ಕೂಟಗಳ ಸದಸ್ಯರಿಂದ ರಚಿಸುವುದು.

- ಯಾವುದೇ ಹಣಕಾಸು ಬೆಂಬಲಕ್ಕೆ ಅವಕಾಶ ಕಲ್ಪಿಸಲಾಗಿರುವುದಿಲ್ಲ.
- ಪ್ರದೇಶ ಮಟ್ಟದ ಒಕ್ಕೂಟಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ – ಆದಾಯ ಉತ್ಪನ್ನ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವುದು.
- ಪ್ರದೇಶ ಮಟ್ಟದ ಒಕ್ಕೂಟಗಳಿಗೆ ಸುಸ್ಥಿರತೆಯನ್ನು ಕಾಪಾಡಲು ಮತ್ತು ವಿವಿಧ ಇಲಾಖೆಗಳೊಂದಿಗೆ ಸಂಪರ್ಕ ಸಾಧಿಸಲು ಸಹಕರಿಸುವುದು.





4) <u>ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ :</u>

- ಪ್ರತಿ ಫಲಾನುಭವಿಗೆ 3 ರಿಂದ 4 ತಿಂಗಳ ಉಚಿತ ಕೌಶಲ್ಯಾಭಿವೃದ್ಧಿ ತರಬೇತಿ.
- ನಗರ ಪ್ರದೇಶದ ನಿರುದ್ಯೋಗ ಯುವಕ ಯುವತಿಯರಿಗೆ ಉದ್ಯೋಗಾಧರಿತ ಕೌಶಲ್ಯಾಭಿವೃದ್ಧಿ ತರಬೇತಿ.
- ವಿವಿಧ ಸರ್ಕಾರಿ ಸ್ವಾಮ್ಯದ ಖಾಸಗಿ ತರಬೇತಿ ಸಂಸ್ಥೆಗಳ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿಗಳ ಆಯೋಜನೆ.
- ಪ್ರತಿ ಫಲಾನುಭವಿಗೆ ರೂ.15,000/–ರವರೆಗೆ ತರಬೇತಿ ವೆಚ್ಚವನ್ನು ಭರಿಸಲಾಗುವುದು.
- ತರಬೇತಿ ಪೂರ್ಣಗೊಂಡ ನಂತರ ಮೌಲ್ಯಮಾಪನ ಮಾಡಿ ಪ್ರಮಾಣಪತ್ರ ವಿತರಿಸಲಾಗುವುದು.
- ತರಬೇತಿ ಪಡೆದ ಅಭ್ಯರ್ಥಿಗಳಿಗೆ ವೇತನಾಧರಿತ ಉದ್ಯೋಗ ಅಥವಾ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ.





5) ಸ್ವಯಂ ಉದ್ಯೋಗ ಕಾರ್ಯಕ್ರಮ :

- ನಗರ ಪ್ರದೇಶದ ಯುವಕ ಯುವತಿಯರಿಗೆ ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆ ಸ್ಥಾಪಿಸಲು ಬ್ಯಾಂಕಿನಿಂದ ಸಾಲ ಮತ್ತು ಬಡ್ಡಿ ಸಹಾಯಧನ.
- ವೈಯಕ್ತಿಕ ಕಿರು ಉದ್ದಿಮೆ ಸ್ಥಾಪಿಸಲು ರೂ.2.00 ಲಕ್ಷದವರೆಗೆ ಸಾಲ ಸೌಲಭ್ಯ.
- ಗುಂಪು ಕಿರು ಉದ್ದಿಮೆ ಸ್ಥಾಪಿಸಲು ರೂ.10,00,000/-ರವರೆಗೆ ಸಾಲ ಸೌಲಭ್ಯ.
- ಸಾಲದ ಮೊತ್ತಕ್ಕೆ ಶೇ.7ಕ್ಕಿಂತ ಮೇಲ್ಪಟ್ಟು ವಿಧಿಸುವ ಬಡ್ಡಿಗೆ ಸಹಾಯಧನ ಪಾವತಿ.







## 6) ನಗರ ಬೀದಿ ಬದಿ ವ್ಯಾಪಾರಸ್ಥರಿಗೆ ಬೆಂಬಲ :

- ಸಮೀಕ್ಷೆ ಮೂಲಕ ಬೀದಿ ಬದಿ ವ್ಯಾಪಾರಸ್ಥರನ್ನು ಗುರುತಿಸುವಿಕೆ.
- ಗುರುತಿಸಲ್ಪಟ್ಟ ಬೀದಿ ವ್ಯಾಪಾರಸ್ಥರಿಗೆ ಗುರುತಿನ ಚೀಟಿ ಹಾಗೂ ಮಾರಾಟ ಪ್ರಮಾಣ ಪತ್ರವನ್ನು ವಿತರಿಸುವುದು. ಪಟ್ಟಣ ಮಾರಾಟ ಯೋಜನೆಗೆ ಆರ್ಥಿಕ ಸಹಾಯ.
- ಮಾರುಕಟ್ಟೆಯ ಪ್ರದೇಶ ಮಟ್ಟದ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮತ್ತು ಪೂರೈಕೆ.
- ಸಾಮರ್ಥ್ಯ ಅಭಿವೃದ್ಧಿ ತರಬೇತಿ – ಆರ್ಥಿಕ ಒಳಗೊಳ್ಳುವಿಕೆ, ಆರೋಗ್ಯ ಮತ್ತು ನೈರ್ಮಲ್ಯ ಕುರಿತು ಅರಿವು, ಸಾಮಾಜಿಕ ಭದ್ರತಾ ಯೋಜನೆಗಳೊಂದಿಗೆ ಸಮನ್ವಯ.
- ಬೀದಿ ಬದಿ ವ್ಯಾಪಾರಸ್ಥರ ಜೀವನೋಪಾಯ (ಜೀವನೋಪಾಯ, ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಅಧಿನಿಯಮ, 2014ನ್ನು ಅಳವಡಿಸಿಕೊಳ್ಳಲಾಗಿದೆ.
- ಕರ್ನಾಟಕ ರಾಜ್ಯ ಬೀದಿ ಬದಿ ವ್ಯಾಪಾರಸ್ಥರ (ಸಂರಕ್ಷಣೆ, ಜೀವನೋಪಾಯ ಮತ್ತು ನಿಯಂತ್ರಣ) ನಿಯಮಗಳು, 2019ನ್ನು ದಿನಾಂಕ:12.06.2019 ರಿಂದ ಜಾರಿಗೊಳಿಸಲಾಗಿರುತ್ತದೆ.
- ರಾಜ್ಯದ 275 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಟ್ಟಣ ಮಾರಾಟ ಸಮಿತಿಗೆ ಚುನಾವಣೆಯನ್ನು ನಡೆಸಲಾಗಿದ್ದು, ಬೀದಿ ವ್ಯಾಪಾರಿಗಳ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗಿರುತ್ತದೆ.





## 7) ನಗರದ ವಸತಿ ರಹಿತರಿಗೆ ಆಶ್ರಯ:

- ನಗರದ ವಸತಿ ರಹಿತರಿಗೆ ಮೂಲಭೂತ ಸೌಲಭ್ಯಗಳೊಂದಿಗೆ 24X7 ಆಶ್ರಯ ವ್ಯವಸ್ಥೆ ಕಲ್ಪಿಸುವುದು.
- ಮೂರನೇ ವ್ಯಕ್ತಿ ಸಮೀಕ್ಷೆ ಮತ್ತು ರ್‍ಯಾಪಿಡ್ ಸಮೀಕ್ಷೆಯ ಮೂಲಕ ನಗರದ ವಸತಿ ರಹಿತರನ್ನು ಗುರುತಿಸುವುದು.
- ವಸತಿ ರಹಿತರಿಗೆ ಸಮಾಲೋಚನೆ, ಪುನರ್ವಸತಿ, ಆರೋಗ್ಯ ತಪಾಸಣೆ ಮತ್ತು ಆಹಾರ ಒದಗಿಸುವುದು.
- ವಸತಿ ರಹಿತರಿಗೆ ಇತರೆ ಸಾಮಾಜಿಕ ಭದ್ರತಾ ಯೋಜನೆಗಳೊಂದಿಗೆ ಹೊಂದಾಣಿಕೆ ಮಾಡುವುದು ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನೀಡುವುದು.
- ಹೊಸ ಆಶ್ರಯ ಕಟ್ಟಡ ನಿರ್ಮಾಣ, ನಿರ್ವಹಣೆ ಮತ್ತು ನವೀಕರಣ ಚಟುವಟಿಕೆಗಳಿಗೆ ಆರ್ಥಿಕ ಸಹಾಯ.

- ಪ್ರಸ್ತುತ ರಾಜ್ಯಾದ್ಯಂತ 39 ನಗರ ಸ್ಥಳೀಯ ಸಂಸ್ಥೆಗಳು ಹಾಗೂ 8 ಬಿಬಿಎಂಪಿ ವಲಯಗಳು ಸೇರಿ ಒಟ್ಟು 47 ನಗರದ ವಸತಿ ರಹಿತರ ಆಶ್ರಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 2101 ನಗರದ ನಿರಾಶ್ರಿತರು ಆಶ್ರಯ ಪಡೆದಿರುತ್ತಾರೆ.
- ಒಟ್ಟು 118 ನಗರ ವಸತಿ ರಹಿತರ ಆಶ್ರಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ. 4073 ಸಾಮಾರ್ಥ್ಯವನ್ನು ಹೊಂದಿರುತ್ತದೆ.
- 3ನೇ ವ್ಯಕ್ತಿ ಸಮೀಕ್ಷೆಯ ಮೂಲಕ ಒಟ್ಟು 7372 ನಗರ ವಸತಿ ರಹಿತರವನ್ನು ಗುರುತಿಸಲಾಗಿರುತ್ತದೆ.
- 2458 ನಗರ ವಸತಿರಹಿತರಿಗೆ ಕೋವಿಡ್-19 ಪ್ರಥಮ ಹಂತದ ಲಸಿಕೆಯನ್ನು ನೀಡಲಾಗಿರುತ್ತದೆ.
- 2256 ನಗರ ವಸತಿರಹಿತರಿಗೆ ಕೋವಿಡ್-19 ಎರಡನೇ ಹಂತದ ಲಸಿಕೆಯನ್ನು ನೀಡಲಾಗಿರುತ್ತದೆ.
- 135 ನಗರ ವಸತಿರಹಿತರಿಗೆ ಕೋವಿಡ್-19 ಬೂಸ್ಟೇಜ್ ಡೋಸ್ ಲಸಿಕೆಯನ್ನು ನೀಡಲಾಗಿರುತ್ತದೆ.
- 41 ಅಧಿಕಾರಯುಕ್ತ ಸಮಿತಿ ಸಭೆಯನ್ನು ನಡೆಸಲಾಗಿರುತ್ತದೆ.
- 68 ಆಶ್ರಯ ಕೇಂದ್ರ ನಿರ್ವಹಣಾ ಸಮಿತಿ ಸಭೆಯನ್ನು ನಡೆಸಲಾಗಿರುತ್ತದೆ.
- 331 ನಗರ ವಸತಿರಹಿತರಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಪಡೆದುಕೊಂಡಿರುತ್ತಾರೆ.







## 'ಪ್ರಧಾನಮಂತ್ರಿ ಬೀದಿ ವ್ಯಾಪಾರಿಗಳ ಆತ್ಮ ನಿರ್ಭರ್ ನಿಧಿ'ಯ (PM SVANidhi)

## 'ವಿಶೇಷ ಕಿರು ಸಾಲ ಸೌಲಭ್ಯ ಯೋಜನೆ' (Special Micro Credit facility Scheme)

ಕೋವಿಡ್-19 ಹಾಗೂ ಲಾಕ್‌ಡೌನ್ ಅವಧಿಯು ಬೀದಿ ವ್ಯಾಪಾರಸ್ಥರ ಜೀವನೋಪಾಯದ ಮೇಲೆ ಪ್ರತಿಕೂಲ ಪರಿಣಾಮವನ್ನು ಅಗಾದವಾಗಿ ಬೀರಿದ್ದು, ಬೀದಿ ವ್ಯಾಪಾರಿಗಳ ಜೀವನೋಪಾಯ ಅಭಿವೃದ್ಧಿಗಾಗಿ ಹಾಗೂ ಅವರ ವ್ಯವಹಾರವನ್ನು ಪುನರ್ ಪ್ರಾರಂಭಿಸಲು ಬಂಡವಾಳವನ್ನು ಒದಗಿಸುವ ತುರ್ತು ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಯೋಜನೆಯನ್ನು ಮೇ-2020 ರಿಂದ ಜಾರಿ ಮಾಡಲಾಗಿರುತ್ತದೆ.

1) **ಯೋಜನೆಯ ಉದ್ದೇಶಗಳು:**

ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪೂರ್ಣ ಪ್ರಮಾಣದಲ್ಲಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ರವರಿಂದ ಅನುದಾನವನ್ನು ನೀಡಲಾಗುತ್ತದೆ. ಉದ್ದೇಶ ಈ ಕೆಳಕಂಡಂತಿರುತ್ತವೆ.

1. ಬೀದಿ ವ್ಯಾಪಾರಸ್ಥರಿಗೆ ಕೈಗೆಟಕುವ ದರದಲ್ಲಿ ಬಂಡವಾಳ ಹಾಗೂ ಸಾಲ ಸೌಲಭ್ಯವನ್ನು ರೂ.10,000/- ರವರೆಗೆ ಒದಗಿಸುವುದು.
2. ನಿಯಮಿತವಾಗಿ ಮರುಪಾವತಿಗೆ ಉತ್ತೇಜಿಸುವುದು; ಹಾಗೂ
3. ಡಿಜಿಟಲ್ ವಹಿವಾಟಿಗೆ ಉತ್ತೇಜನ ಮತ್ತು ಬಹುಮಾನ ವಿತರಣೆ.

ಪ್ರಗತಿ ವಿವರ:

| ವಿವರ | ಸಾಧನೆ |
|---|---|
| ಸಲ್ಲಿಸಿರುವ ಅರ್ಜಿಗಳು | 298702 |
| ಮಂಜೂರಾತಿ ನೀಡಿರುವ ಅರ್ಜಿಗಳು | 234316 |
| ವಿತರಣೆಯಾಗಿರುವ ಅರ್ಜಿಗಳು | 199049 |
| ಒಟ್ಟು ಸಾಲ ಮಂಜೂರಾತಿ | ರೂ.294.86 ಕೋಟಿ |
| ಒಟ್ಟು ಸಾಲ ವಿತರಣೆ | ರೂ.243.51 ಕೋಟಿ |
| ಬೀದಿ ವ್ಯಾಪಾರಿಗಳಿಗೆ ಕ್ಯಾಶ್ ಬ್ಯಾಕ್ | ರೂ.152.00 ಕೋಟಿ |
| ಬಡ್ಡಿ ಸಹಾಯಧನ | ರೂ.3.48 ಕೋಟಿ |
| **ಪ್ರಥಮ ಹಂತದ ಕಿರು ಸಾಲ ಸೌಲಭ್ಯ** | |
| ಸಲ್ಲಿಸಿರುವ ಅರ್ಜಿಗಳು | 217829 |
| ಮಂಜೂರಾತಿ ನೀಡಿರುವ ಅರ್ಜಿಗಳು | 178464 |
| ವಿತರಣೆಯಾಗಿರುವ ಅರ್ಜಿಗಳು | 158180 |
| ಒಟ್ಟು ಸಾಲ ಮಂಜೂರಾತಿ | ರೂ.178.20 ಕೋಟಿ |
| ಒಟ್ಟು ಸಾಲ ವಿತರಣೆ | ರೂ.157.72 ಕೋಟಿ |
| **2ನೇ ಹಂತದ ಕಿರು ಸಾಲ ಸೌಲಭ್ಯ** | |
| 2ನೇ ಹಂತದ ಸಾಲ ಸೌಲಭ್ಯಕ್ಕಾಗಿ ಅರ್ಹ ಅರ್ಜಿಗಳು | 78959 |
| ಮಂಜೂರಾತಿ ನೀಡಿರುವ ಅರ್ಜಿಗಳು | 54134 |
| ವಿತರಣೆಯಾಗಿರುವ ಅರ್ಜಿಗಳು | 39453 |
| ಒಟ್ಟು ಸಾಲ ಮಂಜೂರಾತಿ | ರೂ.108.13 ಕೋಟಿ |
| ಒಟ್ಟು ಸಾಲ ವಿತರಣೆ | ರೂ.78.76 ಕೋಟಿ |
| **3ನೇ ಹಂತದ ಕಿರು ಸಾಲ ಸೌಲಭ್ಯ** | |
| 3ನೇ ಹಂತದ ಸಾಲ ಸೌಲಭ್ಯಕ್ಕಾಗಿ ಅರ್ಹ ಅರ್ಜಿಗಳು | 1914 |
| ಮಂಜೂರಾತಿ ನೀಡಿರುವ ಅರ್ಜಿಗಳು | 1718 |
| ವಿತರಣೆಯಾಗಿರುವ ಅರ್ಜಿಗಳು | 1416 |
| ಒಟ್ಟು ಸಾಲ ಮಂಜೂರಾತಿ | ರೂ.8.53 ಕೋಟಿ |
| ಒಟ್ಟು ಸಾಲ ವಿತರಣೆ | ರೂ.7.03 ಕೋಟಿ |

**ಸ್ವನಿಧಿ ಸೇ ಸಮೃದ್ಧಿ ಯೋಜನೆ:**

ಕೇಂದ್ರ ಸರ್ಕಾರವು ಮಾನ್ಯ ಪ್ರಧಾನ ಮಂತ್ರಿಗಳ ನಿರ್ದೇಶನದಂತೆ, ಬೀದಿ ವ್ಯಾಪಾರಸ್ಥರ ಕುಟುಂಬಗಳ ಸಮಗ್ರ ಅಭಿವೃದ್ಧಿಗಾಗಿ, ಸದರಿ ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳುವುವ ಮೂಲಕ ಕೇಂದ್ರ ಸರ್ಕಾರ ಪುರಸ್ಕೃತ 08 ಸಾಮಾಜಿಕ ಭದ್ರತಾ ಯೋಜನೆಗಳನ್ನು ಕಲ್ಪಿಸುವ ಉದ್ದೇಶದಿಂದ ಪ್ರಾಥಮಿಕ ಹಂತದಲ್ಲಿ ಸದರಿ ಯೋಜನೆಯನ್ನು ದಿನಾಂಕ:01.01.2021ರಿಂದ ರಾಜ್ಯದ ಆಯ್ದ 07 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದೆ.

ಎರಡನೇ ಹಂತದಲ್ಲಿ ಸದರಿ ಯೋಜನೆಯನ್ನು ಬಿಬಿಎಂಪಿ ಸೇರಿದಂತೆ ಆಯ್ದ 4 ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಸ್ತರಿಸಲಾಗಿದ್ದು, ಮಾರ್ಚ್-3ನೇ ವಾರ-2022 ರಿಂದ ಅನುಷ್ಠಾನಗೊಳಸಲಾಗುತ್ತಿದೆ

ಎರಡನೇ ಹಂತದಲ್ಲಿ ಸದರಿ ಯೋಜನೆಯನ್ನು ರಾಜ್ಯದ ಆಯ್ದ 107 ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಸ್ತರಿಸಲಾಗಿದ್ದು, 02.01.2023 ರಿಂದ ಅನುಷ್ಠಾನಗೊಳಸಲಾಗುತ್ತಿದೆ.

ರಾಜ್ಯದಲ್ಲಿ ಒಟ್ಟು 118 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಸಲಾಗುತ್ತಿದೆ.

<u>ಯೋಜನೆಯ ಉದ್ದೇಶ</u>:

ಈ ಯೋಜನೆಯಿಂದ ಪಿಎಂ ಸ್ವ-ನಿಧಿಯ ಫಲಾನುಭವಿಗಳು ಮತ್ತು ಅವರ ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ವಿವರ.

- ಅರ್ಹತೆ ಹೊಂದಿದ ಫಲಾನುಭವಿಗಳು ಕಲ್ಯಾಣ ಯೋಜನೆಗಳು ಮತ್ತು ಸದರಿ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಸಂಪರ್ಕ ಸಾಧಿಸುವುದು.
- ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯಿಂದ ಸಂಬಂಧಪಟ್ಟ ರಾಜ್ಯಗಳು ಸಹ ರಾಜ್ಯ ಮಟ್ಟದ ಕಲ್ಯಾಣ ಯೋಜನೆಗಳು ಮತ್ತು ಸೌಲಭ್ಯಗಳನ್ನು ಪಿಎಂ ಸ್ವನಿಧಿ ಫಲಾನುಭವಿಗಳಗೆ ಮತ್ತು ಅವರ ಕುಟುಂಬಗಳಗೆ ವಿಸ್ತರಿಸಬಹುದು.

**ಸದರಿ ಯೋಜನೆ ಪ್ರಗತಿಯು ಈ ಕೆಳಕಂಡಂತಿರುತ್ತದೆ.**

- ಒಟ್ಟು 1,26,724 ಫಲಾನುಭವಿಗಳಗೆ ಸದರಿ ಯೋಜನೆಗಳನ್ನು ಕಲ್ಪಿಸುವ ಗುರಿಯನ್ನು ಹೊಂದಲಾಗಿರುತ್ತದೆ.
- ಈ ಪೈಕಿ 32,806 ಬೀದಿ ಬದಿ ವ್ಯಾಪಾರಿಗಳು ಹಾಗೂ 67,565 ಕುಟುಂಬ ಸದಸ್ಯರುಗಳ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ.

| ಕ್ರ. ಸಂ. | ಯೋಜನೆಯ ಹೆಸರು | ಅರ್ಹವಾದ ಅರ್ಜಿಗಳು | ಸಲ್ಲಿಸಿರುವ ಅರ್ಜಿಗಳು | ಮಂಜೂರಾದ ಅರ್ಜಿಗಳು |
|---|---|---|---|---|
| 1 | ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ | 59,622 | 15,981 | 9,438 |
| 2 | ಪ್ರಧಾನ ಮಂತ್ರಿ ಜ್ಯೋತಿ ಭೀಮಾ ಯೋಜನೆ | 43,467 | 11,516 | 6,834 |
| 3 | ಪ್ರಧಾನ ಮಂತ್ರಿ ಶ್ರಮ ಯೋಗಿ ಮನಧನ್ ಯೋಜನೆ | 16,356 | 11,715 | 6,293 |
| 4 | ಒಂದು ರಾಷ್ಟ್ರ ಒಂದು ರೇಷನ್ ಕಾರ್ಡ್ | 7,550 | 7216 | 7101 |
| 5 | ಪ್ರಧಾನ ಮಂತ್ರಿ ಜನಧನ್ ಯೋಜನೆ | 5925 | 1904 | 1478 |
| 6 | ಕಟ್ಟಡ ಕಾರ್ಮಿಕರ ನೋಂದಣಿ | 424 | 346 | 171 |
| 7 | ಜನನಿ ಸುರಕ್ಷಾ ಯೋಜನೆ | 135 | 29 | 24 |
| 8 | ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ | 21 | 8 | 6 |
| | **ಒಟ್ಟು** | 133,500 | 48,715 | 31,345 |

## ಸಿಡಾಕ್ ಸಂಸ್ಥೆಯ ಸಂಕ್ಷಿಪ್ತ ಪರಿಚಯ

ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಧಾರವಾಡವು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಸ್ಥಾಪನೆಗೊಂಡು, ಕರ್ನಾಟಕ ಸೋಸೈಟಿ ಆ್ಯಕ್ಟ್ - 1960 ಸಮಸಂಖ್ಯೆ 2/92-93 ರನ್ವಯ 15.05.1992ರಂದು ನೋಂದಣಿಯಾಗಿರುತ್ತದೆ. ಪ್ರಸ್ತುತವಾಗಿ ಸಂಸ್ಥೆಯು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಿಡಾಕ್ ಸಂಸ್ಥೆಯು "ಉದ್ಯಮಶೀಲತೆ ಹುಟ್ಟಿನಿಂದಲೇ ಮಾತ್ರ ಬರಬೇಕೆಂದಿಲ್ಲ" ಎಂಬ ನಂಬಿಕೆಯೊಂದಿಗೆ ಉದ್ಯಮಶೀಲತಾ ಆಂದೋಲನವನ್ನು ಮುನ್ನಡೆಸುತ್ತಿರುವ ಸಂಸ್ಥೆಯಾಗಿದೆ. ಉದ್ಯಮಶೀಲತೆಯನ್ನು ಸೂಕ್ತ ನಿರ್ದೇಶಿತ ಚಟುವಟಿಕೆಯ ಮೂಲಕ, ಪರಿಣತ ತರಬೇತಿ ಹಾಗೂ ಅಭಿವೃದ್ಧಿ ಪಡಿಸುವದರೊಂದಿಗೆ ಬೆಳೆಸಬಹುದೆಂಬ ಭರವಸೆ ಹೊಂದಿದೆ. ಮನುಷ್ಯನ ಸಾಮರ್ಥ್ಯ ಹಾಗೂ ಸಂಪನ್ಮೂಲವನ್ನು ಬೆಳಕಿಗೆ ತರಲು, ಶಿಕ್ಷಣ ಪರಿಣಾಮಕಾರಿ ಅಸ್ತ್ರ ಎಂದು ವ್ಯಾಪಕವಾಗಿ ಗುರುತಿಸಿರುವ ಹಿನ್ನೆಲೆಯಲ್ಲಿ ಸಿಡಾಕ್, ಕೆಳಕಂಡ ಕಾರ್ಯಗೌರವಗಳನ್ನು ನಿರ್ವಹಿಸುತ್ತಿದೆ :

- ಶಿಕ್ಷಣ ಹಾಗೂ ತರಬೇತಿಯ ಮೂಲಕ ಉದ್ಯಮಶೀಲತೆಯನ್ನು ಅಧಿಕಗೊಳಿಸುವುದು.
- ಸ್ವ-ಉದ್ಯೋಗ ಅವಕಾಶಗಳ ಮೇಲೆ ಗುಣಾಕಾರಾತ್ಮಕ ಪರಿಣಾಮವನ್ನು ಉಂಟು ಮಾಡುವುದು.
- ಸಣ್ಣ ಪ್ರಮಾಣದ ಉದ್ಯಮಗಳ ನಿರ್ವಹಣಾ ಸಾಮರ್ಥ್ಯವನ್ನು ಸುಧಾರಣೆ ಮಾಡುವುದು.
- ಉದ್ಯಮಶೀಲತೆಯನ್ನು ವ್ಯಾಪಕವಾಗಿ ಹರಡುವುದು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಉದ್ಯಮಶೀಲತೆಯ ತಳಹದಿಯನ್ನು ಸಮಾಜದಲ್ಲಿ ವಿಸ್ತರಿಸುವುದು.
- ಉದ್ಯಮಶೀಲತೆಯ, ಪಠ್ಯ ಹಾಗೂ ಪ್ರಯೋಗಗಳ ಜ್ಞಾನ ಹಾಗೂ ಅಂತ:ಸತ್ವವನ್ನು, ಸಂಶೋಧನೆಯ ಮೂಲಕ ಸೃಷ್ಟಿಸುವುದು ಹಾಗೂ ಪ್ರಚಾರಪಡಿಸುವುದು ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳ ಸಾಮಾನ್ಯ ಮತ್ತು ವಿಶೇಷ ಕೇಂದ್ರಿತ ಗುಂಪುಗಳನ್ನು ಒಳಗೊಂಡಿರುತ್ತವೆ.
- ಉದ್ಯಮಶೀಲತೆಯ ಅಭಿವೃದ್ಧಿಗೆ ತರಬೇತುದಾರರು ಹಾಗೂ ಪ್ರೇರಕ/ಪ್ರೋತ್ಸಾಹಕರನ್ನು ವೃದ್ಧಿಸುವುದು.

ಸಿಡಾಕ್ ಸಂಸ್ಥೆಯು ಪ್ರಾರಂಭವಾದಾಗಿನಿಂದ 31ನೇ ಡಿಸೆಂಬರ್ 2022 ರವರೆಗೆ ಕರ್ನಾಟಕ ಸರಕಾರ ಮತ್ತು ಭಾರತ ಸರಕಾರದ ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಂದ ಪ್ರಾಯೋಜಿತ 11,246 ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, 5,94,257 ಅಭ್ಯರ್ಥಿಗಳಿಗೆ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

2022-23 ನೇ ಸಾಲಿನಲ್ಲಿ 31ನೇ ಡಿಸೆಂಬರ್ 2022 ರ ಅಂತ್ಯಕ್ಕೆ ಸಂಸ್ಥೆಯು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ 163 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಒಟ್ಟು 9130 ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗಿದೆ.

## ಸಿಡಾಕ್ ಸಂಸ್ಥೆಯಿಂದ ಹಮ್ಮಿಕೊಳ್ಳುವ ವಿವಿಧ ಕಾರ್ಯಕ್ರಮಗಳು

1. ನಿರುದ್ಯೋಗ ಯುವಕ ಯುವತಿಯರಿಗೆ ಸ್ವಯಂ ಉದ್ಯೋಗದ ಅರಿವು ಮೂಡಿಸಲು ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ
2. ಸರ್ಕಾರಿ ಪದವಿ ಮಹಾವಿದ್ಯಾಲಯಗಳ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಉದ್ಯಮಶೀಲರಾಗುವತ್ತ ಪ್ರೇರೇಪಿಸಲು ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮ
3. ಆಸಕ್ತ ಯುವಕ ಯುವತಿಯರಿಗೆ ಹಾಗೂ ತಮ್ಮದೇ ಆದ ಉದ್ಯಮವನ್ನು ಪ್ರಾರಂಭಿಸಲು ಆಸಕ್ತಿ ಹೊಂದಿದವರಿಗೆ ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ
4. 30 ದಿನಗಳ ವಲಯ ಆಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ
5. ತರಬೇತುದಾರರ ತರಬೇತಿ ಕಾರ್ಯಕ್ರಮ.
6. ಯೋಜನೆ ಹಾಗೂ ಪ್ರಸ್ತಾವನೆಗೆ ಅನುಗುಣವಾಗಿ ತರಬೇತಿ ಕಾರ್ಯಕ್ರಮಗಳನ್ನು ತಯಾರಿಸಿ ಉದ್ಯಮಶೀಲತೆ, ವ್ಯಕ್ತಿತ್ವ ವಿಕಸನ, ಮಾರಾಟಾಭಿವೃದ್ಧಿ ಹಾಗೂ ಇತರೇ ಲಾಭದಾಯಕ ಚಟುವಟಿಕೆಗಳ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಏರ್ಪಡಿಸಲಾಗುತ್ತಿದೆ.

## ಸಿಡಾಕ್ ಸಂಸ್ಥೆಯು ಏರ್ಪಡಿಸಿರುವ ಪ್ರಮುಖ ಕಾರ್ಯಕ್ರಮಗಳು ಕೆಳಗಿನಂತಿರುತ್ತವೆ.

1. ಕರ್ನಾಟಕ ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಹಾಗೂ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ನಿರ್ವಹಣಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮಗಳಲ್ಲಿ ಅಧಿಕಾರಿಗಳ ದಕ್ಷತೆಯನ್ನು ಹೆಚ್ಚಿಸುವಲ್ಲಿ ಹಾಗೂ ಅವರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಪ್ರತಿಷ್ಠಿತ ಬೋಧಕರನ್ನು ಆಹ್ವಾನಿಸಿ ತರಬೇತಿಯನ್ನು ನೀಡಲಾಗಿದೆ.

2. ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನವದೆಹಲಿಯವರ ಪ್ರಾಯೋಜಕತ್ವದಲ್ಲಿ ವಿಜ್ಞಾನ ಹಾಗೂ ತಾಂತ್ರಿಕ ಕಾಲೇಜುಗಳ ಉಪನ್ಯಾಸಕರುಗಳಿಗೆ ಹನ್ನೆರಡು ದಿನಗಳ ಫ್ಯಾಕಲ್ಟಿ ಡೆವಲಪ್‌ಮೆಂಟ್ ಕಾರ್ಯಕ್ರಮಗಳನ್ನು ಕೂಡಾ ಅನುಷ್ಠಾನಗೊಳಿಸಲಾಗಿದೆ.

3. ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನವದೆಹಲಿಯವರ ಪ್ರಾಯೋಜಕತ್ವದಲ್ಲಿ ಎಂಟು ವಾರಗಳ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

4. ಕರ್ನಾಟಕ ಸರ್ಕಾರದ "ಉದ್ಯಮಿಯಾಗು ಉದ್ಯೋಗನೀಡು" ಅಭಿಯಾನದಡಿ ಅಂತಿಮ ವರ್ಷದ ಇಂಜಿನೀಯರಿಂಗ್, ಎಂ.ಬಿ.ಎ. ಹಾಗೂ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಒಂದು ದಿನದ ಉದ್ಯಮಶೀಲತಾ ಪ್ರೇರೇಪಣಾ ಶಿಬಿರವನ್ನು ಧಾರವಾಡ, ವಿಜಯಪುರ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

5. ಭಾರತ ಸರ್ಕಾರದ ಕಿರು, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ಯಮಗಳ ಸಚಿವಾಲಯದ Ni-MSME, Hyderabad ಇವರ ಪ್ರಾಯೋಜಕತ್ವದಲ್ಲಿ 43 ದಿನ, 29 ದಿನಗಳ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳು, 11 ದಿನಗಳ, 18 ದಿನಗಳ, 38 ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಹಾಗೂ 15 ದಿನಗಳ ತರಬೇತುದಾರರ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

6. ಕರ್ನಾಟಕ ಸರಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ವಿಶೇಷ ಘಟಕ / ಗಿರಿಜನ ಉಪಯೋಜನೆ(SCP/TSP)ಯಡಿ ಹಾಗೂ DST, MTT & General EDPs sponsored by HO ಪ್ರಾಯೋಜಿಸಿರುವ ಹತ್ತು ದಿನ, ಮೂರು ದಿನ, ಹಾಗೂ ನಾಲ್ಕು ವಾರಗಳ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

7. ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನವದೆಹಲಿಯವರ ಪ್ರಾಯೋಜಕತ್ವದಲ್ಲಿ ವಿಜ್ಞಾನ ಹಾಗೂ ತಾಂತ್ರಿಕ ಕಾಲೇಜುಗಳ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

8. ಕರ್ನಾಟಕ ಸರಕಾರದ ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಬೆಂಗಳೂರು ಇವರ ಪ್ರಾಯೋಜಕತ್ವದಲಿ ಇಲಾಖೆ / ಸಂಘ / ಸಂಸ್ಥೆಯ ಅಧಿಕಾರಿಗಳಿಗೆ ನಾಲ್ಕು ದಿನಗಳ "Motivational Methodology for Performance Improvement" ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

9. **"ಉದ್ಯಮಶೀಲತೆ ಮಾರ್ಗದರ್ಶನ ಕೇಂದ್ರ " ಯೋಜನೆಯ ಹಿನ್ನಲೆ :**

ಉದ್ಯಮಶೀಲತೆಯ ಅಭಿವೃದ್ಧಿಗೆ ಪೂರಕವಾಗಿ ಸಿಡಾಕ್ ಸಂಸ್ಥೆಗೆ ಕರ್ನಾಟಕ ಸರ್ಕಾರವು 2017-18ನೇ ಸಾಲಿನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಸಂಸ್ಥೆ (UNDP) ಸಹಯೋಗದೊಂದಿಗೆ ಜಿಲ್ಲಾ ಕೇಂದ್ರಗಳಲ್ಲಿ " ಉದ್ಯಮಶೀಲತೆ ಮಾರ್ಗದರ್ಶನ ಕೇಂದ್ರ"ಗಳನ್ನು ಸಿಡಾಕ್ ಜಿಲ್ಲಾ ಕಛೇರಿಗಳಲ್ಲಿ ಪ್ರಾರಂಭಿಸಲಾಗಿದ್ದು ಈ ಕೆಳಕಂಡ ಉದ್ದೇಶಗಳನ್ನು ಹೊಂದಿರುತ್ತದೆ.

- ಕೌಶಲ್ಯಾಭಿವೃದ್ಧಿ, ಉದ್ಯಮಶೀಲತಾ ಹಾಗೂ ಜೀವನೋಪಾಯ ಇಲಾಖೆಗಳ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಇಚ್ಛೆಯುಳ್ಳವರಿಗೆ ಸ್ವಂತ ಉದ್ಯೋಗಕ್ಕಾಗಿ ಮಾರ್ಗದರ್ಶನ ನೀಡುವುದು.
- ಸ್ವಂತ ಉದ್ಯೋಗದಿಂದ ಆಗುವ ಲಾಭಗಳು ಹಾಗೂ ಅನುಸರಿಸಬೇಕಾದ ಯೋಜನೆಗಳ ಬಗ್ಗೆ ಕಾಲೇಜು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ಸ್ವಂತ ಉದ್ಯೋಗಕ್ಕೆ ಪ್ರೇರೆಪಿಸುವುದು.
- ಇಚ್ಛೆಯುಳ್ಳ ಅಭ್ಯರ್ಥಿಗಳಿಗೆ ಪೂರ್ಣಪ್ರಮಾಣದ ವ್ಯವಹಾರ ಯೋಜನೆ ತಯಾರಿಸಲು ಮಾರ್ಗದರ್ಶನ ನೀಡಿ ವ್ಯವಹಾರ ಯೋಜನೆ ಅಂತಿಮಗೊಳಿಸಲು ಸಹಾಯ ಮಾಡುವುದು.
- ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳ ಯೋಜನೆಗಳ ಎಲ್ಲಾ ಮಾಹಿತಿಯನ್ನು ಕ್ರೋಢೀಕರಿಸುವುದು.
- ಸರ್ಕಾರದ ಎಲ್ಲ ಸ್ವಯಂ ಉದ್ಯೋಗ ಯೋಜನೆಗಳ ಮಾಹಿತಿ ಸಂಗ್ರಹಿಸುವುದು.
- ಮಾಹಿತಿ, ಶಿಕ್ಷಣ ಹಾಗೂ ಸಂವಹನ (ಐ.ಇ.ಸಿ.) ಕೌಶಲ್ಯಗಳ ಮೂಲಕ ಸ್ವಂತ ಉದ್ಯೋಗಿಗಳಿಗೆ ತರಬೇತಿಯನ್ನು ನೀಡುವುದು ಮತ್ತು ತರಬೇತುದಾರರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.
- ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ತರಬೇತಿ ನೀಡುವುದು.
- ಯುವ ಜನಾಂಗಕ್ಕೆ ಹಣಕಾಸಿನ ಸಾಕ್ಷರತೆಯ ಬಗ್ಗೆ ಮಾಹಿತಿ ನೀಡುವುದು.

ಪ್ರಸ್ತುತ ಜಿಲ್ಲಾ ಕೇಂದ್ರಗಳಲ್ಲಿ ಸಿಡಾಕ್ ಕಛೇರಿಗಳಿದ್ದು, ಉದ್ಯಮಶೀಲತಾ ಮಾರ್ಗದರ್ಶನ ಕೇಂದ್ರಗಳಲ್ಲಿ ತರಬೇತುದಾರರು ಕೆಲಸ ನಿರ್ವಹಿಸುತ್ತಾರೆ. ಮೂರು ಅಥವಾ ನಾಲ್ಕು ಜಿಲ್ಲೆಗಳು ಸಂಸ್ಥೆಯ ಜಂಟಿ ನಿರ್ದೇಶಕರ ಮಾರ್ಗದರ್ಶನದಲ್ಲಿ ಕೆಲಸ ನಿರ್ವಹಿಸುತ್ತವೆ.

## 10. 2022-23 ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳ ವಿವರಗಳು

- ನಿರುದ್ಯೋಗ ಯುವಕ ಯುವತಿಯರಿಗೆ ಸ್ವಯಂ ಉದ್ಯೋಗದ ಅರಿವು ಮೂಡಿಸಲು ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರ
- ಸರ್ಕಾರಿ ಪದವಿ ಮಹಾವಿದ್ಯಾಲಯಗಳ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಉದ್ಯಮಶೀಲರಾಗುವತ್ತ ಪ್ರೇರೇಪಿಸಲು ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ
- ಆಸಕ್ತ ಯುವಕ ಯುವತಿಯರಿಗೆ ಹಾಗೂ ತಮ್ಮದೇ ಆದ ಉದ್ಯಮವನ್ನು ಪ್ರಾರಂಭಿಸಲು ಆಸಕ್ತಿ ಹೊಂದಿದವರಿಗೆ ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ
- ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ
- ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ
- ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ ಸಿ.ಎಂ.ಕೆ.ಕೆ.ವೈ. ಯೋಜನೆಯ ಫಲಾನುಭವಿಗಳಿಗೆ ಮೂರು ದಿನಗಳ ಉದ್ಯಮಶೀಲತಾ ಪ್ರೇರಣಾ ಕಾರ್ಯಕ್ರಮ

# ಸಾಂಸ್ಥಿಕ ರಚನೆ



## ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)

ಹಿನ್ನೆಲೆ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು [ಜಿಟಿಟಿಸಿ] 1972ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಡ್ಯಾನಿಶ್ ನೆರವಿನೊಂದಿಗೆ ಕಾರ್ಯಾರಂಭ ಮಾಡಲಾಯಿತು. ಕರ್ನಾಟಕ ರಾಜ್ಯ ಸರ್ಕಾರದ ಜಿಟಿಟಿಸಿ ತರಬೇತಿ ಸಂಸ್ಥೆಯನ್ನು ಪ್ರಾರಂಭ ಮಾಡುವ ಮುಖ್ಯ ಉದ್ದೇಶವೇನೆಂದರೆ ನುರಿತ ಮಾನವ ಸಂಪನ್ಮೂಲವನ್ನು ಕೈಗಾರಿಕಾ ಕ್ಷೇತ್ರಕ್ಕೆ ಒದಗಿಸುವುದು ಹಾಗೂ ಕೈಗಾರಿಕಾ ಸಂಸ್ಥೆಗಳ ಅಭಿವೃದ್ಧಿಗೆ ತಂತ್ರಜ್ಞಾನ ಮತ್ತು ತರಬೇತಿಗಳ ನೆರವು ನೀಡುವುದು. ಈ ಸಂಸ್ಥೆಯು ತಾಂತ್ರಿಕ ಮತ್ತು ಕೈಗಾರಿಕಾ ಉತ್ಪಾದನಾ ಕ್ಷೇತ್ರದಲ್ಲಿ ತರಬೇತಿ ನೀಡುವಲ್ಲಿ ಪರಿಣಿತಿ ಹೊಂದಿದ್ದು ಜಾಗತಿಕ ಮಟ್ಟದಲ್ಲಿ ಪ್ರಶಂಸೆಗೊಳಪಟ್ಟಿದೆ.

ನಿರಂತರವಾಗಿ ಬೆಳೆಯುತ್ತಿರುವ ವೈವಿಧ್ಯತೆಯ ಉತ್ಪಾದನಾ ಚಟುವಟಿಕೆಗಳನ್ನೊಳಗೊಂಡ ವಲಯಕ್ಕೆ ಬೇಕಾದಂತಹ ಗುಣಾತ್ಮಕ ತಾಂತ್ರಿಕ ಮಾನವ ಸಂಪನ್ಮೂಲವನ್ನು ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯು ಹಲವು ಹಂತದ ತಾಂತ್ರಿಕ ತರಬೇತಿಗಳನ್ನು ಒದಗಿಸುತ್ತದೆ.

**ಧ್ಯೇಯೋದ್ದೇಶಗಳು**

- ಕೈಗಾರಿಕೆಗಳಿಗೆ ಉದ್ಯಮ ಕೌಶಲ್ಯವಿರುವ ವೃತ್ತಿಪರ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಯುವ ಜನತೆಗೆ ನೀಡಲಾಗುತ್ತಿದೆ.
- ವೃತ್ತಿಪರ ಸಾಮರ್ಥ್ಯ ಮತ್ತು ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ. ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಮತ್ತು ಗ್ರಾಮೀಣ ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಲಾಗುವುದು.
- ಸಣ್ಣ ಕೈಗಾರಿಕೆಗಳ ತಾಂತ್ರಿಕ ಸಿಬ್ಬಂದಿಯವರಿಗೆ ಅಲ್ಪಾವಧಿ ತರಬೇತಿಯನ್ನು ಸುಧಾರಿತ ಕ್ಯಾಡ್-ಕ್ಯಾಮ್ ತಂತ್ರಜ್ಞಾನವುಳ್ಳ ಸಿ.ಎನ್.ಸಿ.ಪ್ರೊಗ್ರಾಮಿಂಗ್ ಮತ್ತು ಮೆಷಿನಿಂಗ್ ತರಬೇತಿ ಕೋರ್ಸಗಳನ್ನು ನೀಡಲಾಗುವುದು.
- ಸಣ್ಣ ಮತ್ತು ಮಧ್ಯಮಗಾತ್ರದ Press Tools, Jigs & Fixtures, Moulds & Dies and Special purpose ಉಪಕರಣಗಳನ್ನು ತಯಾರಿಸುವುದು.
- ಜಿಟಿಟಿಸಿಯು ವಿವಿಧ ಉತ್ಪಾದನಾ ಚಟುವಟಿಕೆಗಳಿಗೆ ಅತ್ಯಂತ ಸುಧಾರಿತ ಮತ್ತು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ ಹಾಗೂ ಉಪಕರಣ, ವಿನ್ಯಾಸ ಮತ್ತು ಉತ್ಪಾದನಾ ಸಂಶೋಧನಾ ಚಟುವಟಿಕೆಗಳನ್ನು ನಡೆಸಲು Ministry of Science & Technology, Govt.of Inida ಜಿಟಿಟಿಸಿ ಸಂಸ್ಥೆಯನ್ನು ಒಂದು Scientific and Industrial Research Organization ಎಂದು ಪರಿಗಣಿಸಿದೆ.
- ಜಿ.ಟಿ.ಟಿ.ಸಿಯಿಂದ ನೀಡಲಾಗುವ ತರಬೇತಿಯ ಪ್ರಾಮುಖ್ಯತೆಯನ್ನು ಮತ್ತು ರಾಜ್ಯದ ಉಪಕರಣ ಮತ್ತು ಉತ್ಪಾದನಾ ವಲಯಕ್ಕೆ ಸಂಬಂಧಿಸಿದಂತೆ ಹೆಚ್ಚು ನುರಿತ ತಂತ್ರಜ್ಞರ ಸಮೂಹವನ್ನು ಒದಗಿಸುವ ಮತ್ತು ವಿಸ್ತರಿಸುತ್ತಿರುವ ಕೈಗಾರಿಕಾ ವಲಯದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕಾರ್ಯವನ್ನು ಪರಿಗಣಿಸಿ, ಕರ್ನಾಟಕ ಸರ್ಕಾರದ ಪೂರ್ವಭಾವಿ ನೀತಿಗಳು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 24 ಹೆಚ್ಚು ಜಿ.ಟಿ.ಟಿ.ಸಿ ಕೇಂದ್ರಗಳನ್ನು ಸ್ಥಾಪಿಸಲು ಕಾರಣವಾಗಿದೆ. ಟೂಲ್ ಮತ್ತು ಡೈ ತಯಾರಿಕೆ (Tool & Die Making) ಮತ್ತು ನಿಖರವಾದ ತಯಾರಿಕಾ ಕ್ಷೇತ್ರದಲ್ಲಿ (Precision Manufacturing) ಉತ್ತಮ ಗುಣಮಟ್ಟದ ತರಬೇತಿ ನೀಡುವಲ್ಲಿ ಜಿ.ಟಿ.ಟಿ.ಸಿಯು ಈಗ ರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

**ಕೋರ್ಸುಗಳು**

ಜಿ.ಟಿ.ಟಿ.ಸಿ ಸಂಸ್ಥೆಯಲ್ಲಿ ಈ ಕೆಳಗಿನ ಡಿಪ್ಲೋಮ ಕೋರ್ಸ್‌ಗಳನ್ನು ಕರ್ನಾಟಕ ಸರ್ಕಾರ, ಎ.ಐ.ಸಿ.ಟಿ.ಇ. ರವರ ಅನುಮೋದನೆ ಪಡೆದು ನಡೆಸಲಾಗುತ್ತಿದೆ

- ಡಿಪ್ಲೋಮ ಇನ್ ಟೂಲ್ & ಡೈ ಮೇಕಿಂಗ್ (3+1) ವರ್ಷಗಳು,
- ಡಿಪ್ಲೋಮ ಇನ್ ಪ್ರಿಸಿಷನ್ ಮ್ಯಾನ್ಯುಪ್ಯಾಕ್ಚರಿಂಗ್ (3+1) ವರ್ಷಗಳು,
- ಡಿಪ್ಲೋಮ ಇನ್ ಮೆಕಟ್ರಾನಿಕ್ಸ್ (3+1) ವರ್ಷಗಳು
- ಡಿಪ್ಲೋಮ ಇನ್ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ [ಮಹಿಳೆಯರಿಗೆ] (3) ವರ್ಷಗಳು,
- ಪೋಸ್ಟ್ ಡಿಪ್ಲೋಮ ಇನ್ ಟೂಲ್‌ಡಿಸೈನ್ ತರಬೇತಿ ಕೋರ್ಸ್ (1) ವರ್ಷ
- ಎಂಟೆಕ್ ಇನ್ ಟೂಲ್ (2-ವರ್ಷಗಳು)
- ಸರ್ಕಾರದ ಪ್ರಾಯೋಜಿತ (ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ (ಎಸ್‌ಸಿಪಿ/ಟಿಎಸ್‌ಪಿ) ಮತ್ತು ಸಿಎಂಕೆಕೆವೈ ಅಡಿಯಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ವಿದ್ಯಾವಂತ ನಿರುದ್ಯೋಗಿ ಯುವ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು.

- ದೀರ್ಘಾವಧಿ ತರಬೇತಿಗಳಲ್ಲಿ ಒಟ್ಟಾರೆ 7554 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ.

- 4666 ಡಿಪ್ಲೋಮಾ ಮತ್ತು ಬಿ.ಇ ವಿದ್ಯಾರ್ಥಿಗಳಿಗೆ ಜಿಟಿಟಿಸಿ ಕೇಂದ್ರಗಳಲ್ಲಿ ಇಂಟರ್ನಿಶಿಪ್ ತರಬೇತಿ ನೀಡಲಾಗಿದೆ.

- 924 ಬಿಇ/ಡಿಪ್ಲೋಮಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತಿದಾರರಿಗೆ ಉನ್ನತ ಕೌಶಲ್ಯ ತರಬೇತಿಯನ್ನು ನೀಡಲಾಗಿದೆ.

- ಸಿಎಂಕೆಕೆವೈ (ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ) ಯೋಜನೆಯಡಿ 4605 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿಗಳನ್ನು ನೀಡಲಾಗಿದೆ.

- 4ನೇ ವರ್ಷದ ತರಬೇತಿ ಅವಧಿಯಲ್ಲಿ ವಿದ್ಯಾರ್ಥಿಗಳನ್ನು ದೇಶಾದ್ಯಂತ ವಿವಿಧ ಕೈಗಾರಿಕೆಗಳಲ್ಲಿ ಒಂದು ವರ್ಷದ ಕಡ್ಡಾಯ ಇನ್-ಪ್ಲಾಂಟ್ ತರಬೇತಿಗೆ ಒಳಪಡಿಸಲಾಗುತ್ತದೆ. ಈ ಅವಧಿಯಲ್ಲಿ ತರಬೇತಿ ಪಡೆಯುವವರು ಮಾಹೆಯಾನ ರೂ. 12000/- ದಿಂದ ರೂ. 18000/- ವರೆಗೆ ತರಬೇತಿ ಭತ್ಯೆಯನ್ನು ಪಡೆಯುವರು.

- ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಯಾವುದೇ ಕಾಯುವ ಅವಧಿ ಇಲ್ಲದೆ ತಕ್ಷಣ ಉದ್ಯೋಗವನ್ನು ಪಡೆದುಕೊಳ್ಳುತ್ತಾರೆ.

- ಅಸ್ತಿತ್ವದಲ್ಲಿರುವ ಮತ್ತು ಉದಯೋನ್ಮುಖ ಕೈಗಾರಿಕಾ ವಲಯಗಳಿಗೆ ನುರಿತ ಮಾನವ ಸಂಪನ್ಮೂಲ ಮತ್ತು ತಾಂತ್ರಿಕ ಸೇವೆಯನ್ನು ಒದಗಿಸಲು ಜಿಟಿಟಿಸಿಯು ಕರ್ನಾಟಕದಲ್ಲಿ 28 ತರಬೇತಿ ಕೇಂದ್ರಗಳನ್ನು ಕರ್ನಾಟಕ ಸರ್ಕಾರದ ಸಹಾಯದಿಂದ ಸ್ಥಾಪಿಸಿದೆ.

**ಜಿಟಿಟಿಸಿ ಕೇಂದ್ರಗಳು ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ :**
ಬೆಂಗಳೂರು, ಮೈಸೂರು, ಗುಂಡ್ಲುಪೇಟೆ, ಮದ್ದೂರು, ಹಾಸನ, ಕಡೂರು, ಹುಮ್ನಾಬಾದ್, ಕಲಬುರಗಿ, ಕೂಡಲಸಂಗಮ, ಬೆಳಗಾವಿ, ಧಾರವಾಡ-ಹುಬ್ಬಳ್ಳಿ, ದಾಂಡೇಲಿ, ಮಂಗಳೂರು, ಹೊಸಪೇಟೆ, ಅಂಗಸುಗೂರು, ಹರಿಹರ, ಕನಕಪುರ, ತುಮಕೂರು, ಕೋಲಾರ, ಶಿವಮೊಗ್ಗ, ಗೌರಿಬಿದನೂರು, ಚಿಕ್ಕೋಡಿ, ಗೋಕಾಕ, ಉಡುಪಿ, ಚಿತ್ರದುರ್ಗ, ಚಳ್ಳಕೆರೆ, ಕೊಪ್ಪಳ, ಮತ್ತು ಯಾದಗಿರ.

**ಶ್ರೇಷ್ಠತಾ ಕೇಂದ್ರಗಳ ಸ್ಥಾಪನೆ**

- ಸೀಮೆನ್ಸ್ ಇಂಡಸ್ಟ್ರೀ ಸಾಫ್ಟ್‌ವೇರ್ ಮತ್ತು ಡಿಸೈನ್‌ಟೆಕ್ ಸಿಸ್ಟಮ್ಸ್ ವತಿಯಿಂದ ಶ್ರೇಷ್ಠತಾ ಕೇಂದ್ರಗಳನ್ನು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ[ಜಿಟಿಟಿಸಿ] ಬೆಂಗಳೂರು, ಮೈಸೂರು, ದಾಂಡೇಲಿ ಮತ್ತು ಕಲಬುರಗಿ ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಈ ಕೇಂದ್ರಗಳಲ್ಲಿ ಅನುಕ್ರಮವಾಗಿ 561, 1182, 680, ಮತ್ತು 827 ಒಟ್ಟಾರೆ 3250 ಅಭ್ಯರ್ಥಿಗಳು ತರಬೇತಿಯನ್ನು ಪಡೆದಿರುತ್ತಾರೆ.

- ಡಸಾಲ್ಟ್ ಸಿಸ್ಟಮ್ಸ್ ವತಿಯಿಂದ ಶ್ರೇಷ್ಠತಾ ಕೇಂದ್ರಗಳನ್ನು ಕಲ್ಯಾಣ ಕರ್ನಾಟಕ ವಲಯದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ[ಜಿಟಿಟಿಸಿ]ಗಳನ್ನು ಹುಮ್ನಾಬಾದ್, ಅಂಗಸುಗೂರು, ಹೊಸಪೇಟೆ ಮತ್ತು ಯಾದಗಿರಿ, ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಈ ಕೇಂದ್ರಗಳಲ್ಲಿ 72, 186, ಮತ್ತು 58 ಒಟ್ಟಾರೆ 316 ಅಭ್ಯರ್ಥಿಗಳು ತರಬೇತಿಯನ್ನು ಪಡೆದಿರುತ್ತಾರೆ.

- ಅಮೇರಿಕಾದ ಪ್ಯಾರಾಮೆಟ್ರಿಕ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಪಿಟಿಸಿ) ವತಿಯಿಂದ ಬೆಳಗಾವಿ, ಹುಬ್ಬಳ್ಳಿ, ಮಂಗಳೂರು, ಶಿವಮೊಗ್ಗ, ಹಾಸನ, ತುಮಕೂರು, ಮತ್ತು ಹರಿಹರ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳಲ್ಲಿ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಈ ಕೇಂದ್ರಗಳಲ್ಲಿ ಅನುಕ್ರಮವಾಗಿ 742, 359, 476, 384, 228, 306 ಮತ್ತು 295 ಒಟ್ಟಾರೆ 2790 ಅಭ್ಯರ್ಥಿಗಳು ತರಬೇತಿಯನ್ನು ಪಡೆದಿರುತ್ತಾರೆ.

**ಸಾಮಾಜಿಕ ಪರಿಣಾಮ**

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳು ರಾಜ್ಯಾದ್ಯಂತ 28 ಕೇಂದ್ರಗಳನ್ನು ಹೊಂದಿದ್ದು, ಇದರಿಂದ ರಾಜ್ಯದ ನಗರ ಮತ್ತು ಗ್ರಾಮೀಣ ಅಭ್ಯರ್ಥಿಗಳಿಗೆ ವೃತ್ತಿಪರ ಕೌಶಲ್ಯ ತರಬೇತಿಗಳನ್ನು ಪಡೆಯಲು ಸಹಕಾರಿಯಾಗಿರುತ್ತದೆ. ಜಿಟಿಟಿಸಿ ಸಂಸ್ಥೆಯ ಕೈಗಾರಿಕೆಗಳಿಗೆ ಬೇಕಾದ ಕೌಶಲ್ಯ ತರಬೇತಿಗಳನ್ನು ಯುವಕ ಯುವತಿಯರಿಗೆ ನೀಡುತ್ತಿದೆ. ಇದರಿಂದಾಗಿ ಕೈಗಾರಿಕೆಗಳಿಗೆ ಕೌಶಲ್ಯ ಹೊಂದಿದ ಮಾನವ ಸಂಪನ್ಮೂಲ ದೊರೆಯಲು ಸಹಾಯಕವಾಗಿದೆ. ಜಿಟಿಟಿಸಿಯಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ಕೈಗಾರಿಕಾ ವಲಯವು ಒಪ್ಪಿಕೊಂಡಿದೆ. ಜಿಟಿಟಿಸಿಯಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳು ದೇಶ, ವಿದೇಶಗಳಲ್ಲಿ ಕೆಲಸ ನಿರ್ವಹಿಸ್ಮತ್ತಿದ್ದಾರೆ ಮತ್ತು ಹಲವಾರು ಅಭ್ಯರ್ಥಿಗಳು ತಮ್ಮ ಸ್ವಂತ ಕೈಗಾರಿಕೆಗಳನ್ನು ಹೊಂದಿದ್ದಾರೆ. ಡಿಪ್ಲೋಮಾ ಉತ್ತೀರ್ಣರಾದ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೂ ಅರ್ಹರಾಗಿರುತ್ತಾರೆ.

# ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ

| | | |
|---|---|---|
| ಸಿಎಂಕೆಕೆವೈ ಅಡಿಯಲ್ಲಿ ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳು | -- | 3437 |
| ➢ ತರಬೇತಿ ಪಡೆದ ಒಟ್ಟು ಸಾಮಾನ್ಯ ಅಭ್ಯರ್ಥಿಗಳು | -- | 1233 |
| ➢ ತರಬೇತಿ ಪಡೆದ ಒಟ್ಟು ಅಭ್ಯರ್ಥಿಗಳು | -- | 4670 |
| ➢ ಉದ್ಯೋಗಾವಕಾಶ ಪಡೆದ ಅಭ್ಯರ್ಥಿಗಳು | -- | 219 |

**ಸಿಎಂಕೆಕೆವೈ ಹಾಗೂ ಸಾಮಾನ್ಯ ತರಬೇತಿ ಅಂಕಿ-ಅಂಶಗಳು**

**(ಜನವರಿ – 2022 ರಿಂದ ಡಿಸೆಂಬರ್-2022)**

| ಕೆಜಿಟಿಟಿಐ ಕೇಂದ್ರಗಳು | ಸಿಎಂಕೆಕೆವೈ | | | | | ಸಾಮಾನ್ಯ | | | | |
|---|---|---|---|---|---|---|---|---|---|---|
| | ತರಬೇತಿ ಪಡೆದವರ ಸಂಖ್ಯೆ | ಉದ್ಯೋಗ ಪಡೆದವರ ಸಂಖ್ಯೆ | ಎಸ್.ಸಿ | ಎಸ್.ಟಿ | ತರಬೇತಿ ಪಡೆದ ಮಹಿಳೆಯರ ಸಂಖ್ಯೆ | ತರಬೇತಿ ಪಡೆದವರ ಸಂಖ್ಯೆ | ಉದ್ಯೋಗ ಪಡೆದವರ ಸಂಖ್ಯೆ | ಎಸ್.ಸಿ | ಎಸ್.ಟಿ | ತರಬೇತಿ ಪಡೆದ ಮಹಿಳೆಯರ ಸಂಖ್ಯೆ |
| ಬೆಂಗಳೂರು | 680 | 17 | 155 | 24 | 105 | 294 | 24 | 54 | 12 | 10 |
| ಕಲಬುರಗಿ | 969 | 40 | 255 | 16 | 155 | 399 | 0 | 361 | 19 | 54 |
| ಬೆಳಗಾವಿ | 436 | 34 | 19 | 25 | 67 | 59 | 4 | 23 | 27 | 8 |
| ಮಂಗಳೂರು | 552 | 59 | 67 | 30 | 260 | 297 | 5 | 193 | 52 | 181 |
| ಹುಬ್ಬಳ್ಳ | 546 | 6 | 82 | 21 | 60 | 72 | 1 | 47 | 10 | 33 |
| ವಿಸ್ತರಣಾ ಕೇಂದ್ರ ಗೌರಿಬಿದನೂರು | 144 | 0 | 32 | 22 | 118 | 69 | 0 | 44 | 23 | 43 |
| ವಿಸ್ತರಣಾ ಕೇಂದ್ರ ಕಾರ್ಕಳ | 110 | 5 | 12 | 6 | 29 | 43 | 24 | 12 | 6 | 5 |
| ಒಟ್ಟು | **3437** | **161** | **622** | **144** | **794** | **1233** | **58** | **734** | **149** | **334** |

| ಸಿಎಂಕೆಕೆವೈ ಹಾಗೂ ಸಾಮಾನ್ಯ ತರಬೇತಿ ಅಂಕಿ-ಅಂಶಗಳು (ಏಪ್ರಿಲ್ – 2022 ರಿಂದ ಡಿಸೆಂಬರ್-2022) | | | | | | | | | | |
|---|---|---|---|---|---|---|---|---|---|---|
| ಕೆಜಿಟಿಟಿಐ ಕೇಂದ್ರಗಳು | ಸಿಎಂಕೆಕೆವೈ | | | | | ಸಾಮಾನ್ಯ | | | | |
| | ತರಬೇತಿ ಪಡೆದವರ ಸಂಖ್ಯೆ | ಉದ್ಯೋಗ ಪಡೆದವರ ಸಂಖ್ಯೆ | ಎಸ್.ಸಿ | ಎಸ್.ಟಿ | ತರಬೇತಿ ಪಡೆದ ಮಹಿಳೆಯರ ಸಂಖ್ಯೆ | ತರಬೇತಿ ಪಡೆದವರ ಸಂಖ್ಯೆ | ಉದ್ಯೋಗ ಪಡೆದವರ ಸಂಖ್ಯೆ | ಎಸ್.ಸಿ | ಎಸ್.ಟಿ | ತರಬೇತಿ ಪಡೆದ ಮಹಿಳೆಯರ ಸಂಖ್ಯೆ |
| ಬೆಂಗಳೂರು | 530 | 05 | 113 | 19 | 44 | 252 | 21 | 49 | 10 | 10 |
| ಕಲಬುರಗಿ | 758 | 40 | 198 | 15 | 137 | 337 | 0 | 304 | 17 | 38 |
| ಬೆಳಗಾವಿ | 162 | 23 | 7 | 14 | 29 | 55 | 4 | 22 | 27 | 8 |
| ಮಂಗಳೂರು | 400 | 24 | 39 | 21 | 173 | 226 | 5 | 144 | 46 | 123 |
| ಹುಬ್ಬಳ್ಳಿ | 290 | 05 | 46 | 12 | 39 | 35 | 0 | 15 | 5 | 7 |
| ವಿಸ್ತರಣಾ ಕೇಂದ್ರ ಗೌರಿಬಿದನೂರು | 114 | 0 | 24 | 18 | 100 | 49 | 0 | 29 | 18 | 35 |
| ವಿಸ್ತರಣಾ ಕೇಂದ್ರ ಕಾರ್ಕಳ | 110 | 5 | 12 | 6 | 29 | 43 | 24 | 12 | 6 | 5 |
| ಒಟ್ಟು | 2364 | 102 | 439 | 105 | 551 | 997 | 54 | 575 | 129 | 226 |

## ವಿಶಿಷ್ಟ ಸಾಧನೆಗಳು

1. ಕೆಜಿಟಿಟಿಐ ಬೆಂಗಳೂರು ಮತ್ತು ಕಲಬುರಗಿ ಕೇಂದ್ರಗಳು ಸರ್ಕಾರದ ಯಾವುದೇ ಅನುದಾನವನ್ನು ಪಡೆಯದೇ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ.
2. ಕೆಜಿಟಿಟಿಐ ಬೆಂಗಳೂರು ಮತ್ತು ಕಲಬುರಗಿ ಕೇಂದ್ರಗಳು ನೂತನವಾಗಿ ನಿರ್ಮಿಸಿರುವ ವಿಶಾಲವಾದ ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.
3. ಕೆಜಿಟಿಟಿಐ ವಿಸ್ತರಣಾ ಕೇಂದ್ರವನ್ನು ಗೌರಿಬಿದನೂರಿನಲ್ಲಿ ಪ್ರಾರಂಭಿಸಿ Electrical ಹಾಗೂ CISCOIT Essential, CCNA ಕೋರ್ಸ್‌ಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.
4. ಕೆಜಿಟಿಟಿಐ ಕಲಬುರಗಿ ಕೇಂದ್ರವು AICTE ಯಿಂದ ಮಾನ್ಯತೆ ಪಡೆದಿದೆ ಹಾಗೂ ಈ ಕೇಂದ್ರದಲ್ಲಿ ಡಿಪ್ಲೋಮಾ ಇನ್ ಟೂಲ್ ಮತ್ತು ಡೈ ಮೇಕಿಂಗ್ (DTDM) ಮತ್ತು ದೀರ್ಘಾವಧಿಯ ತರಬೇತಿ ನೀಡಲಾಗುತ್ತಿದೆ.
5. ಕೆಜಿಟಿಟಿಐ ಬೆಂಗಳೂರು ಹಾಗೂ ಕಲಬುರಗಿ ಕೇಂದ್ರಗಳಲ್ಲಿ M/s Amazon Web Services ರವರ ಸಹಯೋಗದೊಂದಿಗೆ Cloud computing ತರಬೇತಿ ಕೋರ್ಸ್ ಪ್ರಾರಂಭಿಸಲಾಗಿದೆ.
6. ಕೆಜಿಟಿಟಿಐ ಬೆಂಗಳೂರು ಸಿಟಿ ಸೆಂಟರ್‌ನಲ್ಲಿ M/s TVS Motors ರವರ ಸಹಯೋಗದೊಂದಿಗೆ ದ್ವಿಚಕ್ರವಾಹನ ದುರಸ್ತಿ ತರಬೇತಿಯನ್ನು ಪ್ರಾರಂಭಿಸಲಾಗಿದೆ.
7. ಕೆಜಿಟಿಟಿಐ ಬೆಂಗಳೂರು ಕೇಂದ್ರದಲ್ಲಿ ನಾಲ್ಕು ಚಕ್ರದ ಆಟೋಮೋಟಿವ್ ಟೆಕ್ನಿಷಿಯನ್, ಆಟೋ ಎಲೆಕ್ಟ್ರಿಕಲ್ ಮತ್ತು ಇ.ವಿ ಲ್ಯಾಬ್ ಸ್ಥಾಪಿಸಿ ತರಬೇತಿ ನೀಡಲಾಗುತ್ತಿದೆ.
8. ಕೆಜಿಟಿಟಿಐ ಬೆಂಗಳೂರು ಮತ್ತು ಕಲಬುರಗಿ ಕೇಂದ್ರಗಳಲ್ಲಿ Expansion of Manufacturing labs (Additive Manufacturing and Advanced Metrology) ಸ್ಥಾಪಿಸಲಾಗುವುದು.
9. ಕೆಜಿಟಿಟಿಐ ಬೆಂಗಳೂರು ಕೇಂದ್ರದಲ್ಲಿ ಕಿಮುರಾ ಫೌಂಡ್ರಿ ಕಂಪನಿ ಲಿ., ಜಪಾನ್‌ರವರ ಸಹಯೋಗದೊಂದಿಗೆ ಕಾಸ್ಟಿಂಗ್ ಅಕಾಡೆಮಿಯನ್ನು ಪ್ರಾರಂಭಿಸಲಾಗಿದೆ.
10. M/s SKODA-Volkswagen ರವರ ಸಹಯೋಗದೊಂದಿಗೆ Body Repair Painting ಮತ್ತು Automotive Technician ತರಬೇತಿ ಕಾರ್ಯಕ್ರಮವನ್ನು ಕೆಜಿಟಿಟಿಐ ಬೆಂಗಳೂರಿನಲ್ಲಿ ಪ್ರಾರಂಭಿಸಲಾಗುವುದು

## 2022-2023 ನೇ ಸಾಲಿನ ಕೆಜಿಎಂಎಸ್‌ಡಿಸಿಯ ವಾರ್ಷಿಕ ಕ್ರಿಯಾ ಯೋಜನೆ

(ಮೊತ್ತ ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕೆಜಿಟಿಟಿಐ ಕೇಂದ್ರಗಳು | ಸಿಬ್ಬಂದಿ ಮತ್ತು ಕಾರ್ಯಾಚರಣೆಯ ವೆಚ್ಚಗಳು | ತಾಂತ್ರಿಕ ಸೇವಾ ಶುಲ್ಕ ಹಾಗೂ ಸಿಬ್ಬಂದಿ ಸಾಮರ್ಥ್ಯ ಅಭಿವೃದ್ಧಿ | ಟೂಲ್ಸ್ ಮತ್ತು ಯಂತ್ರೋಪಕರಣಗಳ ವೆಚ್ಚ | ನಿರ್ಮಾಣದ ಬಂಡವಾಳ ಖರ್ಚು/ಕಟ್ಟಡ ನವೀಕರಣ | ಒಟ್ಟು | ಭೌತಿಕ ಗುರಿ |
|---|---|---|---|---|---|---|---|
| 1 | ಬೆಂಗಳೂರು | 50 | 0 | 0 | 50 | 100 | 1830 |
| 2 | ಕಲಬುರಗಿ | 0 | 0 | 0 | 0 | 0 | 1870 |
| 3 | ಬೆಳಗಾವಿ | 30 | 0 | 200 | 0 | 230 | 665 |
| 4 | ಹುಬ್ಬಳ್ಳಿ | 30 | 0 | 50 | 0 | 80 | 711 |
| 5 | ಮಂಗಳೂರು | 30 | 0 | 50 | 0 | 80 | 689 |
| 6 | ಮೈಸೂರು | 50 | 150 | 500 | 200 | 900 | 785 |
| 7 | ಕೆಜಿಟಿಟಿಐ ವಿಸ್ತರಣಾ ಕೇಂದ್ರ– ಗೌರಿಬಿದನೂರು | 50 | 0 | 10 | 0 | 60 | 307 |
| 8 | ಕೆಜಿಟಿಟಿಐ ವಿಸ್ತರಣಾ ಕೇಂದ್ರ– ಕಾರ್ಕಳ | 50 | 0 | 0 | 0 | 50 | 727 |
| | ಒಟ್ಟು | 290 | 150 | 810 | 250 | 1500 | 7584 |

1. ಕೆಜಿಟಿಟಿಐ ಬೆಂಗಳೂರು ಮತ್ತು ಕಲಬುರಗಿ ಕೇಂದ್ರವು 100% ಚೇತರಿಕೆಯ ಅನುಪಾತವನ್ನು ಸಾಧಿಸಿದೆ ಮತ್ತು ಸ್ವಯಂ ಸಮರ್ಥನೀಯವಾಗಿದೆ. ಯಾವುದೇ ಅನುದಾನವನ್ನು ಕೋರಿರುವುದಿಲ್ಲ.
2. ಕೆಜಿಟಿಟಿಐ ಬೆಳಗಾವಿಯಲ್ಲಿ ಕೈಗಾರಿಕಾ ಆಟೋಮೇಷನ್ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.
3. ಕೆಜಿಟಿಟಿಐ ಮೈಸೂರು ಅನುದಾನವನ್ನು ಮೇಕ್ಷಿಫ್ಟ್ ವ್ಯವಸ್ಥೆ ಸ್ಥಳ, ಕಾರ್ಯಾಚರಣೆಯ ವೆಚ್ಚಗಳು, ಕಚೇರಿ ಮತ್ತು ಲ್ಯಾಬ್ ಪೀಠೋಪಕರಣಗಳ ಸಂಗ್ರಹಣೆ, ಐಟಿ ಲ್ಯಾಬ್‌ಗಾಗಿ ಕಂಪ್ಯೂಟರ್‌ಗಳು, ಸಿಎನ್‌ಸಿ ತರಬೇತಿ ಲ್ಯಾಬ್ ಉಪಕರಣಗಳು, ಎಲೆಕ್ಟ್ರಿಕಲ್ ಮತ್ತು ಎನರ್ಜಿ ಮ್ಯಾನೇಜ್ಮೆಂಟ್ ಲ್ಯಾಬ್ ಉಪಕರಣಗಳ ನವೀಕರಣಕ್ಕಾಗಿ ಉಪಯೋಗಿಸಲಾಗುವುದು.
4. ಕೆಜಿಟಿಟಿಐ ಕಾರ್ಕಳದ ಅನುದಾನವನ್ನು ಕಾರ್ಯಾಚರಣೆಯ ವೆಚ್ಚಗಳಿಗೆ ಉಪಯೋಗಿಸಲಾಗುವುದು.
5. ಕೆಜಿಟಿಟಿಐ ಬೆಂಗಳೂರು ಸಿಟಿಸೆಂಟರ್ ಅನುದಾನವನ್ನು ಪೋಕ್ಸ್ಯಾಗನ್ವಾಡಿ ಮತ್ತು ಪೇಂಟ್ರಿಪೇರಿ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಕಾರ್ಯಾಚರಣೆಯ ವೆಚ್ಚಗಳು ಮತ್ತು ಅಸ್ತಿತ್ವದಲ್ಲಿರುವ ಕಟ್ಟಡದ ನವೀಕರಣಕ್ಕಾಗಿ ಉಪಯೋಗಿಸಲಾಗುವುದು.

1) **ಕೆಜಿಟಿಟಿಐ – ಬೆಂಗಳೂರು**

ನೂತನ ಸುಸಜ್ಜಿತವಾದ ಹೊಸ ಕಟ್ಟಡದಲ್ಲಿ ಅಕ್ಟೋಬರ್ 2019 ರಿಂದ ತರಬೇತಿ ನೀಡಲಾಗುತ್ತಿದೆ. ಹಾಸ್ಟಲ್ ಸೌಲಭ್ಯವನ್ನು ಕೂಡ ಒಳಗೊಂಡಿರುತ್ತದೆ.

- ತರಬೇತಿ ಕಾರ್ಯಕ್ರಮಗಳಿಗೆ ISO 2015 Certification ಪಡೆಯಲಾಗಿದೆ.
- CISCO ವತಿಯಿಂದ IT Essentials, CCNA, Festo ವತಿಯಿಂದ Industrial Automation, CAD/CAM/CNC, TuV ವತಿಯಿಂದ Advanced Welding, Embedded Systems, Volkswagen ವತಿಯಿಂದ Sales Advisor Talent Programme ತರಬೇತಿಗಳನ್ನು ನಡೆಸಲಾಗುತ್ತಿದೆ.
- M/s Hero Motors ರವರ ಸಹಯೋಗದೊಂದಿಗೆ ದ್ವಿಚಕ್ರ ವಾಹನ ತಾಂತ್ರಿಕ ತರಬೇತಿಯನ್ನು ನೀಡಲಾಗುತ್ತಿದೆ.
- M/s Amazon web Services ರವರ ಸಹಯೋಗದೊಂದಿಗೆ Cloud Computing ತರಬೇತಿ ಪ್ರಾರಂಭಿಸಲಾಗಿದೆ.

2) **ಕೆಜಿಟಿಟಿಐ– ಕಲಬುರಗಿ**

ನೂತನ ಸುಸಜ್ಜಿತವಾದ ಹೊಸ ಕಟ್ಟಡದಲ್ಲಿ ಜುಲೈ 2019 ರಿಂದ ತರಬೇತಿ ನೀಡಲಾಗುತ್ತಿದೆ. ಹಾಸ್ಟಲ್ ಸೌಲಭ್ಯವನ್ನು ಕೂಡ ಒಳಗೊಂಡಿರುತ್ತದೆ.

- ತರಬೇತಿ ಕಾರ್ಯಕ್ರಮಗಳಿಗೆ ISO 2015 Certification ಪಡೆಯಲಾಗಿದೆ.
- CISCO ವತಿಯಿಂದ IT Essentials, CCNA, Electrical Maitainance, CAD/CAM/CNC, TuV ವತಿಯಿಂದ Advanced Welding.
- M/s Hero Motors ರವರ ಸಹಯೋಗದೊಂದಿಗೆ ದ್ವಿಚಕ ವಾಹನ ತಾಂತ್ರಿಕ ತರಬೇತಿಯನ್ನು ನೀಡಲಾಗುತ್ತಿದೆ.
- M/s Amazon web Servicesರವರ ಸಹಯೋಗದೊಂದಿಗೆ Cloud Computing ತರಬೇತಿ ಪ್ರಾರಂಭಿಸಲಾಗಿದೆ.

3) **ಕೆಜಿಟಿಟಿಐ – ಬೆಳಗಾವಿ**

- ➢ ತಾತ್ಕಾಲಿಕವಾಗಿ ಐ.ಟಿ.ಐ ಆವರಣದಲ್ಲಿ 2014 ಮೇ ತಿಂಗಳಿನಿಂದ ತರಬೇತಿಯನ್ನು ನೀಡಲಾಗುತ್ತಿದೆ.
- ➢ Manufacturing ವಲಯದ ಅಡಿಯಲ್ಲಿ ಸಿಎನ್‌ಸಿ ಯಂತ್ರಗಳಲ್ಲಿ ಕೌಶಲ್ಯತರಬೇತಿ ನೀಡುವುದು. ಸಿಸ್ಕೋ, ಐಟಿ ಎಸೆನ್ಷಿಯಲ್ಸ್, ಸಿಸಿಎನ್‌ಎ ಮುಂತಾದ ಕೋರ್ಸ್‌ಗಳನ್ನು ಇಂಡಸ್ಟ್ರಿ ಪಾಲುದಾರಾಗಿ ನೀಡುತ್ತಿದೆ.
- ➢ ಕೋವಿಡ್–19 ಸಾಂಕ್ರಾಮಿಕ ಲಾಕ್‌ಡೌನ್ ಸಮಯದಲ್ಲಿ ತರಬೇತಿ ಸ್ಥಗಿತಗೊಂಡಾಗ ಸ್ಥಳೀಯ ಕೈಗಾರಿಕೆಗಳನ್ನು ಬೆಂಬಲಿಸಲು ಕೇಂದ್ರವು ಉತ್ಪಾದನಾ ಆದೇಶ (Job orders) ಗಳನ್ನು ಕೈಗೊಳ್ಳಲಾಯಿತು.

4) ಕೆಜಿಟಿಟಿಐ-ಮಂಗಳೂರು

- ತಾತ್ಕಾಲಿಕವಾಗಿ ಐ.ಟಿ.ಐ ಆವರಣದಲ್ಲಿ 2014 ಮೇ ತಿಂಗಳಿನಿಂದ ತರಬೇತಿಯನ್ನು ನೀಡಲಾಗುತ್ತಿದೆ.
- ಅಡ್ವಾನ್ಸ್ಡ್ ವೆಲ್ಡಿಂಗ್, ಮಾಹಿತಿ ತಂತ್ರಜ್ಞಾನ, ಶೈತ್ರೀಕರಣ ಮತ್ತು ಹವಾ ನಿಯಂತ್ರಣ ತಂತ್ರಜ್ಞಾನದಲ್ಲಿ ಕೌಶಲ್ಯ ತರಬೇತಿ ನೀಡಲಾಗುತ್ತಿದೆ.
- ಕೆಜಿಟಿಟಿಐ ಮಂಗಳೂರು ರೆಡ್‌ಹ್ಯಾಟ್, ಸಿಸ್ಕೋ ಮತ್ತು ಲ್ಯಾಬ್‌ಟೆಕ್‌ನಂತಹ ಹೆಸರಾಂತ ಉದ್ಯಮ ಪಾಲುದಾರರೊಂದಿಗೆ ಒಡನಾಟವನ್ನು ಹೊಂದಿದೆ.

5) ಕೆಜಿಟಿಟಿಐ – ಹುಬ್ಬಳ್ಳಿ

- ತಾತ್ಕಾಲಿಕವಾಗಿ ಐ.ಟಿ.ಐ ಆವರಣದಲ್ಲಿ 2014 ಮೇ ತಿಂಗಳಿನಿಂದ ತರಬೇತಿಯನ್ನು ನೀಡಲಾಗುತ್ತಿದೆ.
- ಮೆ: ಸ್ನೀಡರ್ ರವರ ಸಹಯೋಗದೊಂದಿಗೆ ಎಂಬೆಡೆಡ್ ಸಿಸ್ಟಮ್, ಐಟಿ ಮತ್ತು ಸಿಎನ್‌ಸಿ ಯಂತ್ರಗಳಲ್ಲಿ ಕೌಶಲ್ಯ ತರಬೇತಿ ನೀಡಲಾಗುತ್ತಿದೆ.

6) ಕೆಜಿಟಿಟಿಐ – ಗೌರಿಬಿದನೂರು

- ಕೆಜಿಟಿಟಿಐ ವಿಸ್ತರಣಾ ಕೇಂದ್ರ ಗೌರಿಬಿದನೂರಿನಲ್ಲಿ ಸರ್ಕಾರದ ವತಿಯಿಂದ ವೇರ್‌ಹೌಸ್ ಕಟ್ಟಡವನ್ನು ಲೀಸ್ ಆಧಾರದ ಮೇಲೆ ಪಡೆದು, ಕಟ್ಟಡದ ದುರಸ್ತಿ Aluminium Partition, Electrical ಕಾಮಗಾರಿಗಳನ್ನು ಪೂರ್ಣಗೊಳಿಸಿ ಆಗಸ್ಟ್ 10, 2020 ರಿಂದ ತರಬೇತಿ ಪ್ರಾರಂಭಿಸಲಾಗಿದೆ.
- ಈ ಕೇಂದ್ರದಲ್ಲಿ CISCO ವತಿಯಿಂದ IT Essentials, CCNA ಹಾಗೂ M/s Schneider Electric Co.ರವರ ಸಹಯೋಗದೊಂದಿಗೆ Electrical ತರಬೇತಿಯನ್ನು ಪ್ರಾಂಭಿಸಲಾಗಿದೆ.

7) ಕೆಜಿಟಿಟಿಐ – ಕಾರ್ಕಳ

ಕೆಜಿಟಿಟಿಐ ಕಾರ್ಕಳದಲ್ಲಿ ಪ್ರಾರಂಭಿಸುವ ಬಗ್ಗೆ ಈಗಾಗಲೇ ಸರ್ಕಾರ ಆದೇಶ ನೀಡಲಾಗಿದೆ.

- ತರಬೇತಿಯನ್ನು ತಾತ್ಕಾಲಿಕವಾಗಿ ಪ್ರಾರಂಭಿಸಲು ಈಗಾಗಲೇ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಸ್ಥಳಾವಕಾಶ 4000 ಚದರ ಅಡಿ ಸ್ಥಳಾವಕಾಶವನ್ನು ಪೂರ್ಣ ಪ್ರಮಾಣದ ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ನೀಡುವ ಬಗ್ಗೆ ಶಿಕ್ಷಣ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿರವರು ಅನುಮೋದನೆ ನೀಡಿರುತ್ತಾರೆ.
- ಸರ್ಕಾರದಿಂದ ಈ ಕೇಂದ್ರಕ್ಕೆ 1.66 ಎಕರೆ ಜಮೀನನ್ನು ನೀಡಲಾಗಿದೆ.
- ಉಡುಪಿ ನಿರ್ಮಿತಿ ಕೇಂದ್ರದವರಿಂದ ಸಿವಿಲ್ ಕಾಮಗಾರಿಗಳು, Aluminium Partition, Electrical ಕಾಮಗಾರಿಗಳಿಗೆ ಹಾಗೂ ಪೀಠೋಪಕರಣಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ ಹಾಗೂ ಈ ಅಂದಾಜು ಪಟ್ಟಿಯನ್ನು PWD ರವರ ವತಿಯಿಂದ Technical Scruitiny ಮಾಡಿಸಲಾಗಿದೆ.

- ಕೆಜಿಎಂಎಸ್‌ಡಿಸಿ ವತಿಯಿಂದ ಅಂದಾಜು ಪಟ್ಟಿಗಳಿಗೆ ಆಡಳಿತ ಅನುಮೋದನೆ ನೀಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ.

8) <u>ಕೆಜಿಟಿಟಿಐ – ಮೈಸೂರು</u>

ಕೆಜಿಟಿಟಿಐ ಮೈಸೂರನ್ನು ಪ್ರಾರಂಭಿಸಲು ಈಗಾಗಲೇ ಸರ್ಕಾರಿಆದೇಶ ನೀಡಲಾಗಿದೆ.

- ತಾತ್ಕಾಲಿಕವಾಗಿ ತರಬೇತಿಯನ್ನು ಪ್ರಾರಂಭಿಸಲು ಜಿಲ್ಲಾ ಕೌಶಲ್ಯಾಧಿಕಾರಿ, ಮೈಸೂರು ಕಛೇರಿರವರ ಕಟ್ಟಡದಲ್ಲಿ 4000 ಚದರ ಅಡಿಗಳ ಜಾಗವನ್ನು ಗುರುತಿಸಲಾಗಿದೆ.
- ಈ ಕಟ್ಟಡದಲ್ಲಿ ಸಿವಿಲ್, Aluminium Partition, Electrical ಇತರೆ ಕಾಮಗಾರಿಗಳನ್ನು ನಿರ್ವಹಿಸಲು KRIDLರವರು ಅಂದಾಜು ಪಟ್ಟಿ ತಯಾರಿಸಲು ನೀಡಲಾಗಿದೆ.
- ಈ ಕೇಂದ್ರದಲ್ಲಿ CISCO ವತಿಯಿಂದ IT Essentials ತರಬೇತಿಯನ್ನು M/s Schneider ರವರ ಸಹಯೋಗದೊಂದಿಗೆ Electrical and Energy Management, CAD/CAM/CNC ತರಬೇತಿಯನ್ನು ಪ್ರಾರಂಭಿಸಲಾಗುವುದು.

## ಏಳು ರೀತಿಯ ಕೌಶಲ್ಯ ವಲಯಗಳು:-

**ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆಜಿಟಿಟಿಐ)ಗಳನ್ನು ಅಂತರಾಷ್ಟ್ರೀಯ ಮಟ್ಟದ ತರಬೇತಿ ಕೇಂದ್ರಗಳಾಗಿ ಅಭಿವೃದ್ಧಿ ಪಡಿಸಲು ಕೈಗಾರಿಕೆಗಳ ಬೇಡಿಕೆಗಳ ಅನುಗುಣವಾಗಿ ಈ ಕೆಳಕಂಡ ಏಳು ರೀತಿಯ ವಲಯಗಳಲ್ಲಿ ಕರ್ನಾಟಕ ಯುವಜನತೆಗೆ ತರಬೇತಿಯನ್ನು ನೀಡಲಾಗುತ್ತಿದೆ. ಕೆಜಿಟಿಟಿಐ ಎಲ್ಲಾ ಕೇಂದ್ರಗಳಲ್ಲಿ ಆಧುನಿಕ ಸಂಬಂಧಿಸಿದ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.**

| | |
|---|---|
| **ELECTRICAL TECHNOLOGY** | **Domestic electrician, Industrial electrician, Building Management System** |
| **CONSTRUCTION TECHNOLOGY** | **Plumbing, Total Station, RAC Drone Survey** |
| **AUTOMOTIVE TECHNOLOGY** | **Service Advisor, Car Mechatronics, Hydraulics & Pneumatics, Service Technician** |
| **INFORMATION TECHNOLOGY** | **Cisco IT Essentials, CCNA/CCNP/ Security, Red Hat, Amazon Web Services, Tally ERP** |
| **MANUFACTURING TECHNOLOGY** | **CNC/CAM, Auto CAD, CATIA, Master CAM, CNC Machining, Metrology.** |
| **WELDING TECHNOLOGY** | **SMAW, GMAW & 6G Pipe Welding, Welding Supervisor.** |
| **INDUSTRIAL AUTOMATION** | **Automation Design, Automation Technician, Pneumatics, Industry 4.0** |

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಎ.ಎನ್.ವೇಣುಗೋಪಾಲ ಗೌಡ ಇವರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:16.01.2023 ರಂದು ನಡೆದ ಸಭೆಯಲ್ಲಿ "effective implementation of NALSA (Effective Implementation of Poverty Alleviation) Scheme, 2015' ವಿಷಯದ ಬಗ್ಗೆ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಸದರಿ ಸಭೆಯ ನಡವಳಿಯ ಮೇಲೆ ನಗರ ಬಡತನ ನಿರ್ಮೂಲನಾ ಶಾಖೆ, ಪೌರಾಡಳಿತ ನಿರ್ದೇಶನಾಲಯದಿಂದ ಮಾಹಿತಿ

| Sl No | Scheme | Description |
|---|---|---|
| A | **Pourakarmika Gruha Bhagya Yojane** | Pourakarmika Gruha Bhagya Yojana is a priority housing scheme of the Urban Development Department for providing housing facility to the permanent houseless Pourakarmikas, Loaders, UGD Helpers, Cleaners and sanitary supervisors who work in unhygienic environment in the Urban local bodies of the state. It is being implemented from the year 2014-15.<br>Till date 28 State Level Committees have been conducted and 5274 beneficiaries are approved under this scheme. Presently 3879 houses are completed and 1395 Houses Work are under Progress. |
| B | **Indira Canteen Scheme** | Food is the basic necessity of all human beings. Urban poor people living in cities are deprived of sufficient quantity of balanced diet due to socio economic status. With this back ground, Government has started Indira Canteen to provide vegetarian breakfast, lunch and dinner to the common people at an affordable price of Rs.5/- for breakfast and Rs.10/- for lunch & dinner each.<br>As per the Government order dated: 23-10-2017, 07-03-2018 and 26-12-2017 total 248 Indira Canteens and 15 Independent Kitchen are proposed to be established in 173 Urban Local Bodies (District & Taluka Headquarters) across State. Based on the population of the city the no. of servings to be served during each time has been fixed.<br>Presently, 190 Indira Canteens have been inaugurated in 31 districts and food is served. |

for CHIEF PROJECT OFFICER
Urban Poverty Alleviation Management Unit
Directorate of Municipal Administration
Bangalore

**ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಯಾಧೀಶರಾದ ಶ್ರೀ ಎ.ಎನ್.ವೇಣುಗೋಪಾಲ ಗೌಡ ಇವರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:16.01.2023 ರಂದು ನಡೆದ ಸಭೆಯಲ್ಲಿ "effective implementation of NALSA (Effective Implementation of Poverty Alleviation) Scheme, 2015' ವಿಷಯದ ಬಗ್ಗೆ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು, ಸದರಿ ಸಭೆಯ ನಡವಳಿಯ ಮೇಲೆ ನಗರ ಬಡತನ ನಿರ್ಮೂಲನಾ ಶಾಖೆ, ಪೌರಾಡಳಿತ ನಿರ್ದೇಶನಾಲಯದಿಂದ ಮಾಹಿತಿ**

| ಕ್ರ. ಸಂ. | **ಯೋಜನೆ** | **ಮಾಹಿತಿ** |
|---|---|---|
| ಅ | ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ | ರಾಜ್ಯ ಸರ್ಕಾರವು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನ್ಯೆರ್ಮಲ್ಯ ವಾತವರಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ವಸತಿ ರಹಿತ ಪೌರಕಾರ್ಮಿಕರು, ಲೋಡರ್ಸ್, ಯು.ಜಿ.ಡಿ ಹೆಲ್ಪರ್ಸ್, ಕ್ಲೀನರ್ಸ್, ಹಾಗೂ ಸ್ಯಾನಿಟರಿ ಸೂಪರ್ ವೈಸರ್ ಗಳಿಗೆ ವಸತಿ ಕಲ್ಪಿಸುವ ಉದ್ದೇಶದಿಂದ "ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ" ಯನ್ನು 2014-15 ರಲ್ಲಿ ಜಾರಿಗೊಳಿಸಿದೆ.<br><br>ಪ್ರಸ್ತುತ 28 ರಾಜ್ಯ ಮಟ್ಟದ ಸಮಿತಿ ಸಭೆಗಳು ನಡೆದಿದ್ದು, ಒಟ್ಟು 5274 ಫಲಾನುಭವಿಗಳು ಆಯ್ಕೆ ಮಾಡಿ ಗೃಹ ನಿರ್ಮಾಣಕ್ಕಾಗಿ ಅನುಮೋದನೆ ನೀಡಲಾಗಿರುತ್ತದೆ. ಅನುಮೋದನೆಯಾದ ಪ್ರಸ್ತಾವನೆಗಳಲ್ಲಿ 3879 ಮನೆಗಳು ಪೂರ್ಣಗೊಂಡಿದ್ದು, 1395 ಮನೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ . |
| ಆ | ಇಂದಿರಾ ಕ್ಯಾಂಟೀನ್ ಯೋಜನೆ | ನಗರ ಪ್ರದೇಶಗಳಲ್ಲಿ ವಾಸಿಸುವ ಬಡಜನರಿಗಾಗಿ ಸರ್ಕಾರವು ಕೈಗೆಟುಕುವ ದರದಲ್ಲಿ ಅಂದರೆ 5 ರೂಪಾಯಿಗೆ ಬೆಳಗಿನ ಉಪಹಾರ ಮತ್ತು 10 ರೂಪಾಯಿಗೆ ಮಧ್ಯಾಹ್ನ ಮತ್ತು ಸಂಜೆಯ ಊಟಗಳನ್ನು ಒದಗಿಸಲು ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಅದರಂತೆ ಸರ್ಕಾರವು 2017-18ನೇ ಸಾಲಿನಲ್ಲಿ ಆದೇಶ ಸಂಖ್ಯೆ: ನಅಇ 301 ಎಸ್‌ಎಫ್‌ಸಿ 2017 ದಿನಾಂಕ:23-10-2017, 07-03-2018 ಹಾಗೂ 29-12-2017 ರಂತೆ ರಾಜ್ಯದ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳ 173 ನಗರ ಸ್ಥಳೀಯ ಸಂಸ್ಥೆಗಳಲ್ಲಿ 248 ಕ್ಯಾಂಟೀನ್‌ಗಳು ಮತ್ತು 15 ಸಾಮಾನ್ಯ ಅಡುಗೆ ಕೋಣೆಗಳನ್ನು ಪೂರ್ವ-ಸಿದ್ಧತಾ ಮಾದರಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ನಿರ್ಮಿಸಲು ಅನುಮೋದನೆ ನೀಡಲಾಗಿರುತ್ತದೆ.<br>ಪ್ರಸ್ತುತ 31 ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 190 ಇಂದಿರಾ ಕ್ಯಾಂಟೀನ್‌ಗಳನ್ನು ಉದ್ಘಾಟಿಸಲಾಗಿ ಸಾರ್ವಜನಿಕರಿಗೆ ಆಹಾರ ವಿತರಣಾ ಕಾರ್ಯ ಚಾಲ್ತಿಯಲ್ಲಿರುತ್ತದೆ. |

for CHIEF PROJECT OFFICER
Urban Poverty Alleviation Management Unit
Directorate of Municipal Administration
Bangalore

32

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಪರಿಷ್ಕೃತ ಯಶಸ್ವಿನಿ ಯೋಜನೆ ಜಾರಿಗೊಳಿಸಲು ಸಹಕಾರ ಇಲಾಖೆಯಲ್ಲಿ ಹೊಸದಾಗಿ "**ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್**" ಅನ್ನು ರಚಿಸುವ ಕುರಿತು.

**ಓದಲಾಗಿದೆ** :
1. 2022-23ನೇ ಸಾಲಿನ ಅಯವ್ಯಯ ಭಾಷಣದ ಕಂಡಿಕೆ 67ರ ಘೋಷಣೆಯಂತೆ.
2. ಸರ್ಕಾರದ ಆದೇಶ ಸಂಖ್ಯೆ: ಸಿಒ/154/ಸಿಎಲ್ಎಸ್/2022, ಬೆಂಗಳೂರು, ದಿನಾಂಕ: 30-03-2022.

***

**ಪ್ರಸ್ತಾವನೆ:**

ರಾಜ್ಯದಲ್ಲಿ ಈ ಹಿಂದೆ ಸಹಕಾರ ಸಂಘಗಳ ಸದಸ್ಯರ ಆರೋಗ್ಯ ರಕ್ಷಣೆಗಾಗಿ ಯಶಸ್ವಿನಿ ಯೋಜನೆಯನ್ನು ಸಹಕಾರ ಇಲಾಖೆಯಲ್ಲಿ 2003 ರಲ್ಲಿ ಪ್ರಾರಂಭಿಸಲಾಗಿತ್ತು. ಈ ಯೋಜನೆಯು 2003-2004 ರಿಂದ 2017-2018 ರವರೆಗೆ ಜಾರಿಯಲ್ಲಿದ್ದು, ದಿನಾಂಕ: 31-05-2018 ರಿಂದ ಸ್ಥಗಿತಗೊಂಡಿದ್ದು, ದಿನಾಂಕ: 01-06-2018 ರಿಂದ ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಂಡಿರುತ್ತದೆ.

ಯಶಸ್ವಿನಿ ಯೋಜನೆಯನ್ನು ಮರು ಜಾರಿಗೊಳಿಸುವಂತೆ ರಾಜ್ಯದ ಸಹಕಾರಿಗಳ ನಿರಂತರ ಬೇಡಿಕೆಯನ್ವಯ ರಾಜ್ಯ ಸರ್ಕಾರವು 2022-23ನೇ ಸಾಲಿನ ಆಯವ್ಯಯದಲ್ಲಿ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಲು ಮೇಲೆ ಕ್ರ. ಸಂ. (1) ರಲ್ಲಿ ಓದಲಾದ ಆಯವ್ಯಯ ಘೋಷಣೆಯಲ್ಲಿ ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರ. ಸಂ. (2) ರ ಆದೇಶದಲ್ಲಿ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಲು ತಾತ್ವಿಕ ಅನುಮೋದನೆ ನೀಡಲಾಗಿದೆ.

ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಹಕಾರ ಇಲಾಖೆಯಲ್ಲಿ ಯಶಸ್ವಿನಿ ಟ್ರಸ್ಟನ್ನು ಹೊಸದಾಗಿ ರಚಿಸಿ, ಸದರಿ ಟ್ರಸ್ಟ್ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಈ ಟ್ರಸ್ಟನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಪ್ರಧಾನ ಪೋಷಕರಾಗಿ, ಸಹಕಾರ ಸಚಿವರು ಪೋಷಕರಾಗಿ, ಸರ್ಕಾರದ ಪ್ರಧಾನ ಕಾರ್ಯದರ್ಶಿರವರು ಸಹಕಾರ ಇಲಾಖೆ, ಟ್ರಸ್ಟನ ಅಧ್ಯಕ್ಷರಾಗಿ, ಇತರೆ ಸರ್ಕಾರಿ ಅಧಿಕಾರಿಗಳು ಮತ್ತು ರಾಜ್ಯದ ವಿವಿಧ ವೈದ್ಯಕೀಯ ವಲಯಗಳಲ್ಲಿ ಹೆಸರಾಂತ ವೈದ್ಯರು



Generated from eOffice by SANGAPPA BHOVI, CO-SA(SB), SENIOR ASSISTANT, COPERATIONSEC on 04/03/2023 03:49 PM

ಟ್ರಸ್ಟಿಗಳಾಗಿರುತ್ತಾರೆ. ರಾಜ್ಯದ ದಕ್ಷಿಣ ಮತ್ತು ಉತ್ತರ ಕರ್ನಾಟಕದ ತಲಾ ಒಬ್ಬ ಹಿರಿಯ ಸಹಕಾರಿಗಳು ಟ್ರಸ್ಟಿಗಳಾಗಿ ಟ್ರಸ್ಟ್‌ನಲ್ಲಿ ಇರುತ್ತಾರೆ.

<u>ಟ್ರಸ್ಟ್‌ನ ರಚನೆ:</u>

**I. ಪ್ರಧಾನ ಪೋಷಕರು / ಪೋಷಕರು:**

| ಕ್ರ. ಸಂ. | ವಿವರ | ಪದನಾಮ |
|---|---|---|
| 1 | ಸನ್ಮಾನ್ಯ ಮುಖ್ಯಮಂತ್ರಿಗಳು | ಪ್ರಧಾನ ಪೋಷಕರು |
| 2 | ಮಾನ್ಯ ಸಹಕಾರ ಸಚಿವರು | ಪೋಷಕರು |

**II. ಟ್ರಸ್ಟಿಗಳು:**

| ಕ್ರ. ಸಂ. | ವಿವರ | ಪದನಾಮ |
|---|---|---|
| 1 | ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ. | ಅಧ್ಯಕ್ಷರು ಯಶಸ್ವಿನಿ ಟ್ರಸ್ಟ್ |
| 2 | ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು. | ಟ್ರಸ್ಟಿ |
| 3 | ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು. | ಟ್ರಸ್ಟಿ |
| 4 | ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ), ನಿಬಂಧಕರ ಕಛೇರಿ. | ಟ್ರಸ್ಟಿ |
| 5 | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ಚಾಮರಾಜಪೇಟೆ, ಬೆಂಗಳೂರು. | ಟ್ರಸ್ಟಿ |
| 6 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಮಹಾಮಂಡಳ, ಡಾ|| ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು. | ಟ್ರಸ್ಟಿ |

30

| | | |
|---|---|---|
| 7 | ಡಾ|| ಹೆಚ್. ಆರ್. ಜಗದೀಶ್, ಹೃದಯ ರೋಗ ತಜ್ಞರು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು. | ಟ್ರಸ್ಟಿ |
| 8 | ಡಾ|| ಕೃಷ್ಣಪ್ರಸಾದ್, ಹಿರಿಯ ನೇತ್ರ ತಜ್ಞರು, ಪ್ರಸಾದ್ ನೇತ್ರಾಲಯ, ಉಡುಪಿ | ಟ್ರಸ್ಟಿ |
| 9 | ಡಾ|| ಸವಿತ, ಹಿರಿಯ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರು ಮತ್ತು ಮೆಡಿಕಲ್ ಸೂಪರಿಂಟೆಂಡೆಂಟ್, ವಾಣಿವಿಲಾಸ ಆಸ್ಪತೆ, ಬೆಂಗಳೂರು | ಟ್ರಸ್ಟಿ |
| 10 | ಡಾ|| ಶರಣ್ ಪಾಟೀಲ್ ಹಿರಿಯ ಅರ್ಥೋಪೆಡಿಕ್ಸ್ ಸರ್ಜನ್, ಸ್ಪರ್ಶ ಆಸ್ಪತ್ರೆ, ಬೆಂಗಳೂರು | ಟ್ರಸ್ಟಿ |
| 11 | ಡಾ|| ಡಿ.ಆರ್. ಶಿವಪ್ಪ, ಹಿರಿಯ ವೈದ್ಯರು, ಜನರಲ್ ಮೆಡಿಸನ್ ಉಪ ನಿರ್ದೇಶಕರು, ಪಿಹೆಚ್ಐ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು | ಟ್ರಸ್ಟಿ |
| 12 | ಶ್ರೀ. ಹೆಚ್.ವಿ. ರಾಜೀವ್, ಹಿರಿಯ ಸಹಕಾರಿ, ಮೈಸೂರು. | ಟ್ರಸ್ಟಿ |
| 13 | ಶ್ರೀ. ವಿಶ್ವನಾಥ ಪಾಟೀಲ್ ತೋರಣದಿನ್ನಿ, ಹಿರಿಯ ಸಹಕಾರಿ, ರಾಯಚೂರು. | ಟ್ರಸ್ಟಿ |
| 14 | ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಯಶಸ್ವಿನಿ ಟ್ರಸ್ಟ್, ಬೆಂಗಳೂರು | ಕಾರ್ಯದರ್ಶಿ |

ಕ್ರಮ ಸಂಖ್ಯೆ 07 ರಿಂ 13 ರಲ್ಲಿನ ಟ್ರಸ್ಟಿಗಳ ಅವಧಿಯು ಮೂರು ವರ್ಷಗಳು ಆಗಿರುತ್ತದೆ.

ಮೇಲಿನ ಟ್ರಸ್ಟಿಗಳೊಂದಿಗೆ ಹೊಸದಾಗಿ ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟನ್ನು ಸಹಕಾರ ಇಲಾಖೆಯಲ್ಲಿ ನೊಂದಾಯಿಸಲು ಮತ್ತು ಹಾಲಿ ಇರುವ ಟ್ರಸ್ಟನ್ನು ವಿಸರ್ಜಿಸಲು ಮಾನ್ಯ ಸಹಕಾರ ಸಚಿವರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಕಡತ ಸಂಖ್ಯೆ: ಸಿಒ 154 ಸಿಎಲ್ಎಸ್ 2022 ರಲ್ಲಿ ಅನುಮೋದನೆ ನೀಡಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್‌ನ್ನು ನೊಂದಾಯಿಸಲು ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಸಿಒ 154 ಸಿಎಲ್ಎಸ್ 2022,**
**ಬೆಂಗಳೂರು, ದಿ: 21-09-2022.**

ಯಶಸ್ವಿನಿ ಯೋಜನೆಯನ್ನು ಅನುಷ್ಠಾನಗೊಳಿಸಲು "**ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್**"ನ್ನು ಪ್ರಸ್ತಾವನೆಯಲ್ಲಿ ವಿವರಿಸಿರುವ ಟ್ರಸ್ಟಿಗಳನೊಳಗೊಂಡಂತೆ ನೊಂದಾಯಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರಿಗೆ ಈ ಮೂಲಕ ಸೂಚಿಸಿದೆ. ಹೊಸ ಟ್ರಸ್ಟ್ ರಚನೆಯ ನಂತರ ಹಾಲಿ ಅಸ್ತಿತ್ವದಲ್ಲಿರುವ ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟ್‌ನ್ನು ವಿಸರ್ಜಿಸಿ ಅದಕ್ಕೆ ಸಂಬಂಧಿಸಿದ ಆಸ್ತಿ, ಜವಾಬ್ದಾರಿಗಳನ್ನು ದಾಖಲಾತಿಗಳೊಡನೆ ಹೊಸ ಟ್ರಸ್ಟ್‌ಗೆ ವರ್ಗಾಯಿಸಲೂ ಸಹ ಅಗತ್ಯ ಕ್ರಮ ಕೈಗೊಳ್ಳಲು ನಿಬಂಧಕರಿಗೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

O/C

(signature) 21/9/22

**(ಎ.ಸಿ. ದಿವಾಕರ್)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**ಇವರಿಗೆ:**

ಸಂಕಲನಕಾರರು ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಕೂಡಲೇ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಸರ್ಕಾರದ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ. ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತು ಸಾಂಖ್ಯಿಕ ಇಲಾಖೆ, ಬೆಂಗಳೂರು.
7. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಬೆಂಗಳೂರು.
8. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
9. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು.
10. ವಿಶೇಷ ಕರ್ತವ್ಯಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಸಹಕಾರ ಇಲಾಖೆ.

*****

13/10/22

28

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2022-23ನೇ ಸಾಲಿನಿಂದ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಸಹಕಾರ ಇಲಾಖೆಯಿಂದ ಮರು ಜಾರಿಗೊಳಿಸುವ ಬಗ್ಗೆ.

**ಉಲ್ಲೇಖ:**
1. 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 67ರಲ್ಲಿನ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ಸಿಒ 154 ಸಿಎಲ್ಎಸ್ 2022, ಬೆಂಗಳೂರು, ದಿನಾಂಕ:30-03-2022.
3. ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ನೋಂದಣಿ ಸಂಖ್ಯೆ: GAN-4-00312-2022-23,ದಿ:23-09-2022.

***

**ಾವನೆ :**

2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 67 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ ಮರು ಜಾರಿಗೊಳಿಸಲು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರ. ಸಂ. (2)ರ ಸರ್ಕಾರದ ಆದೇಶದಲ್ಲಿ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ **ಶಸ್ವಿನಿ"** ಯೋಜನೆಯನ್ನು ಪರಿಷ್ಕರಿಸಿ ಮರು ಜಾರಿಗೊಳಿಸಿ ಅನುಷ್ಠಾನಗೊಳಿಸಲು ಸರ್ಕಾರವು ತಾತ್ವಿಕ ಮೋದನೆ ನೀಡಿ ಆದೇಶಿಸಿದೆ.

ಈ ಹಿಂದೆ ಸಹಕಾರ ಇಲಾಖೆಯಲ್ಲಿ ಯಶಸ್ವಿನಿ ಯೋಜನೆಯನ್ನು 2003 ರಲ್ಲಿ ಪ್ರಾರಂಭಿಸಿದ್ದು, 2003- ಂದ 2017-18ರವರೆಗೆ ಜಾರಿಯಲ್ಲಿದ್ದು ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ರ್ವಣೆಗೊಂಡಿದ್ದು, ದಿ:31-05-2018 ರಿಂದ ಈ ಯೋಜನೆಯು ಸ್ಥಗಿತಗೊಂಡಿದ್ದು, ದಿನಾಂಕ:01-06-2018 ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಂಡಿರುತ್ತದೆ.

ರಾಜ್ಯದೆಲ್ಲೆಡೆ ಸಹಕಾರಿಗಳ ಮತ್ತು ರೈತರ ನಿರಂತರ ಬೇಡಿಕೆಯಂತೆ ರಾಜ್ಯ ಸರ್ಕಾರವು 2022-23ನೇ ನ ಆಯವ್ಯಯದಲ್ಲಿ ಯಶಸ್ವಿನಿ ಯೋಜನೆಯನ್ನು ಪರಿಣಾಮಕಾರಿಯಾಗಿ ರೂಪಿಸಿ ಜಾರಿಗೊಳಿಸಲು ತೀರ್ಮಾನಿಸಿ ರೂ.300/- ಕೋಟಿ ಆಯವ್ಯಯದ ಅವಕಾಶ ಕಲ್ಪಿಸಿ ಯೋಜನೆಯನ್ನು ಷಿಸಿದೆ.

ಯಶಸ್ವಿನಿ ಯೋಜನೆಯು ಸಹಕಾರ ಸಂಘಗಳ ಸದಸ್ಯರ ಅನುಕೂಲಕ್ಕಾಗಿ ಜಾರಿಗೊಂಡಿರುವ ಜನೆಯಾಗಿದ್ದು, ಇದನ್ನು ಸಹಕಾರ ಇಲಾಖೆಯಿಂದ ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಆದೇಶ ಡಿಸಲಾಗಿದೆ.

**ರ್ಕಾರದ ಆದೇಶ ಸಂಖ್ಯೆ: ಸಿಒ 154 ಸಿಎಲ್ಎಸ್ 2022, ಬೆಂಗಳೂರು, ದಿನಾಂಕ: 12-10-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣದ ಕೆ 67 ರಲ್ಲಿ ಘೋಷಿಸಿರುವಂತೆ ಯಶಸ್ವಿನಿ ಯೋಜನೆಯನ್ನು ಪರಿಷ್ಕರಿಸಿ, ಸಹಕಾರ ಇಲಾಖೆಯಿಂದ ಜಾರಿಗೊಳಿಸಿ ಆದೇಶಿಸಿದೆ.

ಈ ಯೋಜನೆಯನ್ನು ಓದಲಾದ ಕ್ರ.ಸಂ.(3)ರಲ್ಲಿ ಈ ಉದ್ದೇಶಕ್ಕಾಗಿ ನೋಂದಣಿಯಾಗಿರುವ **ಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್"** ಮೂಲಕ ಅನುಷ್ಠಾನಗೊಳಿಸಲಾಗುವುದು. ರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಇವರು ಟ್ರಸ್ಟ್‌ನ ಅಧ್ಯಕ್ಷರಾಗಿರುತ್ತಾರೆ.

2022-23ನೇ ಸಾಲಿಗೆ ಸಂಬಂಧಿಸಿದಂತೆ ಯಶಸ್ವಿನಿ ಯೋಜನೆಯಡಿ ಸದಸ್ಯತ್ವ ನೋಂದಣಿ

ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 03-10-2022 ರಂದು ಅನುಮೋದಿಸಿರುವಂತೆ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

12/10/22

(ಎ.ಸಿ. ದಿವಾಕರ್)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

O/C

12-10-22

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಸರ್ಕಾರದ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು.
11. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರುಗಳು.
12. ರಾಜ್ಯದ ಸಹಕಾರ ಸಂಘಗಳ ಪ್ರಾಂತೀಯ ಜಂಟಿ ನಿಬಂಧಕರುಗಳು ಬೆಂಗಳೂರು/ ಮೈಸೂರು/ ಬೆಳಗಾವಿ/ ರಾಯಚೂರು.
13. ರಾಜ್ಯದ ಎಲ್ಲಾ ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರುಗಳು.
14. ರಾಜ್ಯದ ಎಲ್ಲಾ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು.
15. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
16. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಣಾದಿಕಾರಿಗಳು.
17. ವಿಶೇಷ ಕರ್ತವ್ಯಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಸಹಕಾರ ಇಲಾಖೆ.
18. ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್‌ನ ಎಲ್ಲಾ ಟ್ರಸ್ಟಿಗಳು.
19. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್.

***



Generated from eOffice by SANGAPPA BHOVI, CO-SA(SB), SENIOR ASSISTANT, COPERATIONSEC on 04/03/2023 03:46 PM

26

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಬಗ್ಗೆ.

**ಉಲ್ಲೇಖ:**
1. 2022-23ನೇ ಸಾಲಿನ ಅಯವ್ಯಯ ಭಾಷಣದ ಕಂಡಿಕೆ 67ರಲ್ಲಿನ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ಸಿಒ 154 ಸಿಎಲ್ಎಸ್ 2022, ಬೆಂಗಳೂರು, ದಿನಾಂಕ:30-03-2022.
3. ಸರ್ಕಾರದ ಆದೇಶ ಸಂಖ್ಯೆ: ಸಿಒ 154 ಸಿಎಲ್ಎಸ್ 2022, ಬೆಂಗಳೂರು, ದಿನಾಂಕ:12-10-2022.

***

**ಪ್ರಸ್ತಾವನೆ :**

2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 67 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಯಶಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ ಮರು ಜಾರಿಗೊಳಿಸಲು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರ. ಸಂ. (2)ರ ಸರ್ಕಾರದ ಆದೇಶದಲ್ಲಿ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ **"ಯಶಸ್ವಿನಿ"** ಯೋಜನೆಯನ್ನು ಪರಿಷ್ಕರಿಸಿ ಮರು ಜಾರಿಗೊಳಿಸಿ ಅನುಷ್ಠಾನಗೊಳಿಸಲು ಸರ್ಕಾರವು ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಈ ಹಿಂದೆ ಸಹಕಾರ ಇಲಾಖೆಯಲ್ಲಿ ಯಶಸ್ವಿನಿ ಯೋಜನೆಯನ್ನು 2003 ರಲ್ಲಿ ಪ್ರಾರಂಭಿಸಿದ್ದು, 2003-04 ರಿಂದ 2017-18ರವರೆಗೆ ಜಾರಿಯಲ್ಲಿದ್ದು ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವರ್ಗಾವಣೆಗೊಂಡಿದ್ದು, ದಿನಾಂಕ: 31-05-2018 ರಿಂದ ಈ ಯೋಜನೆಯು ಸ್ಥಗಿತಗೊಂಡಿದ್ದು, ದಿನಾಂಕ:01-06-2018 ರಿಂದ ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಂಡಿರುತ್ತದೆ.

ರಾಜ್ಯದೆಲ್ಲೆಡೆ ಸಹಕಾರಿಗಳ ಮತ್ತು ರೈತರ ನಿರಂತರ ಬೇಡಿಕೆಯಂತೆ ರಾಜ್ಯ ಸರ್ಕಾರವು 2022-23ನೇ ಸಾಲಿನ ಆಯವ್ಯಯದಲ್ಲಿ ಯಶಸ್ವಿನಿ ಯೋಜನೆಯನ್ನು ಪರಿಣಾಮಕಾರಿಯಾಗಿ ರೂಪಿಸಿ ಮರುಜಾರಿಗೊಳಿಸಲು ತೀರ್ಮಾನಿಸಿ ರೂ.300/- ಕೋಟಿಗಳ ಅವಕಾಶ ಕಲ್ಪಿಸಿ ಆಯವ್ಯಯದಲ್ಲಿ ಈ ಯೋಜನೆಯನ್ನು ಘೋಷಿಸಿದೆ.

ಮೇಲೆ ಓದಲಾದ ಕ್ರ.ಸಂ. (3) ರ ಆದೇಶದಲ್ಲಿ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಸಹಕಾರ ಇಲಾಖೆಯಿಂದ ಅನುಷ್ಠಾನಗೊಳಿಸಲು ಆದೇಶಿಸಿದೆ.

ಯಶಸ್ವಿನಿ ಯೋಜನೆಯು ಸಹಕಾರ ಸಂಘಗಳ ಸದಸ್ಯರ ಅನುಕೂಲಕ್ಕಾಗಿ ಜಾರಿಗೊಂಡಿರುವ ಒಂದು ವಿಶೇಷ ಯೋಜನೆಯಾಗಿದ್ದು, ಇದರಲ್ಲಿ ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿ ರೂ.5.00 ಲಕ್ಷಕ್ಕೆ ನಿಗಧಿಪಡಿಸಿದೆ. ರಾಜ್ಯದ ಯಾವುದೇ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ನಗದು ರಹಿತ ಚಿಕಿತ್ಸೆ ಪಡೆಯಲು ಅವಕಾಶ ಇರುತ್ತದೆ.

ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಲು ಅನುವಾಗುವಂತೆ ಸದಸ್ಯರ ನೋಂದಣಿಯನ್ನು ದಿ:01.11.2022 ರಿಂದ ಪ್ರಾರಂಭಿಸಲಿದ್ದು, ಯೋಜನೆಯ ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 154 (1) ಸಿಎಲ್‌ಎಸ್ 2022, ದಿನಾಂಕ: 12 -10-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 67 ರಲ್ಲಿ ಘೋಷಿಸಿರುವಂತೆ ಯಶಸ್ವಿನಿ ಯೋಜನೆಯನ್ನು ಪರಿಷ್ಕರಿಸಿ ಮರು ಜಾರಿಗೊಳಿಸಿ ಅನುಷ್ಠಾನಗೊಳಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

**ಮಾರ್ಗಸೂಚಿಗಳು:**

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ 1997ರಡಿ ಅಥವಾ ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ 2002ರಡಿ ನೋಂದಾಯಿಸಿ, ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘದ ಸದಸ್ಯರು ಮತ್ತು ಅವರ ಕುಟುಂಬವರ್ಗದವರಿಗೆ ಯಶಸ್ವಿನಿ ಯೋಜನೆಯು ಅನ್ವಯಿಸುತ್ತದೆ.
2. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಎಲ್ಲಾ ಗ್ರಾಮೀಣ ಸ್ವ-ಸಹಾಯ ಗುಂಪುಗಳ ಸದಸ್ಯರು ಹಾಗೂ ಅವರ ಕುಟುಂಬ ವರ್ಗದವರಿಗೂ ಈ ಯೋಜನೆ ಅನ್ವಯಿಸುತ್ತದೆ.
3. ರಾಜ್ಯದ ಯಾವುದೇ ಸಹಕಾರ ಸಂಘ/ಗ್ರಾಮೀಣ ಸ್ವ-ಸಹಾಯ ಗುಂಪಿನಲ್ಲಿ ಕುಟುಂಬದ ಒಬ್ಬ ವ್ಯಕ್ತಿ ಸದಸ್ಯನಾಗಿ ಮೂರು ತಿಂಗಳು ಗತಿಸಿದ್ದಲ್ಲಿ ಅವರ ಕುಟುಂಬವನ್ನು ಒಂದು ಘಟಕವನ್ನಾಗಿ ಪರಿಗಣಿಸಿ ವಾರ್ಷಿಕ ವಂತಿಗೆ ಪಾವತಿಸಿ ಯಶಸ್ವಿನಿ ಯೋಜನೆ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. ಕುಟುಂಬ ಎಂದರೆ ಪ್ರಧಾನ ಅರ್ಜಿದಾರರ (Principal Member) ತಂದೆ, ತಾಯಿ, ಗಂಡ/ಹೆಂಡತಿ, ಗಂಡು ಮಕ್ಕಳು, ಮದುವೆಯಾಗದ ಹೆಣ್ಣು ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಎಂದು ಅರ್ಥೈಯಿಸುವುದು.
4. 2022-23ನೇ ಸಾಲಿಗೆ ಈ ಯೋಜನೆಯಡಿ

   (ಎ) ಗ್ರಾಮೀಣ ಸಹಕಾರ ಸಂಘಗಳ/ಸ್ವ-ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.500/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20 ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ ರೂ.100/-ಗಳನ್ನು ಪಾವತಿಸತಕ್ಕದ್ದು.

   (ಬಿ) ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.1000/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20 ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ ರೂ.200/-ಗಳನ್ನು ಪಾವತಿಸತಕ್ಕದ್ದು.

   (ಸಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ.

   (ಡಿ) ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

   (ಇ) ಸದಸ್ಯರ/ಕುಟುಂಬದವರಿಂದ ಸಂಗ್ರಹಿಸಿದ ವಂತಿಗೆ ಪೈಕಿ ಪ್ರತಿ ಕುಟುಂಬದ ಕಾರ್ಡಿಗೆ ರೂ.10/-ಗಳನ್ನು ಸಹಕಾರ ಸಂಘದ ಸಾದಿಲ್ವಾರು ವೆಚ್ಚಕ್ಕೆ ಮತ್ತು ಯಶಸ್ವಿನಿ ಸದಸ್ಯರನ್ನು ನೋಂದಾಯಿಸಲು ಶ್ರಮಿಸಿದವರಿಗೆ ಪ್ರೋತ್ಸಾಹಧನವಾಗಿ ಸಹಕಾರ ಸಂಘ/ಸಂಸ್ಥೆಯು

...3

ಇಟ್ಟುಕೊಂಡು, ಉಳಿದ ಮೊತ್ತವನ್ನು ಹಣ ಸ್ವೀಕರಿಸಿದ 15 ದಿನಗಳೊಳಗಾಗಿ ಸಂಬಂಧಿಸಿದ ಜಿಲ್ಲಾ ಸಹಕಾರಿ ಬ್ಯಾಂಕುಗಳಲ್ಲಿ ಯಶಸ್ವಿನಿ ಟ್ರಸ್ಟ್ ಹೊಂದಿರುವ ಖಾತೆಗೆ ಜಮಾ ಮಾಡತಕ್ಕದ್ದು/ವರ್ಗಾಯಿಸತಕ್ಕದ್ದು. ಜಿಲ್ಲಾ ಸಹಕಾರಿ ಬ್ಯಾಂಕುಗಳು ಜಮಾ ಆಗುವ ವಂತಿಗೆಯ ಮೊತ್ತವನ್ನು ಸ್ವೀಕರಿಸಿದ 7 ದಿನಗಳೊಳಗಾಗಿ ಅಪೆಕ್ಸ್ ಬ್ಯಾಂಕಿನಲ್ಲಿರುವ ಯಶಸ್ವಿನಿ ಟ್ರಸ್ಟ್ ಖಾತೆಗೆ ಜಮಾ ಮಾಡತಕ್ಕದ್ದು/ವರ್ಗಾಯಿಸತಕ್ಕದ್ದು. ವಿಳಂಬವಾದಲ್ಲಿ ಆ ಹಣವನ್ನು ಇಟ್ಟುಕೊಂಡ ಸಹಕಾರಿ ಸಂಘ/ಸಂಸ್ಥೆಯವರು ಬ್ಯಾಂಕಿನ ನಿಯಮಗಳ ಪ್ರಕಾರ ವಿಳಂಬದ ಅವಧಿಗೆ ಬಡ್ಡಿ ಪಾವತಿ ಮಾಡಲು ಬದ್ಧರಾಗುತ್ತಾರೆ.

24

5. ಮದುವೆಯಾಗಿರುವ ಹೆಣ್ಣು ಮಗಳು ಹಾಗೂ ಅವಳ ಮಕ್ಕಳು ತಂದೆ/ತಾಯಿ/ಅಣ್ಣ/ತಮ್ಮ ಕುಟುಂಬದಲ್ಲಿಯೇ ಅಂದರೆ ಪ್ರಧಾನ ಅರ್ಜಿದಾರರ ಕುಟುಂಬದಲ್ಲಿಯೇ ಯಾವುದೇ ಕಾರಣಕ್ಕೆ ವಾಸವಾಗಿದ್ದರೆ ಅವರ ಪಾಲಿನ ವಂತಿಗೆ ಹಣ ಪಾವತಿಸಿದ್ದರೆ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಆದಾಗ್ಯೂ 2022-23ನೇ ಸಾಲಿನ ಯೋಜನೆಯ ಅವಧಿಯಲ್ಲಿ ಮದುವೆಯಾದ ಹೆಣ್ಣು ಮಗಳು ತಂದೆ/ತಾಯಿ/ಅಣ್ಣ/ತಮ್ಮ ಇವರ ಜೊತೆ ವಾಸವಾಗಿರದೇ ಸಂಘದ ಕಾರ್ಯವ್ಯಾಪ್ತಿ ಹೊರಗೆ ವಾಸವಿದ್ದರೆ ಅಂತಹ ಸಂದರ್ಭದಲ್ಲಿ ಈ ಯೋಜನೆ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ, ಅವಳೇ ಸಹಕಾರ ಸಂಘದ ಸದಸ್ಯೆಯಾಗಿ ಮೂರು ತಿಂಗಳು ಕಳೆದಿದ್ದಲ್ಲಿ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ.

6. 2022-23ನೇ ಸಾಲಿನಲ್ಲಿ ಮದುವೆಯಾಗದ ಹೆಣ್ಣುಮಕ್ಕಳಿಗೆ ಪ್ರಧಾನ ಅರ್ಜಿದಾರರು ವಂತಿಗೆ ಪಾವತಿಸಿದ್ದು, ಆನಂತರ ಮದುವೆಯಾಗಿದ್ದಲ್ಲಿ ಅಂತಹ ಮದುವೆಯಾದ ಹೆಣ್ಣು ಮಗಳು ಪ್ರಸಕ್ತ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆಯಲು ಅರ್ಹರಿರುತ್ತಾರೆ.

7. ಯಶಸ್ವಿನಿ ಯೋಜನೆಯಡಿ ಈ ಮೇಲೆ ಹೇಳಿರುವ ಅರ್ಹತೆಯುಳ್ಳ ವ್ಯಕ್ತಿಗಳು ಸದಸ್ಯರಾಗಲು ಯಾವುದೇ ವಯೋಮಿತಿ ನಿರ್ಬಂಧವಿರುವುದಿಲ್ಲ.

8. ನವಜಾತ ಶಿಶುವಿನ ತಾಯಿ ಹೆಸರು ಯಶಸ್ವಿನಿ ಕಾರ್ಡ್‌ನಲ್ಲಿದ್ದರೆ 30 ದಿನಗಳವರೆಗೆ ತಾಯಿ ಹೆಸರು ಇರುವ ಯಶಸ್ವಿನಿ ಕಾರ್ಡಿನ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ಬರುವ ಸೌಲಭ್ಯವನ್ನು ನವಜಾತ ಶಿಶು ಪಡೆಯಬಹುದು.

9. ಸಮಾಪನಗೊಂಡ ಅಥವಾ ನಿಷ್ಕ್ರಿಯಗೊಂಡ ಸಹಕಾರ ಸಂಘಗಳ ಸದಸ್ಯರು ಮತ್ತು ನೌಕರರ ಸಹಕಾರ ಸಂಘಗಳ ಸದಸ್ಯರಿಗೆ ಈ ಯೋಜನೆ ಅನ್ವಯಿಸುವುದಿಲ್ಲ.

10. ಪ್ರಧಾನ ಅರ್ಜಿದಾರರು ಮತ್ತು ಅವನ ಕುಟುಂಬದ ಯಾವುದೇ ಸದಸ್ಯನು ಸರ್ಕಾರಿ ನೌಕರರಾಗಿ ಅಥವಾ ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ವೇತನ ಪಡೆಯುತ್ತಿದ್ದಲ್ಲಿ ಈ ಯೋಜನೆಗೆ ಅರ್ಹರಿರುವುದಿಲ್ಲ. ಪ್ರಧಾನ ಅರ್ಜಿದಾರರು ಅಥವಾ ಅವನ ಕುಟುಂಬದ ಸದಸ್ಯರು ಯಾವುದೇ ವಿಮಾ ಯೋಜನೆಯಡಿಯಲ್ಲಿ ಸದಸ್ಯನಾಗಿದ್ದಲ್ಲಿ ಅಂತಹವರು ಯಶಸ್ವಿನಿ ಯೋಜನೆಯಡಿ ಸದಸ್ಯನಾಗಲು ಅರ್ಹನಿರುವುದಿಲ್ಲ.

11. 2022-23ನೇ ಸಾಲಿಗೆ ನೋಂದಣಿ ಪ್ರಕ್ರಿಯೆಯನ್ನು ದಿ:01.11.2022 ರಿಂದ ಪ್ರಾರಂಭಿಸಲಾಗುವುದು.

12. 2022-23ನೇ ಯಶಸ್ವಿನಿ ಯೋಜನೆಯ ಅವಧಿ ದಿನಾಂಕ: 01-01-2023 ರಿಂದ ದಿ:31-12-2023 ರವರೆಗೆ ಜಾರಿಯಲ್ಲಿರುತ್ತದೆ.

13. ಯಶಸ್ವಿನಿ ಯೋಜನೆಯಡಿ ಸದಸ್ಯರಿಗೆ ಯೂನಿಕ್ ಐಡಿ ಸಂಖ್ಯೆಯುಳ್ಳ ಕಾರ್ಡ್‌ನ್ನು ಒದಗಿಸಲಾಗುವುದು ಸದರಿ ಕಾರ್ಡಿನಲ್ಲಿ ಪ್ರಾಥಮಿಕ ಸದಸ್ಯರ ಸಹಕಾರ ಸಂಘದ ಸದಸ್ಯತ್ವದ ವಿವರಗಳು ಮತ್ತು ಅವರ ಕುಟುಂಬ ಸದಸ್ಯರ ವಿವರಗಳು, ವಾರ್ಷಿಕ ವಂತಿಗೆ ಪಾವತಿಸಿರುವ ವಿವರ ಹಾಗೂ ಭಾವಚಿತ್ರದ ವಿವರಗಳ ಮಾಹಿತಿಯು ಸಂಗ್ರಹಣೆ ಆಗಿರುತ್ತದೆ. ಇದರಲ್ಲಿ ಕುಟುಂಬದ ವಾರ್ಷಿಕ ವೈದ್ಯಕೀಯ ವೆಚ್ಚದ ಮಿತಿಯನ್ನು ಸಹ ಕಾರ್ಡಿನಲ್ಲಿ ನಮೂದಿಸಲಾಗಿರುತ್ತದೆ.

14. ಸದರಿ ಕಾರ್ಡ್‌ನ್ನು ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಹಾಗೂ ಟಿಪಿಎ ಸಂಸ್ಥೆಯಲ್ಲಿ ಉಪಯೋಗಿಸಿದಾಗ ಪ್ರಧಾನ ಅರ್ಜಿದಾರರು ಹಾಗೂ ಅವರ ಅವಲಂಬಿತರ ಸಂಪೂರ್ಣ ಮಾಹಿತಿ ಲಭ್ಯವಾಗುವ ರೀತಿಯಲ್ಲಿ ತಂತ್ರಜ್ಞಾನ ಅಳವಡಿಸಕೊಳ್ಳಲಾಗುವುದು

15. ಯಶಸ್ವಿನಿ ಯೋಜನೆಯಡಿ ನೋಂದಾಯಿತ ಸದಸ್ಯರು ಈ ಕಾರ್ಡ್‌ನ್ನು ಬಳಸಿ ನಗದು ರಹಿತ ಚಿಕಿತ್ಸೆಗಳನ್ನು ಪಡೆಯಬಹುದಾಗಿದೆ.

16. ಈ ಕೆಳಕಂಡ ಸೌಲಭ್ಯಗಳನ್ನು ಯಶಸ್ವಿನಿ ಸದಸ್ಯರಿಗೆ ಒದಗಿಸಲಾಗುವುದು.

ಎ) ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು ಕಿವಿ, ಮೂಗು, ಗಂಟಲು ವ್ಯಾಧಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು ಹಾಗೂ ಈ ಯೋಜನೆಯಡಿ ಇತರೆ ಅನುಸೂಚಿತ ಸಾಮಾನ್ಯ ರೋಗಿಗಳಿಗೆ ಸಂಬಂಧಿಸಿದ ಚಿಕಿತ್ಸಾ ಸೌಲಭ್ಯಗಳನ್ನು ರಾಜ್ಯದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು.

ಬಿ) ಪ್ರಾರಂಭಿಕವಾಗಿ ಈ ಹಿಂದಿನ ಯಶಸ್ವಿನಿ ಯೋಜನೆಯಲ್ಲಿ ನೋಂದಾಯಿಸಿದ ನೆಟ್‌ವರ್ಕ್ ಆಸ್ಪತ್ರೆಗಳನ್ನೇ ಸದ್ಯಕ್ಕೆ ಮುಂದುವರಿಸಲಾಗಿದೆ. ನಂತರ ಹೊಸ ಮಾರ್ಗಸೂಚಿಗಳಂತೆ, ಟ್ರಸ್ಟ್‌ನಲ್ಲಿ ತೀರ್ಮಾನಿಸಿ ನೆಟ್‌ವರ್ಕ್ ಆಸ್ಪತ್ರೆಗಳನ್ನು ಅಂತಿಮಗೊಳಿಸಲಾಗುವುದು.

ಸಿ) ಪ್ರಾರಂಭಿಕವಾಗಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ 1650 ಖಾಯಿಲೆಗಳಿಗೆ ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಗೆ ಅಳವಡಿಸಿಕೊಳ್ಳಲಾಗುವುದು. ಮುಂದೆ ಯಶಸ್ವಿನಿ ಟ್ರಸ್ಟ್‌ನಲ್ಲಿ ಚರ್ಚಿಸಿ ಅಗತ್ಯತೆ ಕಂಡು ಬಂದಲ್ಲಿ ಚಿಕಿತ್ಸೆಗಳು ಮತ್ತು ದರಗಳ ಪರಿಷ್ಕರಣೆಗೆ ಕ್ರಮವಿಡಲಾಗುವುದು.

ಡಿ) ಯಶಸ್ವಿನಿ ಸದಸ್ಯರು ಜನರಲ್ ವಾರ್ಡ್‌ನಲ್ಲಿ ಸೌಲಭ್ಯ ಪಡೆಯುವಲ್ಲಿ ಅರ್ಹತೆ ಹೊಂದಿರುತ್ತಾರೆ. ಯಶಸ್ವಿನಿ ಯೋಜನೆಯಡಿ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಒದಗಿಸಿರುವ ಚಿಕಿತ್ಸಾ ಸೌಲಭ್ಯದಲ್ಲಿ ಔಷಧಿ ವೆಚ್ಚ, ಆಸ್ಪತ್ರೆ ವೆಚ್ಚ, ಶಸ್ತ್ರಚಿಕಿತ್ಸೆಯ ವೆಚ್ಚ, ಆಪರೇಶನ್ ಥಿಯೇಟರ್ ಬಾಡಿಗೆ. ಅರವಳಿಕೆ ತಜ್ಞರ ಫೀ, ಸರ್ಜನ್ ಫೀ, ಕನ್ಸಲ್‌ಟೆಂಟ್ ಫೀ, ಬೆಡ್ ಚಾರ್ಜ್, ನರ್ಸ್ ಫೀ ಇತ್ಯಾದಿ ವೆಚ್ಚ ಒಳಗೊಂಡಿರುತ್ತದೆ.

ಇ) ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಸದಸ್ಯರಿಗೆ ಹೊರ ರೋಗಿ ಚಿಕಿತ್ಸೆಗೆ (OPD) ಗರಿಷ್ಠ ರೂ.200/-ಗಳ (ಮೂರು ತಿಂಗಳ ಅವಧಿಗೆ) ಮಿತಿ ನಿಗಧಿಪಡಿಸಿದ್ದು, ನೆಟ್‌ವರ್ಕ್ ಆಸ್ಪತ್ರೆಗಳು ಇದಕ್ಕಿಂತ ಹೆಚ್ಚಿನ ಶುಲ್ಕವನ್ನು ಸದಸ್ಯರಿಗೆ ವಿಧಿಸತಕ್ಕದಲ್ಲ. ಈ ಪೈಕಿ ರೂ.100/-ಗಳನ್ನು ಯಶಸ್ವಿನಿ ಟ್ರಸ್ಟ್‌ನ ವತಿಯಿಂದ ಪಾವತಿಸಲಾಗುವುದು.

ಎಫ್) ಸದಸ್ಯರು ಯಶಸ್ವಿನಿ ಕಾರ್ಡ್ ಪಡೆದ ಹದಿನೈದು(15) ದಿನಗಳ ನಂತರ ಯಶಸ್ವಿನಿ ಕಾರ್ಡುದಾರರು ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅರ್ಹರಾಗಿರುತ್ತಾರೆ.

17 ಸದಸ್ಯರ ನೋಂದಣಿಗೆ ಮಾರ್ಗಸೂಚಿಗಳು, ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಯಾದಿ, ಶಸ್ತ್ರಚಿಕಿತ್ಸೆಗಳ ಯಾದಿ, ಇವುಗಳನ್ನು ಸಹಕಾರ ಇಲಾಖೆಯ ಸಹಕಾರ ಸಿಂಧು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು.

18. ಸದಸ್ಯರು ಕಡ್ಡಾಯವಾಗಿ ತಮ್ಮ ಮೊಬೈಲ್ ಸಂಖ್ಯೆಯನ್ನು ಒದಗಿಸತಕ್ಕದು.

ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 03-10-2022 ರಂದು ಅನುಮೋದಿಸಿರುವಂತೆ ಆದೇಶ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

12/10/22

**(ಎ.ಸಿ. ದಿವಾಕರ್)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

12-10-22

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

22

**ಪ್ರತಿಗಳು:**

1. ಸರ್ಕಾರದ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ ಬೆಂಗಳೂರು
8. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು.
11. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರುಗಳು.
12. ರಾಜ್ಯದ ಸಹಕಾರ ಸಂಘಗಳ ಪ್ರಾಂತೀಯ ಜಂಟಿ ನಿಬಂಧಕರುಗಳು ಬೆಂಗಳೂರು/ ಮೈಸೂರು/ ಬೆಳಗಾವಿ/ ರಾಯಚೂರು.
13. ರಾಜ್ಯದ ಎಲ್ಲಾ ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರುಗಳು.
14. ರಾಜ್ಯದ ಎಲ್ಲಾ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು.
15. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
16. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಣಾದಿಕಾರಿಗಳು.
17. ವಿಶೇಷ ಕರ್ತವ್ಯಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಸಹಕಾರ ಇಲಾಖೆ.
18. ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ನ ಎಲ್ಲಾ ಟ್ರಸ್ಟಿಗಳು.
19. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್.

ನಿಬಂಧಕರ ಮೂಲಕ

***

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 154(1) ಸಿಎಲ್‌ಎಸ್ 2022

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:20-12-2022

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಸಿಒ 154(1) ಸಿಎಲ್‌ಎಸ್ 2022, ದಿ:12-10-2022 ರ ಆದೇಶ ಭಾಗದಲ್ಲಿನ ಮಾರ್ಗಸೂಚಿ ಕ್ರ.ಸಂ.4(ಇ) ರಲ್ಲಿ "ರೂ.10" ಎಂದಿರುವುದನ್ನು "ರೂ.20" ಎಂದು ತಿದ್ದಿಕೊಂಡು ಹಾಗೂ ಕ್ರ.ಸಂ.10ರಲ್ಲಿ "ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು," ಎಂಬುದರ ನಂತರ "ಮಾಸಿಕ ರೂ.30.000/- ಕ್ಕಿಂತ ಹೆಚ್ಚು ಅಥವಾ ವಾರ್ಷಿಕ ರೂ.3,60,000/-ಕ್ಕಿಂತ ಹೆಚ್ಚು ಒಟ್ಟು" ಎಂಬುದನ್ನು ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

ಉಳಿದಂತೆ ಆದೇಶ ಭಾಗದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

Radha H.C 20/12/22
(ರಾಧ ಹೆಚ್.ಸಿ.)
ಸರ್ಕಾರದ ಅಧೀನ ಕಾರ್ಯದರ್ಶಿ-3(ಪ್ರ)
ಸಹಕಾರ ಇಲಾಖೆ

**ಇವರಿಗೆ:**

ಸಂಕಲನಕಾರರು,ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಸರ್ಕಾರದ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
a) The State Governments will asses the number of new projects required in the State and communicate tc the Joint Secretary in charge of the Scheme in the Ministry of Women and Child Development, Government of India, Shastri Bhavan, New Delhi along with with justification by 30th September of every year. Subject to availability of resources, the central Government will communicate number of projects those can be approved and make necessary provision in the budget of subsequent financial year.

b) The State Governments may invite applications from eligible organizations and the proposals which fulfil the norms may be placed before a **Project Sanctioning Committee (PSC)** chaired by Secretary(WCD) of the State/UT concerned and comprising representatives from the Finance and Labour Department of the State/UT in addition to any other representative as the State Government/UT administration may decide.

Swadhar Greh will be sanctioned initially for a period of five (5) years. After implementation for 5 year period, the Project Sanctioning Committee may decide on its further continuance or otherwise depending on its performance and need.

L. Procedure for Release of Grant:

State Governments/ UT Administrations will release the grant to the implementing agencies as under:-

a) **For Construction of Swadhar Grehs:**

i. The grant for construction cost for new Swadhar Greh shall be released by the concerned State Government/ UT admn in three (3) instalments, in the ratio of 50:40:10. The one-time grant for purchase of furniture and common area facilities will be released with the final instalment of 10% of the construction cost.

ii. Building plan approved by the local authority along with the permission for construction of building should be a part of the proposal submitted to the PSC. After the approval of the proposal by PSC, first instalment of grant will be released to the implementing agency.

iii. The second instalment will be released after the implementing agency has spent the previous instalment .The Request for release of next instalment will be accompanied by;

a) Utilization Certificate of the previous instalment and an up to date consolidated statement of the actual expenditure incurred on execution of the approved plan, duly certified by a Chartered Accountant/ Government Auditor..

b) The implementing agency should furnish a statement indicating up to date physical progress of the construction work to the Concerned State Government

iv. The 3rd and final instalment along with the one-time grant mentioned above will be released on completion of the construction of the building, provided the following ... duced:

a) Completion certificate from State PWD/CPWD/Housing Board to the effect that the building has been completed in accordance with the approved plans and estimates; and

b) Consolidated Utilization Certificate (which would also include Utilization Certificates of first and second instalments clearly and separately indicated) and Statement of Expenditure incurred on the construction of building duly audited by the authorized auditors/Govt. auditors/Chartered Accountant.

c) Dated photographs from at least four corners of the building, front elevation, side elevation and one close up showing the name board mentioning that the Swadhar Greh has been constructed with the financial assistance from the Ministry of Women and Child Development, Government of India.

M. <u>Swadhar Grehs in Rented Premises</u>

Where assistance is sought towards Swadhar Greh on rent, release shall be made in two equal instalments every year. The one-time grant for non-recurring items shall be released with the first instalment.

i. First instalment will ordinarily be released along with the sanctioning of the Project. The implementing agency will furnish two colour photographs of the Swadhar Greh with the name board, mentioning that the Swadhar Greh is being run with financial assistance of the Ministry of Women and Child Development, Government of India.

ii. The second and subsequent instalment will be released after the implementing agency furnishes proof that it has spent the previous instalment for the purpose for which it was granted. Request for release of the second and subsequent instalment shall be accompanied by the following documents:

a) Utilization Certificate of the previous instalment and an up to date consolidated statement of actual expenditure incurred.

b) Inspection Report by the District administration giving the details of general condition of the Swadhar Greh and facilities provided in the Swadhar Greh along with the details of occupancy along with break-up of actual number of children found present at the time of inspection against the approved occupancy of the residents.

N. <u>Release of grant by the Central Government</u>

The funding pattern for the release of funds shall be 60:40 between the Central Govt. and States except for North Eastern and Himalayan States where the applicable sharing ratio shall be 90:10 between the Central Govt. and State. In case of Union Territories, the entire cost shall be borne by the Central Govt.

Funds to the States/UTs will be released in two instalments every year. Allocation to a State/UT for the year will be decided considering the number of operational projects, number of new projects likely to be sanctioned in the year and availability of resources. First instalment amounting to 50% of allocated grant will be released in the beginning of the

Financial Year after deducting any unspent balance available with the State/UT. Second instalment will be released after 60% of the first instalment has been utilized.

State Governments are required to furnish half yearly statement of expenditure to the Ministry of Women and Child Development.

O. Monitoring of Scheme:

*i Monitoring at the District Level*

All the Swadhar Greh established under the scheme whether newly constructed or running in rented premises or otherwise, would be monitored continuously by a monitoring committee constituted as under, in order to ensure their smooth functioning, identifying gaps and suggesting steps that would lead to their better functioning

a) District Collector -Chairperson
b) Chief Medical Officer -Member
c) Superintendent of Police -Member
d) District Social Welfare Officer/ Women and Child Development Officer Secretary -Member
e) Representative of District Legal Services Authority -Member
f) Representative of the Municipal Corporations/Panchayati Raj Institutions -Member
g) Other eminent persons of the district at the discretion of District Collector -Member

It should be ensured that at least two members of the District Committee shall be women. The committee shall meet at least once in a quarter.

Each implementing agency will submit the Quarterly Progress Report (QPR) of Swadhar Greh, list of Rehabilitated Women and list of inmates etc. in the prescribed format to the District Committee.

*ii Monitoring at the State Level*

The Secretary in-charge of Social Welfare/ Department of Women and Child Development in the State Government/UT Administration shall be the chairperson of the State Level/ UT Administration Monitoring Committee for the scheme. The other members of the Committee would be nominated by the Secretary. A representative of the Ministry of women and Child Development (Joint Secretary of the concerned Bureau or his/her nominee) should also be a member of the committee. The Committee shall meet at least twice a year and monitor the projects. Continuation of grant to any agency would depend on the satisfactory performance as assessed by the State/UT level Committee. *State Government should ensure to conduct Social Audit with regard to the implementation of the Swadhar Greh Scheme.*

iii. *Monitoring at the Central Level*

Ministry of Women and Child Development shall also review the functioning of the Swadhar Greh at regular intervals with the State Governments/UT administrations. Wherever felt necessary, the projects will be inspected by the officers of the Ministry of WCD. Further, the Ministry will explore the possibility of putting in place a web based/ IT enabled monitoring system.

**P. Non adherence of Schematic norms and other violations**

i. In the event of any violation or breach of any provision of the component, or the implementing agency/Swadhar Greh ceasing to exist at any time, all assets created out of Government grant shall revert to the Government of India or the amount involved would be recovered as arrears of land revenue from the implementing agency. Besides criminal action under relevant laws will be taken, if warranted.

ii. In addition to this, in the case of any misappropriation of funds by civil society groups/public trusts/cooperatives/corporate bodies, the State Government would initiate criminal proceedings by lodging an FIR against the defaulting implementing agency, and take strict legal action in order to recover the grant with a penal rate of interest as agreed in the bond to be furnished before the release of grant.

iii. The Government of India through the Ministry or State Departments may be entitled to take over the Swadhar Greh building and/or assets created with the grant provided under the Scheme, if the implementing agency mis-utilizes the financial assistance or wrongly uses the Swadhar Greh building for any other purpose.

iv. Major violation of provisions of the Scheme like falsification of records, unlawful activities including sexual, mental and physical harassment of inmates by the members of management and staff will result in stoppage of grant and black listing of the implementing agency without prejudice to criminal action.

**Q. Transitional Provisions:**

i. All existing Swadhar Homes and Short Stay Homes functioning on the date the new guidelines come into force stand renamed as Swadhar Greh and operate as per the new guidelines. The State Governments/ UT administrations may asses the need and functioning of these Homes and take action for further continuance or otherwise.

ii. Liabilities committed prior to introduction of new guidelines shall be calculated as per pre revised norms and shall be reimbursed to the implementing agencies by the Ministry of Women and Child Development on the recommendation of State Governments/ UT administrations and on submission of requisite documents by the implementing agencies.

**R. To Raise Awareness in Public:**

State Governments are required to raise awareness about availability of Swadhar Greh,

target group of beneficiaries and various facilities provided there under. Each implementing agency will also disseminate information about the Swadhar Greh to the people though various available modes.

**Details of revised cost of Swadhar Greh Scheme for 2016-17 onwards**

**The indicative provisions of Staff for 30 residents Swadhar Greh would be as under:**

Amount in rupees

| S.No. | Name of the Post | No. of Posts | Remuneration (Monthly | Remuneration (Yearly) |
|---|---|---|---|---|
| 1. | Resident Superintendent | 1 | 12,000 | 1,44,000 |
| 2. | Counselor | 1 | 10,000 | 1,20,000 |
| 3. | Office Assistant | 1 | 8,000 | 96,000 |
| 4. | Medical Doctor ( Part time) | 1 | 6,000 | 72,000 |
| 5. | Guard/Watchmen | 2 | 10,000 | 1,20,000 |
| Total | | 6 | 46,000 | 5,52,000 |

**Other Recurring Expenditure of Swadhar Greh for 30 residents**

Amount in rupees

| SNo. | Name of components | Unit | Expenditure (Monthly) | Expenditure (Yearly) |
|---|---|---|---|---|
| 1. | Expenditure towards Food @Rs. 1300/- per resident per month | Per resident | 1300 | 4,68,000/- |
| 2. | Expenditure towards clothing | Per resident | | 30,000/- |
| 3. | Expenditure towards medicines, personal hygiene products etc.@ Rs. 175 per resident per month | Per resident | 175 | 63,000/- |
| 4. | Pocket Money @ Rs.100 per resident per month | Per resident | 100 | 36,000/- |
| 5. | Expense for Recreational activities | Consolidated | per women | 12,000/- |
| 6. | Reimbursement of fees for vocational training under NCVT approved plan and certificate to be issued @ Rs.1800/- per resident per annum | Reimbursement of training and test fees as per norms fixed by the Labour Deptt./NCVT per women | 1800/- per resident p.a. | 27,000/- (Subject to actual) |
| 7. | Contingency including telephone charges | Per home | | 50,000/- |
| 8. | Rent for Swadhar Greh | Per home | 50,000 (Class A City)<br>30,000 (Class B City)<br>18,000 (Class C City) | 6,00,000/-<br>3,60,00/-<br>2,16,000/- |
| | Total | | | 12,86,000/-<br>10,46,000/-<br>9,02,000/- |

Contd-P-2

1. Budget requirements for next three financial years are as under:

Rupees in crores

| Name of the scheme Swadhar Greh | Unit | 2017-18 | Central Share | Unit | 2018-19 | Central Share | unit | 2019-20 | Central Share | Total Central Share |
|---|---|---|---|---|---|---|---|---|---|---|
| Recurring grant for existing swadhar greh @ Rs.1598000 per Swadhar Greh | 592 | 94.60 | 61.50 | 650 | 104.00* | 67.50 | 650 | 104.00* | 67.50 | 196.50 |
| Pending liabilities as on 31.03.2016 | | 52.90 | 52.90 !00% | | | | | | | 52.90 |
| Construction of Vrindavan Home ( Capital Asset) | | 4.39 !00% | 4.39 !00% | | | | | | | 4.39 |
| Monitoring Unit (MU) | 1 | 0.084 100% | 0.084 100% | 1 | 0.084 | 0.084 100% | 1 | 0.084 | 0.084 100% | 0.25 |
| Total | | 151.97 | 118.87 | | 104.08 | 67.58 | | 104.08 | 67.58 | 254.03 |

* **Based on the calculations that one Swadhar Greh in each district for 550 Swadhar Greh all over India= cost of one Swadhar Greh Rs. 15,98,000X 650 =Rs103,87,00,000/-. The funding ratio for all States is 60:40 except for North eastern and Himalayan States is 90:10 and for UTs is 100%.**

**The central Share for next three years will be Rs. 254.03 crore approx**

1. In Swadhar scheme a Monitoring Unit which include Consultant Data Entry Operator etc can be set up for day to day work of the section.
2. Monitoring Unit (MU) within the Ministry of Women and Child Development will be setup for implementation of the Scheme. The MU will be functional under the overall supervision of Additional Secretary/Joint Secretary along with one Director. The MU would also be assisted by one full time coordinator and two data entry operator hired on contractual basis for day to day support in data entry, monitoring and liaison with the state Government for effective implementation of the scheme.. The details of the Human Resource at Monitoring Unit (MU) are at Annexure.

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಇಲಾಖೆ



# ಸಾಂತ್ವನ

## ಪೀಠಿಕೆ

ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ ಮುಂತಾದ ವಿವಿಧ ರೀತಿಯ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಹಾಯ ಒದಗಿಸುವ ದೃಷ್ಟಿಯಿಂದ ಸರ್ಕಾರವು ಸಾಂತ್ವನ ಯೋಜನೆಯನ್ನು 2000-2001 ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ.

## ಉದ್ದೇಶ

ದೌರ್ಜನ್ಯಕ್ಕೆ ಒಳಪಟ್ಟ ಮಹಿಳೆಯರಿಗೆ ಕಾನೂನು ಸಲಹೆ, ಆರ್ಥಿಕ ಪರಿಹಾರ, ತಾತ್ಕಾಲಿಕ ಆಶ್ರಯ ರಕ್ಷಣೆ ನೀಡುವುದರ ಜೊತೆಗೆ ಸ್ವಪ್ರೇರಣೆಯಿಂದ ತಮ್ಮ ಕಾಲ ಮೇಲೆ ತಾವು ನಿಲ್ಲಲು ಅನುಕೂಲವಾಗುವಂತೆ ತರಬೇತಿ ನೀಡುವುದರೊಂದಿಗೆ ಇಂತಹ ಮಹಿಳೆಯರನ್ನು ಆರ್ಥಿಕವಾಗಿ ಸಶಕ್ತರನ್ನಾಗಿ ಮಾಡುವುದೇ 'ಸಾಂತ್ವನ' ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

## ರೂಪರೇಷೆಗಳು

ಸಾಂತ್ವನ ಕೇಂದ್ರಗಳನ್ನು ಸರ್ಕಾರೇತರ ಸಂಘ ಸಂಸ್ಥೆಗಳ ಮುಖಾಂತರ ನಡೆಸಲಾಗುತ್ತಿದೆ. ಅಲ್ಪಾವಧಿ ವಸತಿಗೃಹ, ಕೌಟುಂಬಿಕ ಸಲಹಾ ಕೇಂದ್ರಗಳನ್ನು ನಡೆಸುತ್ತಿರುವ ಮತ್ತು ಮಹಿಳಾ ಕಲ್ಯಾಣ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುತ್ತಿದೆ.



ಈ ಯೋಜನೆಯನ್ನು ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

## ಜಿಲ್ಲಾ ಮಟ್ಟದ ಸಮಿತಿ

ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಈ ಸಮಿತಿಯ ಸದಸ್ಯ ಕಾರ್ಯದರ್ಶಿಯವರಾಗಿದ್ದು, ಜಿಲ್ಲಾ ಕಾನೂನು ನೆರವು ಸಮಿತಿ / ಬಾರ್ ಅಸೋಸಿಯೇಷನ್ನಿನ ಮಹಿಳಾ ಪ್ರತಿನಿಧಿ, ಜಿಲ್ಲಾ ಆರಕ್ಷಕ ಅಧೀಕ್ಷಕರು, ಜಿಲ್ಲಾ ಪಂಚಾಯಿತಿ ನ್ಯಾಯಸಮಿತಿಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯ ಜಿಲ್ಲಾ ಸದಸ್ಯರು ಈ ಸಮಿತಿಯ ಉಳಿದ ಸದಸ್ಯರಾಗಿರುತ್ತಾರೆ.

ಈ ಸಮಿತಿಯು ಸಾಂತ್ವನ ಕೇಂದ್ರದಿಂದ ಬಂದಂತಹ ಪ್ರಕರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ದೌರ್ಜನ್ಯದಿಂದ ನೊಂದ ಮಹಿಳೆಯರಿಗೆ ಸೂಕ್ತ ಪರಿಹಾರ ಹಾಗೂ ನೆರವನ್ನು ಒದಗಿಸಲು ಶಿಫಾರಸ್ಸು ಮಾಡುತ್ತದೆ.

'ಸಾಂತ್ವನ' ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೌಟುಂಬಿಕ ಸಲಹೆಗಾರರು ಹಾಗೂ ಸಮಾಜ ಸೇವಾ ಕಾರ್ಯಕರ್ತರು ಸಾಂತ್ವನ ಕೇಂದ್ರಗಳಲ್ಲಿ ಉತ್ತಮ ಸೇವೆ ಒದಗಿಸಲು ಅನುಕೂಲವಾಗುವಂತೆ ಇಲಾಖೆಯಿಂದ ಮೂರು ದಿನಗಳ ವಸತಿ ಸಹಿತ ತರಬೇತಿಯನ್ನು ಪ್ರತಿವರ್ಷ ಹಮ್ಮಿಕೊಳ್ಳಲಾಗುತ್ತಿದೆ.

ಅಲ್ಲದೇ, "ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005"ರಡಿ 93 'ಸಾಂತ್ವನ' ಕೇಂದ್ರಗಳನ್ನು ರಕ್ಷಣಾ ಗೃಹಗಳೆಂದು ಸರ್ಕಾರವು ಅಧಿಸೂಚನೆ ಹೊರಡಿಸಿರುತ್ತದೆ. ಕೌಟುಂಬಿಕ ಹಿಂಸೆ ತಡೆ ಕಾಯ್ದೆಯಡಿಯಲ್ಲಿ ಮಹಿಳೆಯು ಪರಿಹಾರ ಪಡೆಯಲು ರಕ್ಷಣಾಧಿಕಾರಿ ಹಾಗೂ ಸೇವಾ ಕೇಂದ್ರಗಳ ಸಹಾಯ ಪಡೆಯಬಹುದು.

ಸೇವಾ ಕೇಂದ್ರಗಳು ಈ ಕಾಯ್ದೆ ಅಡಿಯಲ್ಲಿ ಸರ್ಕಾರದಲ್ಲಿ ನೋಂದಣಿ ಮಾಡಿದ್ದು, ಇವರು ಕೌಟುಂಬಿಕ ಹಿಂಸೆ ಅನುಭವಿಸುತ್ತಿರುವ ಮಹಿಳೆಗೆ ಸಹಾಯ ಮತ್ತು ಬೆಂಬಲ ನೀಡುತ್ತಾರೆ. ಮಹಿಳೆಯು ನೋಂದಾಯಿತ ಸೇವಾ ಕೇಂದ್ರಗಳ ಬಳಿ ದೂರು ಸಲ್ಲಿಸಬಹುದು. ಅಂತಹ ಮಹಿಳೆಯರಿಗೆ ಸೇವಾ

ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ ಮುಂತಾದ ವಿವಿಧ ರೀತಿಯ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಹಾಯ ಒದಗಿಸುವ ದೃಷ್ಟಿಯಿಂದ ಸರ್ಕಾರವು ಸಾಂತ್ವನ ಯೋಜನೆಯನ್ನು 2000-2001 ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ.

## ಉದ್ದೇಶ

ದೌರ್ಜನ್ಯಕ್ಕೆ ಒಳಪಟ್ಟ ಮಹಿಳೆಯರಿಗೆ ಕಾನೂನು ಸಲಹೆ, ಆರ್ಥಿಕ ಪರಿಹಾರ, ತಾತ್ಕಾಲಿಕ ಆಶ್ರಯ ರಕ್ಷಣೆ ನೀಡುವುದರ ಜೊತೆಗೆ ಸ್ವಪ್ರೇರಣೆಯಿಂದ ತಮ್ಮ ಕಾಲ ಮೇಲೆ ತಾವು ನಿಲ್ಲಲು ಅನುಕೂಲವಾಗುವಂತೆ ತರಬೇತಿ ನೀಡುವುದರೊಂದಿಗೆ ಇಂತಹ ಮಹಿಳೆಯರನ್ನು ಆರ್ಥಿಕವಾಗಿ ಸಶಕ್ತರನ್ನಾಗಿ ಮಾಡುವುದೇ 'ಸಾಂತ್ವನ' ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

## ರೂಪರೇಷೆಗಳು

ಸಾಂತ್ವನ ಕೇಂದ್ರಗಳನ್ನು ಸರ್ಕಾರೇತರ ಸಂಘ ಸಂಸ್ಥೆಗಳ ಮುಖಾಂತರ ನಡೆಸಲಾಗುತ್ತಿದೆ. ಅಲ್ಪಾವಧಿ ವಸತಿಗೃಹ, ಕೌಟುಂಬಿಕ ಸಲಹಾ ಕೇಂದ್ರಗಳನ್ನು ನಡೆಸುತ್ತಿರುವ ಮತ್ತು ಮಹಿಳಾ ಕಲ್ಯಾಣ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುತ್ತಿದೆ.



ಈ ಯೋಜನೆಯನ್ನು ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರತಿಯೊಂದು ಕೇಂದ್ರವೂ ದಿನದ 24 ಗಂಟೆಯವರೆಗೆ ನೊಂದ ಹಾಗೂ ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಂದ ದೂರು ಸ್ವೀಕಾರದ ವ್ಯವಸ್ಥೆ ಇರುತ್ತದೆ. ಇದಕ್ಕಾಗಿ ಮಹಿಳಾ ಸಹಾಯವಾಣಿ ಸೌಲಭ್ಯವನ್ನು ಸಹ ಒದಗಿಸಲಾಗಿದೆ.

## ಯೋಜನೆಯಡಿ ಸೇವೆಗಳು

ಈ ಕೇಂದ್ರಗಳಿಗೆ ಸಹಾಯ ಕೋರಿ ಬರುವಂತಹ ಮಹಿಳೆಯರ ಪ್ರಕರಣಗಳ ತೀವ್ರತೆಗನುಗುಣವಾಗಿ ಸೇವಾ ಸೌಲಭ್ಯಗಳನ್ನು ಒದಗಿಸಲಾಗುವುದು. ಇಂತಹ ಮಹಿಳೆಯರಲ್ಲಿ ಸ್ವಾವಲಂಬನೆ ಹಾಗೂ ಆತ್ಮವಿಶ್ವಾಸ ಮೂಡಿಸುವ ಸಲುವಾಗಿ ತಕ್ಷಣ ಪರಿಹಾರ ನೀಡುವುದರಿಂದ ಹಿಡಿದು, ಪುನರ್ವಸತಿ ಒದಗಿಸುವವರೆಗೆ ಅವಕಾಶ ಕಲ್ಪಿಸಲಾಗಿದೆ. ಈ ಸೇವೆಗಳು ಈ ಕೆಳಕಾಣಿಸಿದಂತಿರುತ್ತವೆ.

1. ಸಾಂತ್ವನ ಕೇಂದ್ರಕ್ಕೆ ದಾಖಲಾದ ಮಹಿಳೆಗೆ ಆಶ್ರಯದ ಅವಶ್ಯಕತೆ ಇದ್ದಲ್ಲಿ ಸ್ವಾಧಾರ/ ಅಲ್ಪಾವಧಿ ವಸತಿಗೃಹ/ ಸರ್ಕಾರದಿಂದ ನಡೆಸುತ್ತಿರುವ ರಾಜ್ಯ ನಿಲಯ / ಸ್ವೀಕಾರ ಕೇಂದ್ರಗಳಲ್ಲಿ ಆಶ್ರಯ ದೊರಕಿಸಿಕೊಡುವ ವ್ಯವಸ್ಥೆ ಮಾಡಲಾಗುವುದು.

2. ಸಲಹಾ ಸೇವಾ ಅಗತ್ಯವಿದ್ದಲ್ಲಿ ತರಬೇತಿ ಹೊಂದಿದ ಸಲಹೆಗಾರರ ಮೂಲಕ ಸಮಾಲೋಚನೆಯ ಸೇವೆಯನ್ನು ನೀಡಲಾಗುವುದು

3. ಕಾನೂನು ನೆರವು ಅವಶ್ಯಕತೆ ಇರುವ ಪ್ರತಿಯೊಂದು ಪ್ರಕರಣಗಳಿಗೆ ವಕೀಲರನ್ನು ನೇಮಿಸಿಕೊಳ್ಳಲು ₹.2000/- ಆರ್ಥಿಕ ನೆರವು ಹಾಗೂ ಈ ಪ್ರಕರಣವನ್ನು ಮಹಿಳೆಯ ಪರವಾಗಿ ಗೆದ್ದಲ್ಲಿ, ವಕೀಲರಿಗೆ ಹೆಚ್ಚುವರಿಯಾಗಿ ₹.2000/- ನೀಡಲಾಗುವುದು.

4. ರಕ್ಷಣೆ ಕೋರಿಬಂದ ಮಹಿಳೆಯರು ವಿದ್ಯಾಭ್ಯಾಸವನ್ನು ಮುಂದುವರೆಸಲು ಇಚ್ಛಿಸಿದ್ದಲ್ಲಿ ಇವರಿಗೆ ಆರ್ಥಿಕ ನೆರವು ಒದಗಿಸಿ, ಇಲಾಖೆಯ ಅನುದಾನದಲ್ಲಿ ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿರುವ ಉದ್ಯೋಗಸ್ಥ ಮಹಿಳೆಯರ ವಸತಿಗೃಹಗಳಲ್ಲಿ ಆಶ್ರಯ ನೀಡಲಾಗುವುದು.

5. ಅ) ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ 'ಸಾಂತ್ವನ' ಕೇಂದ್ರದಲ್ಲಿ ದೂರು ದಾಖಲಾದ ನಂತರ ಆರ್ಥಿಕ ನೆರವಿನ ಅಗತ್ಯವಿದ್ದಲ್ಲಿ ₹.2000/- ಗರಿಷ್ಠ ₹.10,000/- ಗಳವರೆಗೆ ಜಿಲ್ಲಾ ಸಮಿತಿಯು ನಿರ್ಧರಿಸಿದ ಪ್ರಕಾರ ~~ಆರ್ಥಿಕ ಪರಿಹಾರ ನೀಡಲಾಗುವುದು~~. ಇವರು ಸ್ವಾಧಾರ ಕೇಂದ್ರ /ಅಲ್ಪಾವಧಿ ವಸತಿಗೃಹ ಅಥವಾ ಉದ್ಯೋಗಸ್ಥ ಮಹಿಳೆಯರ ವಸತಿಗೃಹದಲ್ಲಿ ಆಶ್ರಯ ಪಡೆದಿದ್ದರೆ, ಆರ್ಥಿಕ ನೆರವು ಪಡೆಯಲು ಅರ್ಹರಿರುವುದಿಲ್ಲ.

ಆ) ದೌರ್ಜನ್ಯಕ್ಕೆ ಒಳಗಾದ ಮಹಿಳೆಯು ಮರಣ ಹೊಂದಿದ ಪಕ್ಷದಲ್ಲಿ ಅಂತಹ ಮಹಿಳೆಯರ ಮಕ್ಕಳ ಹೆಸರಿನಲ್ಲಿ ₹.5000/- ದಿಂದ ₹.10,000/- ಗಳನ್ನು ಅವರ ಶಿಕ್ಷಣ ಹಾಗೂ ಪುನರ್ವಸತಿಗಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಇಡಲಾಗುವುದು. ಈ ಹಣವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರ ಹಾಗೂ ಮಗುವಿನ ಹೆಸರಿನಲ್ಲಿ ಜಂಟಿ ಖಾತೆಯಲ್ಲಿ ಇಡಲಾಗುವುದು.

## ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ತರಬೇತಿ

'ಸಾಂತ್ವನ' ಕೇಂದ್ರದಿಂದ ಶಿಫಾರಸ್ಸು ಮಾಡಲ್ಪಟ್ಟ ಮಹಿಳೆಯರಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಅವರಿಗೆ ಆಸಕ್ತಿ ಇರುವ ಯಾವುದೇ ಕೌಶಲ್ಯತೆ ಅಭಿವೃದ್ಧಿಯಲ್ಲಿ ತರಬೇತಿ ನೀಡಲು ಸಹಕರಿಸುತ್ತಿದೆ.



ಅನುಬಂಧ-1

## ಸಮಗ್ರ ಶಿಕ್ಷಣ ಕರ್ನಾಟಕ
## ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಚೇರಿಗಳ ಪೂರಕ ಕಟ್ಟಡ,ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಶಾ.ಶಿ.ಮ.ಸಾ.ಇ/ಮಾ & ದಾ/ ಆ.ಕ.ಪ/2022-23 ದಿನಾಂಕ: 06.03.2023

ಇವರಿಗೆ,
ಕಾನೂನು ಕೋಶದ ಮುಖ್ಯಸ್ಥರು ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ(ಪ್ರ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.
ಬಹು ಮಹಡಿ ಕಟ್ಟಡ, ಬೆಂಗಳೂರು.

ಮಾನ್ಯರೆ,

ವಿಷಯ:- ಸಮಗ್ರ ಶಿಕ್ಷಣ ಕರ್ನಾಟಕವತಿಯಿಂದ ಜಾರಿಗೊಳಿಸಲಾಗಿರುವ ವಿವಿಧ ಯೋಜನೆಗಳ ಮಾಹಿತಿ ನೀಡುತ್ತಿರುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ: ಇಡಿ 35ಕಾಕೋ 2023 ದಿನಾಂಕ 28.02.2023.

~*~'*'~*~

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಸಮಗ್ರ ಶಿಕ್ಷಣ ಕರ್ನಾಟಕವತಿಯಿಂದ ಜಾರಿಗೊಳಿಸಲಾಗಿರುವ ವಿವಿಧ ಯೋಜನೆಗಳು ವಿವಿಧ ಹಂತಗಳಲ್ಲಿ ರಾಜ್ಯದಾದ್ಯಂತೆ ಜಾರಿಗೊಳಿಸಲಾಗಿದ್ದು, ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹಾಗೂ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪೂರಕವಾದ ಆದೇಶಗಳನ್ನು ಹಾಗೂ ಸುತ್ತೋಲೆಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

**ಯೋಜನೆಗಳ ವಿವರ :-**

1. ಕೆ.ಜಿ.ಬಿ.ವಿ ಟೈಪ್-1 ವಿದ್ಯಾರ್ಥಿನಿಯರ ವಸತಿ ಶಾಲೆ.

1A. ಕೆ.ಜಿ.ಬಿ.ವಿ ಟೈಪ್-4 ವಿದ್ಯಾರ್ಥಿನಿಯರ ವಸತಿ ಶಾಲೆ.(ಕಸ್ತೂರ ಬಾ ಗಾಂಧಿ ವಸತಿ ಶಾಲೆ).

2. ವಿಶೇಷ ಅಗತ್ಯತೆಯುಳ್ಳ ಮಕ್ಕಳ **ಸಮನ್ವಯ ಶಿಕ್ಷಣ.**
3. ಎನ್.ಎಸ್.ಕ್ಯು.ಎಫ್ ಯೋಜನೆ (ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು).
4. ದ್ವಿಭಾಷ ಮಾಧ್ಯಮ ತರಗತಿಗಳು (ಕನ್ನಡ ಮಾಧ್ಯಮದ ಜೊತೆ ಆಂಗ್ಲ ಮಾಧ್ಯಮ ತರಗತಿಗಳು).
5. ಮಾದರಿ ಶಾಲೆಗಳು (ಅರ್ದಶ ವಿದ್ಯಾಲಯಗಳು ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್ ಗಳಲ್ಲಿ ರಾಷ್ಟ್ರೀಯ ಪುರಸ್ಕೃತ ಯೋಜನೆಯಾಡಿಯಲ್ಲಿ).
6. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶಾಲಾನುದಾನ ಬಿಡುಗಡೆ.
7. ಸಮಗ್ರ ಶಿಕ್ಷಣ ಕರ್ನಾಟಕದ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಯೋಜನೆಗಳ ವ್ಯಪಕ ಪ್ರಚಾರಕ್ಕಾಗಿ ಕೋವಿಡ್-19 ರ ಪೂರ್ವದಲ್ಲಿ **ತಿಂಗಳ ತಿರುಳು** ಜಾಹಿರಾತು ಫಲಕಗಳನ್ನು ರಾಜ್ಯದ ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿ ಮಾಹೆ ಇಲಾಖೆಯಿಂದ ಪ್ರಕಟಿಸಲಾಗಿತ್ತು.
8. ಇಲಾಖೆಯಲ್ಲಿ ಹಾಗೂ ವಿವಿಧ ಹಂತಗಳಲ್ಲಿ ನಡೆಯುವ ಇಲಾಖಾ ಕಾರ್ಯಕ್ರಮಗಳ ಕಿರು ಚಿತ್ರಣವನ್ನು ಪ್ರತಿಬಿಂಬಿಸುವ ಕಿರು ಹೊತ್ತಿಗೆ- **ಶಿಕ್ಷಣ ವಾರ್ತೆ** ಮಾಸಿಕ ಪತ್ರಿಕೆ ಇಲಾಖೆಯಿಂದ ಪ್ರಕಟಿಸಲಾಗುತ್ತಿದೆ.
9. ಕರ್ನಾಟಕ ಪಬ್ಲಿಕ್ ಶಾಲೆಗಳು.

ಈ ಮೇಲ್ಕಂಡ ಎಲ್ಲಾ ಯೋಜನೆಗಳು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಾಗಿರುತ್ತವೆ.

**ವಂದನೆಗಳೊಂದಿಗೆ**

ತಮ್ಮ ವಿಶ್ವಾಸಿ

ನಿರ್ದೇಶಕರು (ಕಾರ್ಯಕ್ರಮ)
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

ಸಮಗ್ರ ಶಿಕ್ಷಣ – ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ,
ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560 001

ಸಂಖ್ಯೆ:ಸಶಿಕ/ಕೆಜಿಬಿವಿ/ಸುತ್ತೋಲೆ/2022-23 ದಿನಾಂಕ:15-07-2022

## ಸುತ್ತೋಲೆ

**ವಿಷಯ:** 2022-23ನೇ ಸಾಲಿಗೆ ಕೆ.ಜಿ.ಬಿ.ವಿ. ಟೈಪ್ – 1 ವಸತಿ ಶಾಲೆಗಳಲ್ಲಿ ಅನುಷ್ಠಾನಗೊಳಿಸುವ ಕಾರ್ಯಚಟುವಟಿಕೆಗಳ ಮಾರ್ಗಸೂಚಿ.

**ಉಲ್ಲೇಖ:** 1. MoE. ನವದೆಹಲಿ ರವರ ಪತ್ರ ಸಂಖ್ಯೆ: F.No.14-3/2022-IS.5 ದಿನಾಂಕ 14-06-2022.

2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಶಿಕ/ಕೆಜಿಬಿವಿ ಸುತ್ತೋಲೆ-1/2021-22 ದಿನಾಂಕ:28-09-2021.
3. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಶಿಕ/ಕೆಜಿಬಿವಿ/ಸುತ್ತೋಲೆ/2019-20 ದಿನಾಂಕ 16-07-2019.

******

ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಬಾಲಕಿಯರ ಹಾಗೂ ಬಾಲಕರ ದಾಖಲಾತಿಯಲ್ಲಿ ಇರುವ ಅಂತರವನ್ನು ಕಡಿಮೆ ಮಾಡುವುದು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸೌಲಭ್ಯ ವಂಚಿತ ಸಮುದಾಯಗಳಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸಿ, ಈ ವರ್ಗದ ಬಾಲಕಿಯರಿಗೆ ಶಾಲಾ ಶಿಕ್ಷಣದ ಅವಕಾಶ (Access) ಮತ್ತು ಗುಣಾತ್ಮಕ ಶಿಕ್ಷಣ (Quality Education) ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ರಾಜ್ಯದಲ್ಲಿ ಕಸ್ತೂರ ಬಾ ಗಾಂಧಿ ಬಾಲಿಕಾ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ರಾಜ್ಯದ 69 ಕಸ್ತೂರ ಬಾ ಗಾಂಧಿ ಬಾಲಿಕಾ ವಸತಿ ಶಾಲೆಗಳಿಗೆ ಸಂಬಂಧಿಸಿದಂತೆ 2022-23 ನೇ ಸಾಲಿಗೆ ಯೋಜನಾ ಅನುಮೋದನಾ ಮಂಡಳಿಯಿಂದ (ಪಿ.ಎ.ಬಿ) ಕೆಜಿಬಿವಿ ಟೈಪ್-1 ವಸತಿ ಶಾಲೆಗಳ ಕಾರ್ಯ ಚಟುವಟಿಕೆಗಳ ನಿರ್ವಹಣೆಗಾಗಿ ಆವರ್ತಕ ವೆಚ್ಚದಡಿಯಲ್ಲಿ ರೂ.4131.32 ಲಕ್ಷ ಅನುದಾನ ಅನುಮೋದನೆಯಾಗಿರುತ್ತದೆ. ಅನುದಾನ ಖರ್ಚು ಮಾಡುವ ಬಗ್ಗೆ ಈ ಕೆಳಗಿನಂತೆ ಸೂಚನೆ ನೀಡಲಾಗಿದೆ.

**ಕೆಜಿಬಿವಿ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿನಿಯರ ದಾಖಲಾತಿಗಾಗಿ ಅನುಸರಿಸಬೇಕಾದ ನಿಯಮಗಳು:**

- ಕೆ.ಜಿ.ಬಿ.ವಿ ವಸತಿ ಶಾಲೆಯ ವಿದ್ಯಾರ್ಥಿನಿಯರ ದಾಖಲಾತಿ ನಿಯಮಗಳ ಪ್ರಕಾರ ಎಸ್.ಸಿ, ಎಸ್.ಟಿ, ಓ.ಬಿ.ಸಿ, ಮೈನಾರಿಟಿ ವರ್ಗಗಳಿಂದ ಶೇ. 75 ರಷ್ಟು ಮತ್ತು ಬಿ.ಪಿ.ಎಲ್ ವರ್ಗದಿಂದ ಶೇ.25 ರಷ್ಟು ದಾಖಲಾತಿ ಇರಬೇಕು.
- ಬಡತನ ರೇಖೆಗಿಂತ ಕೆಳಗಿರುವ (ಬಿ.ಪಿ.ಎಲ್) ಕುಟುಂಬಗಳಿಂದ ದಾಖಲಾದ ಮಕ್ಕಳನ್ನು ಬಿ.ಪಿ.ಎಲ್ ಅಡಿಯಲ್ಲಿ ಗಣನೆಗೆ ತೆಗೆದುಕೊಳ್ಳುವುದು.
- ಅನಾಥ ಮಕ್ಕಳು ತಂದೆ/ತಾಯಿ ಇಲ್ಲದ ಮಕ್ಕಳ ದಾಖಲಾತಿಗೆ ಆದ್ಯತೆ ನೀಡುವುದು.

ಅನುಬಂಧ-2.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ :ಸಿ3/ಇತರೆ ಮಾಹಿತಿ/2022-23 ದಿನಾಂಕ : 07-03-2023

ಕಾನೂನು ಕೋಶದ ಮುಖ್ಯಸ್ಥರು ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ(ಪ್ರ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು

ಮಾನ್ಯರೆ,

ವಿಷಯ:ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಜಾರಿಗೊಳಿಸಲಾಗಿರುವ ವಿದ್ಯಾವಿಕಾಸ ಯೋಜನೆಯಡಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳ ಮಾಹಿತಿ ನೀಡುತ್ತಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ; ಇಡಿ 35 ಕಾಕೋ 2023ದಿ :26-2-2023

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖದನ್ವಯ, ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ವಿದ್ಯಾವಿಕಾಸ ಯೋಜನೆಯಡಿ ಜಾರಿಗೊಳಿಸಲಾಗಿರುವ ಈ ಕೆಳಕಂಡ ಕಾರ್ಯಕ್ರಮಗಳ ಮಾಹಿತಿ/ಆದೇಶದ ಪ್ರತಿ/ಸುತ್ತೋಲೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

1. 1 ರಿಂದ 10ನೇ ತರಗತಿವರೆಗಿನ ಎಲ್ಲಾ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ
2. 1 ರಿಂದ 10ನೇ ತರಗತಿವರೆಗಿನ ಎಲ್ಲಾ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಶೂ ಮತ್ತು ಸಾಕ್ಸ್.
3 1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ/ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ
4. ಪ್ರಧಾನಮಂತ್ರಿ ಪೋಷಣ್ ಅಭಿಯಾನ ಅಡಿಯಲ್ಲಿ ಮದ್ಯಾಹ್ನದ ಬಿಸಿಯೂಟ ಕಾರ್ಯಕ್ರಮ
5. 8ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣೆ.

ತಮ್ಮ ನಂಬುಗೆಯ

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ದಿನಾಂಕ:07.03.2023

ವಿಷಯ : ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಎ.ಎನ್. ವೇಣುಗೋಪಾಲ ಗೌಡ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:16.01.2023ರಂದು ನಡೆದ ಸಭೆಯಲ್ಲಿ "effective implementation of NALSA (Effective Implementation of Poverty Alleviation) Scheme, 2015" ವಿಷಯದ ಬಗ್ಗೆ ಚರ್ಚಿಸಲಾದ ವಿಷಯದ ಬಗ್ಗೆ, ಸಭೆಯ ನಡವಳಿಯ ಮೇಲೆ ಅನುಸರಣಾ ವರದಿ ಸಲ್ಲಿಸುವ ಬಗ್ಗೆ.

**ಸಮವಸ್ತ್ರ ಸರಬರಾಜು : -**

- ವಿದ್ಯಾವಿಕಾಸ ಯೋಜನೆಯಡಿಯಲ್ಲಿ ರಾಜ್ಯದಲ್ಲಿನ 1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ 1 ಜೊತೆ ಸಮವಸ್ತ್ರಗಳನ್ನು ಒದಗಿಸಲಾಗುತ್ತಿದೆ.
- ಉಚಿತ ಸಮವಸ್ತ್ರ ವಿತರಣಾ ಕಾರ್ಯಕ್ರಮವು ವಿದ್ಯಾರ್ಥಿಗಳ ಹಾಜರಾತಿಯನ್ನು ಉತ್ತಮಪಡಿಸಲು, ಮಕ್ಕಳಲ್ಲಿ ಸಮಾನತಾಮನೋಭಾವ ಮೂಡಿಸಲು ಹಮ್ಮಿಕೊಳ್ಳಲಾಗಿರುವ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಒಂದು ಭಾಗವಾಗಿದೆ.
- 2022-23ನೇ ಸಾಲಿನಲ್ಲಿ ರಾಜ್ಯದಲ್ಲಿನ 1 ರಿಂದ 10ನೇ ತರಗತಿಯ ಎಲ್ಲಾ ಸಾರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಒಟ್ಟು 45.46ಲಕ್ಷ ಮಕ್ಕಳಿಗೆ ಒಂದನೇ ಜೊತೆ ಸಮವಸ್ತ್ರವನ್ನು ಈ ಕಛೇರಿಯಿಂದ ವಿದ್ಯಾ ವಿಕಾಸ ಯೋಜನೆಯಡಿ ಅಂದಾಜು ರೂ.98.7/-ಕೋಟಿ ವೆಚ್ಚದಲ್ಲಿ ಸರಬರಾಜು ಮಾಡಲಾಗಿದೆ.
- 2022-23ನೇ ಸಾಲಿನಲ್ಲಿ ಎರಡನೇ ಜೊತೆ ಸಮವಸ್ತ್ರವನ್ನು ಸಮಗ್ರ ಶಿಕ್ಷಣ ಕರ್ನಾಟಕದಡಿ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಅಂದಾಜು ರೂ.97.3/-ಕೋಟಿ ವೆಚ್ಚದಲ್ಲಿ ಸರಬರಾಜು ಮಾಡಲಾಗಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : **2022–23ನೇ ಶೈಕ್ಷಣಿಕ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮೊದಲನೇಯ ಸೆಟ್ (ಒಂದು ಜೊತೆ) ಉಚಿತ ಸಮವಸ್ತ್ರ ವಿತರಿಸುವ ಬಗ್ಗೆ.**

**ಓದಲಾಗಿದೆ :** 1. ಮಾನ್ಯ ಸಚಿವ ಸಂಪುಟ ಸಭೆ ಪ್ರಕರಣ ಸಂಖ್ಯೆ: ಸಿ:11/2022 ರಲ್ಲಿ ದಿನಾಂಕ: 27.01.2022 ರ ನಿರ್ಣಯ.

2.ಸರ್ಕಾರದ ಆದೇಶ ಸಂಖ್ಯೆ: ಇಪಿ 133 ಯೋಯೋಕ 2021, ದಿನಾಂಕ:02.08.2021.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರ ಸಚಿವ ಸಂಪುಟ ಸಭೆಯ ನಿರ್ಣಯದಂತೆ ವಿದ್ಯಾವಿಕಾಸ ಯೋಜನೆಯಡಿ 2022–23ನೇ ಸಾಲಿಗೆ ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು **46.37 ಲಕ್ಷ** ವಿದ್ಯಾರ್ಥಿಗಳಿಗೆ ಮೊದಲನೇಯ ಸೆಟ್ ಸಮವಸ್ತ್ರವನ್ನು ಅಂದಾಜು **ರೂ.93.27 ಕೋಟಿಗಳ** ವೆಚ್ಚದಲ್ಲಿ ವಿತರಿಸಲು ಅನುಮೋದನೆ ನೀಡಲಾಗಿದೆ.

ಮುಂದುವರೆದು, ಮಾನ್ಯ ಸಚಿವ ಸಂಪುಟ ಸಭೆಯಲ್ಲಿ **ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆ.ಹೆಚ್.ಡಿ.ಸಿ) ಮತ್ತು ಕರ್ನಾಟಕ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತಿದಿಂದ (ಕೆ.ಎಸ್.ಟಿ.ಐ.ಡಿ.ಸಿ)** ಇವರ ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಪರಿಮಾಣವನ್ನು ನಿಗದಿಪಡಿಸುವಂತೆ ಹಾಗೂ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆ.ಹೆಚ್.ಡಿ.ಸಿ) ಇವರಿಂದ ಸರಬರಾಜು ಮಾಡಲ್ಪಡುವ ಸಮವಸ್ತ್ರ ಬಟ್ಟೆಗೆ ಸ್ಪರ್ಧಾತ್ಮಕ ಟೆಂಡರ್‌ನಲ್ಲಿ ಹೊರಬರುವ ದರಕ್ಕಿಂತ **ಶೇಕಡಾ 15** ರಷ್ಟು ಹೆಚ್ಚು ದರವನ್ನು ನಿಗದಿಪಡಿಸುವಂತೆ ನಿರ್ಣಯಿಸಲಾಗಿದೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ **1 ರಿಂದ 10ನೇ ತರಗತಿಯಲ್ಲಿ** ವ್ಯಾಸಂಗ ಮಾಡುತ್ತಿರುವ ಸುಮಾರು **46.37 ಲಕ್ಷ** ವಿದ್ಯಾರ್ಥಿಗಳಿಗೆ ಮೊದಲನೇಯ ಜೊತೆ ಸಮವಸ್ತ್ರಕ್ಕಾಗಿ **ಒಟ್ಟು 132.63 ಲಕ್ಷ ಮೀಟರ್** ಬಟ್ಟೆಯಲ್ಲಿ ಸಾಮರ್ಥ್ಯಕ್ಕೆ ಅನುಗುಣವಾಗಿ ಅಂದಾಜು **50.00 ಲಕ್ಷ**

ಮೀಟರ್ ಬಟ್ಟೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ(ಕೆ.ಹೆಚ್.ಡಿ.ಸಿ) ಮೂಲಕ, ಅಂದಾಜು **10.00 ಲಕ್ಷ ಮೀಟರ್** ಬಟ್ಟೆಯನ್ನು ಕರ್ನಾಟಕ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಟಿ.ಐ.ಡಿ.ಸಿ) ಮೂಲಕ ಹಾಗೂ ಬಾಕಿ ಉಳಿದ ಪ್ರಮಾಣವನ್ನು ಪಾರದರ್ಶಕ ಕಾಯ್ದೆಯಡಿ ಸ್ಪರ್ಧಾತ್ಮಕ ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಲು ಆದೇಶಿಸಲಾಗಿದೆ. ಮಾನ್ಯ ಸಚಿವ ಸಂಪುಟ ಅನುಮೋದನೆಯಂತೆ ಪ್ರಸ್ತುತ, ಮೊದಲನೇಯ ಸೆಟ್ (ಒಂದು ಜೊತೆ) ಉಚಿತ ಸಮವಸ್ತ್ರವನ್ನು ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿತರಿಸಬೇಕಾಗಿದೆ.

ಮೇಲೆ ಒದಲಾದ ಕ್ರಮಾಂಕ (2)ರ ಸರ್ಕಾರದ ಆದೇಶದಲ್ಲಿ " 2021-22 ನೇ ಸಾಲಿಗೆ ಕೆ.ಹೆಚ್.ಡಿ.ಸಿ ಯು ಪೂರೈಸುವ ಸಮವಸ್ತ್ರಗಳ ದರಗಳನ್ನು 2020-21ನೇ ಸಾಲಿನ ದರಗಳ ಶೇಕಡಾ 15 ರಷ್ಟು ಹೆಚ್ಚಿಸಿ ಪರಿಷ್ಕರಿಸುವುದು. 2022-23ನೇ ಸಾಲಿಗೆ 2020-21ನೇ ಸಾಲಿನ ದರಗಳ ಶೇಕಡಾ 20 ರಷ್ಟು ಹೆಚ್ಚಿಸಿ ಪರಿಷ್ಕರಿಸುವುದು ಹಾಗೂ 2023-24ನೇ ಸಾಲಿಗೆ 2020-21ನೇ ಸಾಲಿನ ದರಗಳ ಶೇಕಡಾ 25 ರಷ್ಟು ಹೆಚ್ಚಿಸಿ ಪರಿಷ್ಕರಿಸಿ ಜಿ.ಎಸ್.ಟಿ ಯನ್ನು ಪ್ರತ್ಯೇಕವಾಗಿ ನೀಡತಕ್ಕದ್ದು" ಎಂದು ಆದೇಶಿಸಲಾಗಿರುತ್ತದೆ. ಅದರಂತೆ ಶಿಕ್ಷಣ ಇಲಾಖೆ ವತಿಯಿಂದ ಒಡಂಬಡಿಕೆ ಮಾಡಲಾಗಿದೆ. ಅದರೆ, ಕ್ರಮಾಂಕ (1)ರಲ್ಲಿ ತಿಳಿಸಿರುವ ಮಾನ್ಯ ಸಚಿವ ಸಂಪುಟದ ನಿರ್ಣಯದಂತೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ(ಕೆ.ಹೆಚ್.ಡಿ.ಸಿ) ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆ.ಸ್.ಟಿ.ಐ.ಡಿ.ಸಿ) ಇವರ ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಪರಿಮಾಣವನ್ನು ನಿಗದಿಪಡಿಸಿದೆ. ಮುಂದುವರೆದು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ(ಕೆ.ಹೆಚ್.ಡಿ.ಸಿ) ಇವರಿಂದ ಸರಬರಾಜು ಮಾಡಲ್ಪಡುವ ಬಟ್ಟೆಯ ಪರಿಮಾಣಕ್ಕೆ 2022-23ನೇ ಸಾಲಿನ ಸ್ಪರ್ಧಾತ್ಮಕ ಟೆಂಡರ್‌ನಲ್ಲಿ ಹೊರಬರುವ **ದರಕ್ಕಿಂತ ಶೇಕಡಾ 15 ರಷ್ಟು** ಹೆಚ್ಚು ದರವನ್ನು ನಿಗದಿಪಡಿಸಿದೆ.

ಪ್ರಸ್ತಾವನೆಯ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 41 ಎಂಪಿಇ 2021,**

**ಬೆಂಗಳೂರು, ದಿನಾಂಕ:04.02.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23 ನೇ ಸಾಲಿಗೆ ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 10ನೇ ತರಗತಿಗಳ ಸುಮಾರು 46.37 ಲಕ್ಷ ವಿದ್ಯಾರ್ಥಿಗಳಿಗೆ ಒಂದು ಜೊತೆ ಸಮವಸ್ತ್ರವನ್ನು ವಿತರಿಸಲು ಅಂದಾಜು 132.63 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಯನ್ನು

ರೂ.93.27 ಕೋಟಿ ( ತೊಂಬತ್ಮೂರು ಕೋಟಿ ಇಪ್ಪತ್ತೇಳು ಲಕ್ಷಗಳು) ಅನುದಾನದಲ್ಲಿ ಈ ಕೆಳಕಂಡ ವಿಧಾನದಲ್ಲಿ ಖರೀದಿಸಿ ವಿತರಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವರಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

i. **ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದಿಂದ( ಕೆ.ಹೆಚ್.ಡಿ.ಸಿ) ಗರಿಷ್ಟ 50.00 ಲಕ್ಷ ಮೀಟರ್ ಬಟ್ಟೆಯನ್ನು 2022-23ನೇ ಸಾಲಿನ ಸ್ಪರ್ಧಾತ್ಮಕ ಟೆಂಡರ್‌ನಲ್ಲಿ ಹೊರಬರುವ ದರಕ್ಕಿಂತ ಶೇಕಡಾ 15 ರಷ್ಟು ಹೆಚ್ಚು ದರವನ್ನು ನಿಗಧಿಪಡಿಸಿ ಖರೀದಿಸಲು.**

**ಕರ್ನಾಟಕ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ (ಕೆ.ಎಸ್.ಟಿ.ಐ.ಡಿ.ಸಿ). ಗರಿಷ್ಟ 10.00 ಲಕ್ಷ ಮೀಟರ್ ಬಟ್ಟೆಯನ್ನು 2022-23ನೇ ಸಾಲಿನ ಸ್ಪರ್ಧಾತ್ಮಕ ಟೆಂಡರ್‌ನಲ್ಲಿ ಹೊರಬರುವ ದರಕ್ಕಿಂತ ಶೇಕಡಾ 5 ರಷ್ಟು ಹೆಚ್ಚು ದರವನ್ನು ನಿಗಧಿಪಡಿಸಿ ಖರೀದಿಸಲು.**

**2022-23ನೇ ಸಾಲಿನ ಸ್ಪರ್ಧಾತ್ಮಕ ಟೆಂಡರ್ ಪ್ರಕ್ರಿಯೆಯಿಂದ ಹೊರಬರುವ ಕನಿಷ್ಠತಮ ದರಗಳಲ್ಲಿ ಅಂದಾಜು 72.63 ಲಕ್ಷ ಮೀಟರ್ ಪ್ರಮಾಣವನ್ನು 30 ದಿವಸಗಳ ಸ್ಪರ್ಧಾತ್ಮಕ ಟೆಂಡರ್ ಕರೆದು ಖರೀದಿಸಲು.**

ದರಿ ಅನುದಾನವನ್ನು **2022-23ನೇ ಸಾಲಿನ** ಆಯವ್ಯಯದಲ್ಲಿ ವಿದ್ಯಾ ವಿಕಾಸ ಯಡಿ ಲೆಕ್ಕ **ಶೀರ್ಷಿಕೆ:2202-01-109-0-03-221/422/423ರಡಿ** ಬಿಡುಗಡೆ ಗುವ ಅನುದಾನದಿಂದ ಭರಿಸತಕ್ಕದ್ದು.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಸಂಬಂಧಿಸಿದ ಸಂಸ್ಥೆಗಳೊಂದಿಗೆ ರ ಬಟ್ಟೆಯ ಪರಿಮಾಣ ಮತ್ತು ದರಗಳಿಗೆ ಸಂಬಂಧಿಸಿದಂತೆ ಒಡಂಬಡಿಕೆ ಳ್ಳತಕ್ಕದ್ದು.

ದರಿ ಕಾರ್ಯಕ್ರಮದ ಅಡಿಯಲ್ಲಿ ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಮ-1999 ಮತ್ತು ಅದರಡಿಯಲ್ಲಿ ಹೊರಡಿಸಲಾದ ನಿಯಮಗಳನ್ನು ಚಾಚೂ ತಪ್ಪದೇ ಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಸತಕ್ಕದ್ದು ಹಾಗೂ ಅದರನ್ವಯ ಭರಿಸಲಾಗುವ ವೆಚ್ಚದ ವಿವರಗಳನ್ನು ಪ್ರತಿ ಮಾಹೆ ಹೊಸ

ಡಿಸಿಶನ್ ಸಪೋರ್ಟ್ ಸಿಸ್ಟಂ (New Decision Supportive System) (ಅವಲೋಕನ) ತಂತ್ರಾಂಶದಲ್ಲಿ ಇಂದೀಕರಿಸತಕ್ಕದ್ದು.

ಸಮವಸ್ತ್ರದ ಬಟ್ಟೆಯ ಗುಣಮಟ್ಟದಲ್ಲಿ ರಾಜಿಯಾಗದಂತೆ ಎಚ್ಚರವಹಿಸತಕ್ಕದ್ದು.

2022–23ನೇ ಶೈಕ್ಷಣಿಕ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಮೊದಲನೇಯ ಸೆಟ್ ಉಚಿತ ಸಮವಸ್ತ್ರವನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಸರಬರಾಜು ಮಾಡತಕ್ಕದ್ದು.

ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರು ಸೂಕ್ತ ಲೆಕ್ಕ ಪತ್ರಗಳನ್ನು ಇಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 531 ವೆಚ್ಚ–8/2021, ದಿನಾಂಕ:21.12.2021ರಲ್ಲಿ ಹೊರಡಿಸಲಾದ ಸಹಮತದನ್ವಯ ಮತ್ತು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ; ಎಫ್.ಡಿ 01 ಟಿ.ಎಫ್.ಪಿ 2021, ದಿನಾಂಕ:31.12.2021 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ

04.02.202

(ಎಸ್.ಆರ್.ಎಸ್.ನಾಥನ್)

ವಿಶೇಷಾಧಿಕಾರಿ ಮತ್ತು ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

**ಇವರಿಗೆ ,**

1.ಮಹಾಲೇಖಪಾಲರು, (ಅಡಿಟ್ 1 & 2 ) ಕರ್ನಾಟಕ, ಬೆಂಗಳೂರು.

2.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃಧಿ ಆಯುಕ್ತರು ಕರ್ನಾಟಕ ಸರ್ಕಾರ, ಬೆಂಗಳೂರು.

3.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

4.ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

5.ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಬೆಂಗಳೂರು.

6.ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.

7.ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರಗಿ ವಿಭಾಗ.

8.ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

9.ನಿರ್ದೇಶಕರು (ಪ್ರಾಥಮಿಕ ಶಿಕ್ಷಣ/ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

10.ನಿರ್ದೇಶಕರು, ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.

11.ಜಂಟಿ ನಿರ್ದೇಶಕರು(ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

12.ಸರ್ಕಾರದ ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

13.ಸಾಪ್ತಾಹಿಕ ರಾಜ್ಯ ಪತ್ರ/ಶಾಖಾರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ.**

1.ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.

2.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು

3.ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

310

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2019-20ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಬಾಲಕ-ಬಾಲಕಿಯರಿಗೆ ಉಚಿತವಾಗಿ ಬೈಸಿಕಲ್‌ಗಳನ್ನು ವಿತರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ:ಇಡಿ 11 ಯೋಯೋಕ 2019, ದಿನಾಂಕ:28.02.2019

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಯೋ-10/ಉ.ಬೈ.ವಿ.ಯೋ.2019-20/ಟೆಂ-03/2018-19.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ರ ಸರ್ಕಾರದ ಆದೇಶದಲ್ಲಿ 2019-20ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯ ಬಾಲಕ-ಬಾಲಕಿಯರಿಗೆ ಇದರಲ್ಲಿ ವಸತಿ ಶಾಲೆಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡೇತರ ವಿದ್ಯಾರ್ಥಿನಿಲಯದ ಮಕ್ಕಳು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳು ಮತ್ತು ಬಸ್ ಪಾಸ್ ಹೊಂದಿರುವ ಮಕ್ಕಳನ್ನು ಹೊರತು ಪಡಿಸಿ, ಆದರೆ ಗುಡ್ಡಗಾಡು ಪ್ರದೇಶದ ಬಸ್‌ಪಾಸ್ ಹೊಂದಿರುವ ಮಕ್ಕಳನ್ನು ಒಳಗೊಂಡಂತೆ ಒಟ್ಟು 5.04 ಲಕ್ಷ ಅರ್ಹ ಮಕ್ಕಳಿಗೆ ಉಚಿತ ಬೈಸಿಕಲ್ ವಿತರಿಸುವ ಕಾರ್ಯಕ್ರಮ ಅನುಷ್ಠಾನಗೊಳಿಸುವ ಸಂಬಂಧ ಸರಬರಾಜುದಾರರ ಆಯ್ಕೆಗಾಗಿ 60 ದಿನಗಳ ಇ-ಟೆಂಡರ್ ಕರೆಯಲು ಸರ್ಕಾರದ ಅನುಮತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2) ರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕ ಕಡತದಲ್ಲಿ 2019-20ನೇ ಸಾಲಿನ ಬೈಸಿಕಲ್ ಖರೀದಿಗೆ ಫೆಬ್ರವರಿ-2019 ರಲ್ಲಿ ರಾಜ್ಯ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸ್ಪರ್ಧಾತ್ಮಕ ಟೆಂಡರ್ ಕರೆಯಲಾಗಿದ್ದು, ಅರ್ಹತಾ ನಿಯಮಗಳು, ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ನಿಗದಿತ ಮಾದರಿ, ವಿತರಣೆ ಪೂರ್ವ ಮತ್ತು ವಿತರಣೆ ನಂತರದ ಗುಣಮಟ್ಟ ಪರೀಕ್ಷೆಗಳು ಮತ್ತು ಬಿಲ್ಲುಗಳ ಪಾವತಿ ಒಳಗೊಂಡಂತೆ ಇತರೆ ಷರತ್ತುಗಳನ್ನು 2016-17ನೇ ಸಾಲಿನ ಟೆಂಡರ್‌ನಲ್ಲಿ ಅಳವಡಿಸಿಕೊಂಡಿದ್ದಂತೆ ಪ್ರಸಕ್ತ ಸಾಲಿನಲ್ಲಿಯೂ ಮುಂದುವರೆಸಲಾಗಿದೆ. ಟೆಂಡರ್‌ನಲ್ಲಿ 2 ಸರಬರಾಜು ಕಂಪನಿಗಳು ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿದ್ದು, ಈ ಕೆಳಕಂಡಂತೆ ಕನಿಷ್ಠ ದರಗಳನ್ನು ನಮೂದಿಸಿರುತ್ತಾರೆ.

| ಕ್ರಸಂ | ಸರಬರಾಜು ಸಂಸ್ಥೆ | ಬಾಲಕಿಯರ ಬೈಸಿಕಲ್ ದರ(ರೂ.ಗಳಲ್ಲಿ) | ಬಾಲಕರ ಬೈಸಿಕಲ್ ದರ(ರೂ.ಗಳಲ್ಲಿ) |
|---|---|---|---|
| 3. | ಮೆ: ಹೀರೋ ಸೈಕಲ್ಸ್ ಲಿಮಿಟೆಡ್, ಲೂಧಿಯಾನ | 3990 | 3776 |
| 2. | ಮೆ: ಏವನ್ ಸೈಕಲ್ಸ್ ಲಿಮಿಟೆಡ್, ಲೂಧಿಯಾನ | 3998 | 3766 |

ಮೇಲ್ಕಂಡ ಎರಡು ಸರಬರಾಜು ಸಂಸ್ಥೆಗಳು ಹಿಂದಿನ ಸಾಲಿಗಿಂತ ಹೆಚ್ಚಿನ ದರ ನಮೂದಿಸಿರುವುದರಿಂದ ಮಾನ್ಯ ಆಯುಕ್ತರು ಸದರಿ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ದರ ಸಂಧಾನ ಸಭೆ ನಡೆಸಿರುತ್ತಾರೆ ಸದರಿ ದರ ಸಂಧಾನ ಪ್ರಸ್ತಾಪಕ್ಕೆ ಸರಬರಾಜು ಸಂಸ್ಥೆಗಳ ಮುಖ್ಯಸ್ಥರು ಒಪ್ಪಿಗೆ ಸೂಚಿಸಿ ಹೊಸ ದರದ ಪಟ್ಟಿಯನ್ನು ನೀಡಿರುತ್ತಾರೆ. ಅದರನ್ವಯ 2019-20ನೇ ಸಾಲಿಗೆ ಸರಬರಾಜು ಮಾಡಲಿರುವ ಬೈಸಿಕಲ್‌ದರ ಈ ಕೆಳಕಂಡಂತಿರುತ್ತದೆ.

.....2

PRS

Scanned with CamScanner

[redacted]



**2019-20ನೇ ಸಾಲಿಗೆ ದರ ಸಂಧಾನದ ಮೂಲಕ ನಿಗದಿಪಡಿಸಿರುವ ಪ್ರತಿ ಬೈಸಿಕಲ್ ದರ**

| ಕ್ರಸಂ | ಸರಬರಾಜು ಸಂಸ್ಥೆ | ಬೈಸಿಕಲ್ ವಿಧ | ದರ (ರೂ.ಗಳಲ್ಲಿ) |
|---|---|---|---|
| 1. | ಮೆ: ಹೀರೋ ಸೈಕಲ್ಸ್ ಲಿಮಿಟೆಡ್, ಲೂಧಿಯಾನ | ಬಾಲಕಿಯರ ಬೈಸಿಕಲ್ | 3850 |
| 2. | ಮೆ: ಏವನ್ ಸೈಕಲ್ಸ್ ಲಿಮಿಟೆಡ್, ಲೂಧಿಯಾನ | ಬಾಲಕರ ಬೈಸಿಕಲ್ | 3626 |

ಈ ದರವು ಎಲ್ಲಾ ತೆರಿಗೆಗಳು, ಜೋಡಣಾ ವೆಚ್ಚ ಮತ್ತು ಶಾಲಾ ಹಂತದ ವರೆಗಿನ ಸಾಗಾಣಿಕೆ ವೆಚ್ಚ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಮೇಲಿನ ಪರಿಷ್ಕೃತ ದರಗಳಂತೆ, ಸದರಿ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಲು ಅನುಮತಿ ನೀಡುವಂತೆ ಆಯುಕ್ತರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 11 ಯೋಯೋಕ 2019, ಬೆಂಗಳೂರು, ದಿನಾಂಕ 25.05.2019**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20ನೇ ಸಾಲಿಗೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯ ಬಾಲಕ-ಬಾಲಕಿಯರಿಗೆ ಇದರಲ್ಲಿ ವಸತಿ ಶಾಲೆಗಳು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡೇತರ ವಿದ್ಯಾರ್ಥಿನಿಲಯದ ಮಕ್ಕಳು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳು ಮತ್ತು ಬಸ್ ಪಾಸ್ ಹೊಂದಿರುವ ಮಕ್ಕಳನ್ನು ಹೊರತುಪಡಿಸಿ, ಆದರೆ ಗುಡ್ಡಗಾಡು ಪ್ರದೇಶದ ಬಸ್‌ಪಾಸ್ ಹೊಂದಿರುವ ಮಕ್ಕಳನ್ನು ಒಳಗೊಂಡಂತೆ 5.04 ಲಕ್ಷ ಅರ್ಹ ಫಲಾನುಭವಿ ಬಾಲಕ-ಬಾಲಕಿಯರಿಗೆ ಅಂದಾಜು ರೂ.189.00 ಕೋಟಿ ವೆಚ್ಚದಲ್ಲಿ ಉಚಿತವಾಗಿ ಬೈಸಿಕಲ್‌ಗಳನ್ನು ಈ ಕೆಳಕಂಡ ಷರತ್ತುಗಳನ್ವಯ ವಿತರಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

**ಷರತ್ತುಗಳು:-**

(i) 2019-20ನೇ ಸಾಲಿಗೆ ಗಂಡು ಮಕ್ಕಳ ಬೈಸಿಕಲ್ ದರ **ರೂ.3626.00** ಹಾಗೂ ಹೆಣ್ಣು ಮಕ್ಕಳ ಬೈಸಿಕಲ್ ದರ **ರೂ.3850.00** ರಂತೆ ಖರೀದಿಸತಕ್ಕದ್ದು.

(ii) 2019-20ನೇ ಸಾಲಿಗೆ ಅಗತ್ಯವಾದ 5.04 ಲಕ್ಷ ಬೈಸಿಕಲ್ ಸರಬರಾಜನ್ನು ಟೆಂಡರ್‌ನಲ್ಲಿ ಆಯ್ಕೆಗೊಂಡು, ಸಂಧಾನಿತ ಕನಿಷ್ಠ ದರ ಒಪ್ಪಿಕೊಂಡ ಅರ್ಹ ಎರಡು ಸಂಸ್ಥೆಗಳಿಗೆ ಈ ಕೆಳಕಂಡ ಸಂಖ್ಯೆಯಲ್ಲಿ ಬೈಸಿಕಲ್‌ಗಳನ್ನು ಹಂಚಿಕೆ ಮಾಡಿ ಕಾರ್ಯಾದೇಶ ನೀಡತಕ್ಕದ್ದು.

| ಕ್ರಸಂ | ಸರಬರಾಜು ಸಂಸ್ಥೆ | ಬೈಸಿಕಲ್ ವಿಧ | ಹಂಚಿಕೆ ಮಾಡಬೇಕಾದ ಬೈಸಿಕಲ್ ಸಂಖ್ಯೆ |
|---|---|---|---|
| 1. | ಮೆ: ಹೀರೋ ಸೈಕಲ್ಸ್ ಲಿಮಿಟೆಡ್, ಲೂಧಿಯಾನ | ಬಾಲಕಿಯರ ಬೈಸಿಕಲ್ | 2,44,901 |
| 2. | ಮೆ: ಏವನ್ ಸೈಕಲ್ಸ್ ಲಿಮಿಟೆಡ್, ಲೂಧಿಯಾನ | ಬಾಲಕರ ಬೈಸಿಕಲ್ | 2,59,624 |
| | ಒಟ್ಟು | | **5,04,525** |

(iii) 2019-20ನೇ ಶೈಕ್ಷಣಿಕ ಸಾಲಿನ ನಿರ್ದಿಷ್ಟ ದಾಖಲಾತಿಗೆ ಅನುಗುಣವಾಗಿ ಶಾಲಾವಾರು ಬೇಡಿಕೆ ಪ್ರಮಾಣ ಮತ್ತು ಒಟ್ಟಾರೆ ಬೇಡಿಕೆ ಪ್ರಮಾಣವನ್ನು ಹೊಂದಿಸಿಕೊಳ್ಳತಕ್ಕದ್ದು. ಒಂದುವೇಳೆ ಫಲಾನುಭವಿಗಳ ಸಂಖ್ಯೆ 5.04 ಲಕ್ಷಕ್ಕಿಂತ ಹೆಚ್ಚಾಗಿದ್ದಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆಯತಕ್ಕದ್ದು.

..3

Scanned with CamScanner

(iv) ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯದ 8ನೇ ತರಗತಿ ಮಕ್ಕಳಿಗೆ ಉಚಿತ ಬೈಸಿಕಲ್ ವಿತರಿಸುವ ಸಂದರ್ಭದಲ್ಲಿ, ಸಮಾಜ ಕಲ್ಯಾಣ ಇಲಾಖೆಯ ಅಧೀನದ ವಿದ್ಯಾರ್ಥಿನಿಲಯಗಳಲ್ಲಿ ವಾಸವಿದ್ದು, ಸರ್ಕಾರಿ ಅಥವಾ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ಮಕ್ಕಳು ಎರಡು ಕಡೆ ಉಚಿತ ಬೈಸಿಕಲ್‌ಗಳನ್ನು ಪಡೆದಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು, ಅಂದರೆ, ಇಂತಹ ಸಂದರ್ಭಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವಾಸವಿರುವ ವಿದ್ಯಾರ್ಥಿನಿಲಯ ಅಥವಾ ವ್ಯಾಸಂಗ ಮಾಡುತ್ತಿರುವ ಶಾಲೆ ಯಾವುದಾದರೂ ಒಂದು ಕಡೆ ಮಾತ್ರ ಉಚಿತ ಬೈಸಿಕಲ್‌ಗಳನ್ನು ಪಡೆಯಲು ಅರ್ಹರಿರುತ್ತಾರೆ.

(v) ಈ ಸಾಲಿನಲ್ಲಿ ಹೆಣ್ಣುಮಕ್ಕಳಿಗೆ ಮೆಟ್ಯಾಲಿಕ್ ಪೆಂಟ್‌ನಿಂದ ಮಾಡಿದ ಮರೂನ್ ಬಣ್ಣದ ಹಾಗೂ ಗಂಡುಮಕ್ಕಳಿಗೆ ನೀಲಿ ಬಣ್ಣದ ಬೈಸಿಕಲ್‌ಗಳನ್ನು ಒದಗಿಸುವುದು.

(vi) ಬೈಸಿಕಲ್‌ಗಳ ತಯಾರಿಕೆ ಹಾಗೂ ವಿತರಣೆಯ ಹಂತಗಳಲ್ಲಿ (ವಿತರಣೆ ಪೂರ್ವ ಮತ್ತು ವಿತರಣೆಯ ನಂತರದ ತಪಾಸಣೆಗಾಗಿ) ಟೆಂಡರ್ ದಸ್ತಾವೇಜಿನ ಸಾಮಾನ್ಯ ಒಪ್ಪಂದದ ಷರತ್ತು 7.3 ರನ್ವಯ ಬೈಸಿಕಲ್ ಗುಣಮಟ್ಟ ತಪಾಸಣೆಯನ್ನು Research & Development Center for Bicycle & Sewing Machine, Ludhiana ಮತ್ತು ನಿರ್ದಿಷ್ಟಪಡಿಸಲಾಗುವ ಇನ್ನಿತರೆ ಪ್ರಯೋಗಾಲಯಗಳಿಂದ ಮಾಡತಕ್ಕದ್ದು. ಸದರಿ ಸಂಸ್ಥೆಗಳಿಗೆ ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ನಿಯಮ 4(ಜಿ) ಅಡಿ ವಿನಾಯಿತಿ ಪಡೆದುಕೊಳ್ಳುವುದು.

(vii) ವಲಯ ಮಟ್ಟದಲ್ಲಿ ಸಹ ನಿರ್ದೇಶಕರು, ಉಪನಿರ್ದೇಶಕರು (ಆಡಳಿತ) ಹಾಗೂ ಡಯಟ್ ಪ್ರಾಂಶುಪಾಲರನ್ನೊಳಗೊಂಡ ಸಮಿತಿಯು ಬೈಸಿಕಲ್ ಜೋಡಣಾ ಸಮಯದಲ್ಲಿ ಯಾದೃಚ್ಛಿಕವಾಗಿ (Random) ತಪಾಸಣೆ ನಡೆಸುವುದು.

(viii) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸರ್ವ ಶಿಕ್ಷಣ ಅಭಿಯಾನದ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು (ಡಿವೈಪಿಸಿ) ರವರನ್ನೊಳಗೊಂಡ ಸಮಿತಿಯು ತಪಾಸಣೆ ನಡೆಸುವುದು.

(ix) ಬೈಸಿಕಲ್‌ಗಳನ್ನು ದಾಸ್ತಾನಿಗೆ ತೆಗೆದುಕೊಳ್ಳುವ ಮೊದಲು ಗುಣಮಟ್ಟದ ಬಗ್ಗೆ ದೃಢೀಕರಿಸಲು ಶಾಲಾ ಹಂತದಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು, ಒಬ್ಬ ಸ್ಥಳೀಯ ಸರ್ಕಾರಿ ಸಿಬ್ಬಂದಿ ಹಾಗೂ ಶಾಲಾ ಮುಖ್ಯೋಪಾಧ್ಯಾಯರನ್ನೊಳಗೊಂಡ ಸಮಿತಿಗಳನ್ನು ರಚಿಸುವುದು.

(x) ಬೈಸಿಕಲ್‌ಗಳನ್ನು ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಲಾದ ಕಾಲಾವಧಿಯನ್ನು ಮತ್ತು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಬೈಸಿಕಲ್‌ಗಳ ವಿತರಣೆ, ಗುಣಮಟ್ಟ, ಟೆಂಡರ್ ನಿಯಮಗಳನ್ನು ಪಾಲಿಸದೇ ಇದ್ದಲ್ಲಿ, ವಿಧಿಸಬಹುದಾದ ದಂಡ ಇತ್ಯಾದಿಗಳನ್ನು ಒಳಗೊಂಡಂತೆ ಸೂಕ್ತ ಕರಾರು ಮಾಡಿಕೊಳ್ಳತಕ್ಕದ್ದು.

(xi) ಬೈಸಿಕಲ್ ಟೆಂಡರ್ ದಸ್ತಾವೇಜಿನ ಸಾಮಾನ್ಯ ಷರತ್ತುಗಳಲ್ಲಿ ಸೂಚಿಸಿರುವಂತೆ ಬೈಸಿಕಲ್‌ಗಳ ಬಾಳಿಕೆ ಹೆಚ್ಚಿಸಲು ವಿತರಣೆಯ ನಂತರ 3 ತಿಂಗಳ ಒಳಗೆ ಬೈಸಿಕಲ್‌ಗಳಿಗೆ ಉಚಿತ ಸರ್ವಿಸ್ ಕ್ಯಾಂಪ್ ನಡೆಸುವುದು ಹಾಗೂ ಪ್ರತಿ ಶಾಲೆಗೆ ಒಂದು ಉಚಿತ ಟೂಲ್‌ಕಿಟ್ ಒದಗಿಸತಕ್ಕದ್ದು.

(xii) ಸರಬರಾಜು ಮಾಡಲಾದ ಬೈಸಿಕಲ್‌ಗಳ ISI ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳತಕ್ಕದ್ದು.

...4

Scanned with CamScanner

(xiii)ಆಯಾ ಶಾಲೆಗೆ ಮಕ್ಕಳ ಸಂಖ್ಯೆಗೆ ಸರಿಯಾಗಿ ಬೈಸಿಕಲ್‌ಗಳು ವಿತರಣೆಯಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು. ಯಾವುದೇ ಪರಿಸ್ಥಿತಿಯಲ್ಲಿಯೂ ಆಯಾ ಶಾಲೆಯಲ್ಲಿರುವ 8ನೇ ತರಗತಿ ಮಕ್ಕಳ ಸಂಖ್ಯೆಗಿಂತ ಹೆಚ್ಚಾಗಿ ಬೈಸಿಕಲ್‌ಗಳನ್ನು ವಿತರಿಸಕೂಡದು.

ಈ ಉದ್ದೇಶಕ್ಕಾಗಿ ಸಂಬಂಧಿಸಿದ ವೆಚ್ಚವನ್ನು 2019-20ನೇ ಸಾಲಿನ 'ವಿದ್ಯಾವಿಕಾಸ' ಯೋಜನೆಯ ಆಯವ್ಯಯ ಲೆಕ್ಕ ಶೀರ್ಷಿಕೆ:2202-01-109-0-03-221/422/423 ರಡಿ ತ್ರೈಮಾಸಿಕವಾರು ಬಿಡುಗಡೆ ಮಾಡಲಾಗುವ ಅನುದಾನದಲ್ಲಿ ಭರಿಸತಕ್ಕದ್ದು.

ಸಮಾಜಕಲ್ಯಾಣ ಇಲಾಖೆ ಅಧೀನದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳಲ್ಲಿ ವಾಸವಿದ್ದು, ಸರ್ಕಾರಿ ಅಥವಾ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಉಚಿತ ಬೈಸಿಕಲ್ ವಿತರಿಸಲು ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ:2202-02-001-0-09/422/423 ರಡಿ ಭರಿಸಲು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ರಾಜ್ಯ ಪರಿಷತ್ ಅನುಮೋದಿಸಿದಲ್ಲಿ ಸದರಿ ಲೆಕ್ಕ ಶೀರ್ಷಿಕೆಯಿಂದಲೇ ಭರಿಸತಕ್ಕದ್ದು.

ಭರಿಸಲಾದ ವೆಚ್ಚಕ್ಕೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸೂಕ್ತ ಲೆಕ್ಕಪತ್ರಗಳನ್ನು ಇಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 71 ವೆಚ್ಚ-8 2019, ದಿನಾಂಕ:01.02.2019 ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2019, ದಿನಾಂಕ:03.04.2019 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

25/4/19

(ಎಸ್.ಆರ್.ಎಸ್.ನಾಥನ್)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಆಡಿಟ್ 1 & 2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
6. ನಿರ್ದೇಶಕರು, (ಪ್ರಾಥಮಿಕ) & (ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
8. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್‌ರಸ್ತೆ, ಬೆಂಗಳೂರು.

...5

PRS

Scanned with CamScanner

೨೭

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು

ಸಂಖ್ಯೆ:ಸಿ4(6)ಉಬೈವಿ/2023-24/34/2022-23. ದಿನಾಂಕ: 07/09/2022.

ರವರಿಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-01.

ಸ್ವೀಕರಿಸಿದೆ
ದಿನಾಂಕ:
ಸಹಿ 13/09/2022
ಶಿಕ್ಷಣ ಇಲಾಖೆ (ಪ್ರಾಥಮಿಕ ಶಾಖೆ)

ಮಾನ್ಯರೆ,

ವಿಷಯ: 2023-24ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಬಾಲಕ-ಬಾಲಕಿಯವರಿಗೆ ಉಚಿತವಾಗಿ ಬೈಸಿಕಲ್‌ಗಳನ್ನು ವಿತರಿಸಲು ಅನುಮತಿ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ ಇಡಿ 11 ಯೋಯೋಕ 2019, ದಿನಾಂಕ:28/02/2019.

* * * * *

2019-20ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8ನೇ ತರಗತಿಯ ಎಲ್ಲಾ ಮಕ್ಕಳಿಗೆ (ವಸತಿ ಶಾಲೆಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡೇತರ ವಿದ್ಯಾರ್ಥಿನಿಯಲದ ಮಕ್ಕಳು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳಲ್ಲಿನ ಮಕ್ಕಳು ಮತ್ತು ಬಸ್ ಪಾಸ್ ಹೊಂದಿರುವ ಮಕ್ಕಳನ್ನು ಹೊರತುಪಡಿಸಿ) ಆದರೆ ಗುಡ್ಡಗಾಡು ಪ್ರದೇಶದಲ್ಲಿ ಬಸ್ ಹತ್ತುವ ಸಲುವಾಗಿ ದೂರ ನಡೆದುಕೊಂಡು ಬರುವಂತಹ ಬಸ್ ಪಾಸ್ ಹೊಂದಿರುವ ವಿದ್ಯಾರ್ಥಿಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧೀನದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳಲ್ಲಿ ವಾಸವಿದ್ದು, ಸರ್ಕಾರಿ ಅಥವಾ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್‌ಗಳನ್ನು ವಿತರಿಸಲಾಗಿತ್ತು.

2020-21 ಹಾಗೂ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19ರ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಸದರಿ ವರ್ಷಗಳಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿದ್ದ/ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್‌ಗಳನ್ನು ವಿತರಣೆ ಮಾಡಿರುವುದಿಲ್ಲ. ಈ ಸಂಬಂಧ ಸಾರ್ವಜನಿಕರಿಂದ, ವಿದ್ಯಾರ್ಥಿಗಳಿಂದ ಬಹಳ ಬೇಡಿಕೆಗಳು ಬರುತ್ತಿದ್ದು, ಸದರಿ ವಿದ್ಯಾರ್ಥಿಗಳು 2022-23ನೇ ಸಾಲಿನಲ್ಲಿ ಕ್ರಮವಾಗಿ 9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡಲಿದ್ದು, ಈ ವಿದ್ಯಾರ್ಥಿಗಳು ಉಚಿತ ಬೈಸಿಕಲ್ ಯೋಜನೆಯಿಂದ ವಂಚಿತರಾಗಿರುವುದರಿಂದ, ಅವರಿಗೂ ಸಹ ಉಚಿತ ಬೈಸಿಕಲ್ ನೀಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 8, ನೇ ತರಗತಿಯ ಎಲ್ಲಾ ಮಕ್ಕಳಿಗೆ (ವಸತಿ ಶಾಲೆಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡೇತರ ವಿದ್ಯಾರ್ಥಿ ನಿಯಲದ ಮಕ್ಕಳು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳಲ್ಲಿನ ಮಕ್ಕಳು ಮತ್ತು ಬಸ್ ಪಾಸ್ ಹೊಂದಿರುವ ಮಕ್ಕಳನ್ನು ಹೊರತುಪಡಿಸಿ) ಆದರೆ ಗುಡ್ಡಗಾಡು ಪ್ರದೇಶದಲ್ಲಿ ಬಸ್ ಹತ್ತುವ ಸಲುವಾಗಿ ದೂರ

Scanned with CamScanner



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯ ಮಂತ್ರಿಗಳು

# ತಿಂಗಳ ತಿರುಳು

## ಸಾರ್ವಜನಿಕ ಶಿಕ್ಷಣ ಇಲಾಖೆ

ನಾಡಿನ ಸಮಸ್ತ ಮಕ್ಕಳಿಗೆ "ಮಕ್ಕಳ ದಿನಾಚರಣೆ" ಯ ಹಾರ್ದಿಕ ಶುಭಾಶಯಗಳು



ಶ್ರೀ ಎಸ್. ಸುರೇಶ್ ಕುಮಾರ್
ಶಿಕ್ಷಣ ಸಚಿವರು

- ದಿನಾಂಕ : 01.11.2019 : ಕನ್ನಡ ರಾಜ್ಯೋತ್ಸವ
- ದಿನಾಂಕ : 10.11.2019 : ರಾಜ್ಯಮಟ್ಟದ ಕ್ರೀಡಾಕೂಟ
- ದಿನಾಂಕ : 13.11.2019 : ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಮತ್ತು ನಾಟಕ ಸ್ಪರ್ಧೆ
- ದಿನಾಂಕ : 14.11.2019 : ಮಕ್ಕಳ ದಿನಾಚರಣೆ
- ದಿನಾಂಕ : 15.11.2019 : ಕನಕದಾಸ ಜಯಂತಿ



- ದಿನಾಂಕ : 01.12.2019 : ವಿಶ್ವ ಏಡ್ಸ್ ದಿನಾಚರಣೆ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು.
- ದಿನಾಂಕ : 03.12.2019 : ವಿಶ್ವ ವಿಕಲಚೇತನರ ದಿನಾಚರಣೆ: ಸಮನ್ವಯ ಶಿಕ್ಷಣದ ಪರಿಕಲ್ಪನೆಯ ಅರಿವು ಮೂಡಿಸುವುದು.
- ದಿನಾಂಕ : 06.12.2019 ರಿಂದ 08.12.2019 : ಮೂರನೇ ರೂಪಣಾತ್ಮಕ ಮೌಲ್ಯಮಾಪನ





- ದಿನಾಂಕ : 12.01.2020 : ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ.
- ದಿನಾಂಕ : 26.01.2020 : ಗಣರಾಜ್ಯೋತ್ಸವ ದಿನಾಚರಣೆ



**ಸಮಗ್ರ ಶಿಕ್ಷಣ ಕರ್ನಾಟಕ**

ಎಲ್ಲರೂ ಕಲಿಯೋಣ-ಎಲ್ಲರೂ ಬೆಳೆಯೋಣ





ಹೆಚ್ಚಿನ ವಿವರಗಳಿಗೆ ಇಲಾಖೆ ವೆಬ್‌ಸೈಟ್ ನೋಡಿ: www.schooleducation.kar.nic.in www.ssakarnataka.gov.in

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಶಿಕ್ಷಣವಾರ್ತೆ

ಸಂಪುಟ-23, ಸಂಚಿಕೆ-9, ಫೆಬ್ರವರಿ - 2023, ಆಂತರಿಕ ಪ್ರಸಾರ



ಅನುಬಂಧ -1

**ಸಮಗ್ರ ಶಿಕ್ಷಣ ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಚೇರಿಗಳ ಪೂರಕ ಕಟ್ಟಡ,ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಶಾ.ಶಿ.ಮ.ಸಾ.ಇ/ಮಾ & ದಾ/ ಆ.ಕ.ಪ/2022-23 ದಿನಾಂಕ: 06.03.2023

ಇವರಿಗೆ,
ಕಾನೂನು ಕೋಶದ ಮುಖ್ಯಸ್ಥರು ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ(ಪ್ರ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.
ಬಹು ಮಹಡಿ ಕಟ್ಟಡ, ಬೆಂಗಳೂರು.

ಮಾನ್ಯರೆ,

ವಿಷಯ:- ಸಮಗ್ರ ಶಿಕ್ಷಣ ಕರ್ನಾಟಕವತಿಯಿಂದ ಜಾರಿಗೊಳಿಸಲಾಗಿರುವ ವಿವಿಧ ಯೋಜನೆಗಳ ಮಾಹಿತಿ ನೀಡುತ್ತಿರುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ: ಇಡಿ 35ಕಾಕೋ 2023 ದಿನಾಂಕ 28.02.2023.

~*~'*'~*~

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಸಮಗ್ರ ಶಿಕ್ಷಣ ಕರ್ನಾಟಕವತಿಯಿಂದ ಜಾರಿಗೊಳಿಸಲಾಗಿರುವ ವಿವಿಧ ಯೋಜನೆಗಳು ವಿವಿಧ ಹಂತಗಳಲ್ಲಿ ರಾಜ್ಯದಾದ್ಯಂತೆ ಜಾರಿಗೊಳಿಸಲಾಗಿದ್ದು, ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹಾಗೂ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪೂರಕವಾದ ಆದೇಶಗಳನ್ನು ಹಾಗೂ ಸುತ್ತೋಲೆಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

**ಯೋಜನೆಗಳ ವಿವರ :-**

1. ಕೆ.ಜಿ.ಬಿ.ವಿ ಟೈಪ್-1 ವಿದ್ಯಾರ್ಥಿನಿಯರ ವಸತಿ ಶಾಲೆ.

1A. ಕೆ.ಜಿ.ಬಿ.ವಿ ಟೈಪ್-4 ವಿದ್ಯಾರ್ಥಿನಿಯರ ವಸತಿ ಶಾಲೆ.(ಕಸ್ತೂರ ಬಾ ಗಾಂಧಿ ವಸತಿ ಶಾಲೆ).

2. ವಿಶೇಷ ಅಗತ್ಯತೆಯುಳ್ಳ ಮಕ್ಕಳ **ಸಮನ್ವಯ ಶಿಕ್ಷಣ.**
3. ಎನ್.ಎಸ್.ಕ್ಯು.ಎಫ್ ಯೋಜನೆ (ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು).
4. ದ್ವಿಭಾಷ ಮಾಧ್ಯಮ ತರಗತಿಗಳು (ಕನ್ನಡ ಮಾಧ್ಯಮದ ಜೊತೆ ಆಂಗ್ಲ ಮಾಧ್ಯಮ ತರಗತಿಗಳು).
5. ಮಾದರಿ ಶಾಲೆಗಳು (ಅರ್ದಶ ವಿದ್ಯಾಲಯಗಳು ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್ ಗಳಲ್ಲಿ ರಾಷ್ಟ್ರೀಯ ಪುರಸ್ಕೃತ ಯೋಜನೆಯಾಡಿಯಲ್ಲಿ).
6. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶಾಲಾನುದಾನ ಬಿಡುಗಡೆ.
7. ಸಮಗ್ರ ಶಿಕ್ಷಣ ಕರ್ನಾಟಕದ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಯೋಜನೆಗಳ ವ್ಯಾಪಕ ಪ್ರಚಾರಕ್ಕಾಗಿ ಕೋವಿಡ್-19 ರ ಪೂರ್ವದಲ್ಲಿ **ತಿಂಗಳ ತಿರುಳು** ಜಾಹಿರಾತು ಫಲಕಗಳನ್ನು ರಾಜ್ಯದ ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿ ಮಾಹೆ ಇಲಾಖೆಯಿಂದ ಪ್ರಕಟಿಸಲಾಗಿತ್ತು.
8. ಇಲಾಖೆಯಲ್ಲಿ ಹಾಗೂ ವಿವಿಧ ಹಂತಗಳಲ್ಲಿ ನಡೆಯುವ ಇಲಾಖಾ ಕಾರ್ಯಕ್ರಮಗಳ ಕಿರು ಚಿತ್ರಣವನ್ನು ಪ್ರತಿಬಿಂಬಿಸುವ ಕಿರು ಹೊತ್ತಿಗೆ- **ಶಿಕ್ಷಣ ವಾರ್ತೆ** ಮಾಸಿಕ ಪತ್ರಿಕೆ ಇಲಾಖೆಯಿಂದ ಪ್ರಕಟಿಸಲಾಗುತ್ತಿದೆ.
9. ಕರ್ನಾಟಕ ಪಬ್ಲಿಕ್ ಶಾಲೆಗಳು.

ಈ ಮೇಲ್ಕಂಡ ಎಲ್ಲಾ ಯೋಜನೆಗಳು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಾಗಿರುತ್ತವೆ.

**ವಂದನೆಗಳೊಂದಿಗೆ**

ತಮ್ಮ ವಿಶ್ವಾಸಿ

ನಿರ್ದೇಶಕರು (ಕಾರ್ಯಕ್ರಮ)
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು